ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

22 ಜೂನ್ 2016 ಪುಟ 20 ರೂ. 15/-



ಅಪರೂಪದ ಕವಯತ್ರಿ ಸಾರಾ ಶಗುಪ್ತಾ

ಬಿಜೆಪಿ ಬಲೆಗೆ ಬಿದ್ದಳೆ ಅನುಪಮಾ?





ಬಳ್ಳಾರಿ ರಿಪಬ್ಲಿಕ್‌ನ 'ಪರಮ' ಡಿಕ್ಟೇಟರ್

ದಕ್ಷಿಣ ಪದವೀಧರ ಕ್ಷೇತ್ರ




ತೆನೆಗೆ ಕೈಇಟ್ಟ ಕಮಲ






ಉತ್ತರ ಕನ್ನಡ

ಯಡ್ಡಿ ಪಡೆಯಲ್ಲಿ ಅನಂತ ಮಾಣಿ ಆತಂಕದಲ್ಲಿ ಕಾಗೇರಿ ಮಾಣಿ






ಅವಕಾಶವಾದಿ ಬಚ್ಚನ್



ಸಿದ್ದರಾಮಯ್ಯನವರ ಸರ್ಕಾರದ ಅತೀ ದೊಡ್ಡ ತಪ



ಡಾ.ವಾಸು ಎಚ್.ವಿ.


ಈ ಶೀರ್ಷಿಕೆ ಕೊಟ್ಟು ಬರೆಯಬೇಕೆಂದುಕೊಂಡಿದ್ದು, ಸರ್ಕಾರೀ ಶಾಲೆಗಳ ವಿಲೀನವೆಂಬ ಕುತಂತ್ರದ ಕುರಿತು. ಆದರೆ, ಅಂತಿಮವಾಗಿ ಬರೆಯಲು ಆರಂಭಿಸುವ ಹೊತ್ತಿಗೆ, ಸರ್ಕಾರವು ಆ ಆದೇಶವನ್ನು ಹಿಂತೆಗೆದುಕೊಂಡಿದೆ. ಹಾಗಾಗಿ ಶೀರ್ಷಿಕೆಯನ್ನು ಬದಲಿಸೋಣವೇ ಎಂಬ ಯೋಚನೆ ಬಂದಿತು. ವಾಸ್ತವದಲ್ಲಿ ಕಳೆದ 20 ವರ್ಷಗಳಿಂದ ಸರ್ಕಾರೀ ಶಾಲೆಗಳನ್ನು ಕೊಲ್ಲುವ ಕೆಲಸ ನಿರಾತಂಕವಾಗಿ ಮತ್ತು ನಿರಂತರವಾಗಿ ನಡೆಯುತ್ತಾ ಬಂದಿರುವುದು, ಸಿದ್ದರಾಮಯ್ಯ ನವರ ಸರ್ಕಾರದಲ್ಲೂ ಮುಂದುವರೆಯಿತು; ಇನ್ನು ಮುಂದಕ್ಕೂ ಮುಂದುವರೆಯುತ್ತದೆ. ಆ ಪ್ರಕ್ರಿಯೆಯ ಮೇಲೆ ಈ ಆದೇಶ ಹಿಂಪಡೆತದಿಂದ ಯಾವ ಪರಿಣಾಮವೂ ಬೀರುವುದಿಲ್ಲ.

ಶಾಲೆಗಳ ವಿಲೀನ ಎಂಬ ಮಾತು ಮೊದಲು ಕೇಳಿಬಂದದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 10ಕ್ಕಿಂತ ಕಡಿಮೆ ಮಕ್ಕಳಿದ್ದರೆ, ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ 5ಕ್ಕಿಂತ ಕಡಿಮೆ ಮಕ್ಕಳಿದ್ದರೆ ಅಂತಹ ಶಾಲೆಗಳನ್ನು ಮುಚ್ಚಲಾಗುವುದು ಎಂದು ಸರ್ಕಾರ ಘೋಷಿಸಿತ್ತು. ಅದು ಅಂದು ರಾಜ್ಯದಲ್ಲಿ ದೊಡ್ಡ ಸುದ್ದಿಯೇ ಆಗಿತ್ತು. ಹಲವು ರೀತಿಯ ಪ್ರತಿಭಟನೆಗಳು ನಡೆದಿದ್ದವು. ಈ ಅಂಕಣಕಾರನೂ ಸೇರಿದಂತೆ 19 ಜನರು ಮುಖ್ಯಮಂತ್ರಿ ಸದಾನಂದಗೌಡರು ಭಾಗಿಯಾಗಿದ್ದ ಸರ್ಕಾರದ ಅಧಿಕೃತ 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮದಲ್ಲಿ ಪ್ರತಿಭಟಿಸಿ ಬಂಧನಕ್ಕೊಳಗಾಗಿದ್ದೆವು. ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಮತ್ತು ಕರ್ನಾಟಕ ವಿದ್ಯಾರ್ಥಿ ಸಂಘಟನೆ ಗಳು ಹಮ್ಮಿಕೊಂಡಿದ್ದ ಪ್ರತಿಭಟನೆ ಅದಾಗಿತ್ತು. ನಂತರ ಎಸ್‌ಎಫ್‌ಐ ಕಾರ್ಯಕರ್ತರು ಇದೇರೀತಿ ಪ್ರತಿಭಟಿಸಿ ಲಾಠಿ ಏಟು ತಿಂದಿದ್ದರು. ಡಾ.ಯು.ಆರ್.ಅನಂತಮೂರ್ತಿ, ಪ್ರೊ.ಜಿ.ಎಸ್.ಶಿವರುದ್ರಪ್ಪ ಮತ್ತು ಚಂದ್ರಶೇಖರ ಕಂಬಾರರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದರು. ಹೈಕೋರ್ಟು ತಾತ್ಕಾಲಿಕ ತಡೆಯಾಜ್ಞೆಯನ್ನೂ ನೀಡಿತ್ತು. ಆಗ ಅಷ್ಟೊಂದು ರೀತಿಯ ಪ್ರತಿರೋಧ ಕಂಡಿದ್ದು, ಈಗ ಹೆಚ್ಚಿನವರು ಸುಮ್ಮನಿರುವುದು ಆಶ್ಚರ್ಯಕರವಾಗಿದೆ.

ಸರ್ಕಾರದ ವಾದವು ಆಗಲೂ, ಈಗಲೂ ಒಂದೇ ಆಗಿದೆ. 5 ಅಥವಾ ಅದಕ್ಕಿಂತ ಕಡಿಮೆ ಮಕ್ಕಳಿದ್ದರೆ, ಅಂತಹ ಶಾಲೆಗಳಲ್ಲಿ ಎಂತಹ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯ? ಕನಿಷ್ಠ 20 ಮಕ್ಕಳು ಒಂದು ತರಗತಿಯಲ್ಲಿದ್ದರೆ, ಮಕ್ಕಳೂ ಚೆನ್ನಾಗಿ ಕಲಿಯಬಹುದು. ಕೇವಲ 5 ಮಕ್ಕಳಿಗೆ ಇಬ್ಬರು ಶಿಕ್ಷಕರನ್ನು ಕೊಡುವುದು ಸರ್ಕಾರಕ್ಕೂ ಹೊರೆಯಾಗುತ್ತದೆ. ಮೇಲ್ನೋಟಕ್ಕೆ ಈ ವಾದ ಸರಿ ಎನಿಸುತ್ತದೆ. ಆದರೆ, ಈ ಶಾಲೆಗಳಲ್ಲಿ ಮುಂಚಿನಿಂದಲೂ 5 ಮಕ್ಕಳು ಮಾತ್ರ ಇದ್ದರೇ? ಕಡಿಮೆಯಾಗಿದ್ದು ಏಕೆ? ಎಂಬ ಪ್ರಶ್ನೆಯನ್ನು ಏಕೆ ಹಾಕಿಕೊಳ್ಳುತ್ತಿಲ್ಲ ಎಂಬುದಕ್ಕೆ ಇವತ್ತಿನವರೆಗೂ ಸರಿಯಾದ ಉತ್ತರ ಸಿಕ್ಕಿಲ್ಲ. ಇಂಗ್ಲಿಷ್ ಮಾಧ್ಯಮದ ಆಕರ್ಷಣೆಯೇ ಇದಕ್ಕೆ ಕಾರಣ ಎಂಬುದು ಸಾಮಾನ್ಯವಾಗಿ ಕೇಳಿಬರುವ ಉತ್ತರ.

ಆದರೆ, ಕಳೆದ 4-5 ವರ್ಷಗಳಲ್ಲಿ ಈ ರಾಜ್ಯದಲ್ಲಿ ಇನ್ನೊಂದು ಮಹತ್ವದ ಪ್ರಯೋಗ ನಡೆದಿದೆ. ಕನಿಷ್ಠ 1000 ಸರ್ಕಾರೀ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಕೆಲವು ಶಾಲೆಗಳಲ್ಲಂತೂ ಇನ್ನು ಪ್ರವೇಶ ನೀಡಲಾಗುವುದಿಲ್ಲ ಎಂದು ಬೋರ್ಡು ಹಾಕುವ ಮಟ್ಟಿಗೆ ದಾಖಲಾತಿ ಆಗಿದೆ. ಇದೇಕೆ ಮತ್ತು ಹೇಗೆ? ಆ ಶಾಲೆಯ ಬಗ್ಗೆ ಸುತ್ತಲಿನ ಸಮುದಾಯವೇ ಆಸಕ್ತಿ ತೋರಿಸಿದ್ದು ಇದಕ್ಕೆ ಪ್ರಧಾನ ಕಾರಣ. ಆದರೆ, ಅವರು ಬಲವಂತದಿಂದ ಮಕ್ಕಳನ್ನು ಶಾಲೆಗೆ ಸೇರಿಸಿಲ್ಲ. ಹಾಗೆ ನೋಡಿದರೆ, ಕೆಲವು ಕಡೆ ಸಮುದಾಯ ಆಸಕ್ತಿ ತೋರಿಸಿ, ಹತ್ತು ಹಲವು ರೀತಿಯ ಸೌಲಭ್ಯಗಳನ್ನು ಹೊಸದಾಗಿ ಕೊಟ್ಟರೂ ದಾಖಲಾತಿ ಹೆಚ್ಚಾಗಿಲ್ಲ. ಆದರೆ, ಮಕ್ಕಳ ದಾಖಲಾತಿ ಹೆಚ್ಚಾಗುತ್ತಿರುವ ಶಾಲೆಗಳಲ್ಲಿ ಎಸ್‌ಡಿಎಂಸಿ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ) ವತಿಯಿಂದ ಶಿಕ್ಷಕರ ನೇಮಕಾತಿ ಆಗಿದೆ. ಮಕ್ಕಳಿಗೆ ಇಂಗ್ಲಿಷ್ ಕಲಿಸುವ ಏರ್ಪಾಡು ಆಗಿದೆ. ಆದರೆ, ಕನ್ನಡ ಮಾಧ್ಯಮದಲ್ಲೇ ಕಲಿಸುತ್ತಾರೆ. ಇದು ಎಲ್ಲೋ, ಅಲ್ಲೊಂದು ಇಲ್ಲೊಂದು ಬೆರಳೆಣಿಕೆಯ ಶಾಲೆಗಳಲ್ಲ. ಕನಿಷ್ಠ 1000 ಶಾಲೆಗಳಲ್ಲಿ ಈ ರೀತಿ ಆಗುತ್ತಿದೆ. ಸಮಾನ ಶಿಕ್ಷಣಕ್ಕಾಗಿ ಜನಾಂದೋಲನದ ಕಾರ್ಯಕರ್ತರು ನೇರವಾಗಿ ಸುಮಾರು 80 ಶಾಲೆಗಳಲ್ಲಿ ಈ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದಾರೆ.

ಶಾಲೆಯ ಸುತ್ತ ಕೆಲವು ಆಸಕ್ತರು ಸೇರಿ ಮಾಡುತ್ತಿರುವ ಕೆಲಸಕ್ಕೆ ಇಷ್ಟು ಒಳ್ಳೆಯ ಪ್ರತಿಕ್ರಿಯೆ ಬರಬಹುದಾದರೆ, ಸರ್ಕಾರ ಮನಸ್ಸು ಮಾಡಿದರೆ ಇನ್ನೆಷ್ಟು ಬದಲಾಗಬಹುದು ಯೋಚಿಸಿ. ಬಹಳ ಮುಖ್ಯವಾಗಿ ಈ ಶಾಲೆಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದು ಎಲ್ಲಕ್ಕಿಂತ ಮುಖ್ಯವಾದ ಅಂಶವಾಗಿದೆ. 5 ತರಗತಿಗಳಿರುವ ಒಂದು ಶಾಲೆಗೆ ಇಬ್ಬರು ಶಿಕ್ಷಕರನ್ನು ಕೊಟ್ಟು, ಅವರಲ್ಲಿ ಒಬ್ಬರು ಸದಾ ಪಾಠಕ್ಕಿಂತ ಬೇರೆ ಕೆಲಸದಲ್ಲಿ ವ್ಯಸ್ತರಾಗಿರಲೇಬೇಕಾದ



ಪರಿಸ್ಥಿತಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿದೆ. 7 ತರಗತಿಗಳಿರುವ ಕೆಲವು ಶಾಲೆಗಳಲ್ಲೂ ಇಬ್ಬರೇ ಶಿಕ್ಷಕರಿರುವ ಸಂದರ್ಭವಿದೆ. ಇಂತಹ ಶಾಲೆಗಳಿಗೆ ಯಾರಾದರೂ ಮಕ್ಕಳನ್ನು ಹೇಗೆ ಸೇರಿಸಿಯಾರು? ಮಕ್ಕಳಿಲ್ಲದಿದ್ದುದಕ್ಕೆ ಶಿಕ್ಷಕರನ್ನು ನಿಯೋಜಿಸಿಲ್ಲವೋ ಅಥವಾ ಶಿಕ್ಷಕರಿಲ್ಲದಿದ್ದುದಕ್ಕೆ ಮಕ್ಕಳು ಬರುತ್ತಿಲ್ಲವೋ ಎಂಬುದನ್ನು ಪರಿಶೀಲಿಸಿದ್ದಾರೆಯೇ? ಸರ್ಕಾರೀ ಶಾಲಾ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಹಾಳುಗೆಡವುತ್ತಾ ಬಂದದ್ದರಿಂದಲೇ ದಾಖಲಾತಿ ಕಡಿಮೆಯಾಗುತ್ತಾ ಬಂದಿತು ಎಂಬುದೇ ವಾಸ್ತವ.


ಈ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿದರೂ, ಸಿದ್ದರಾಮಯ್ಯನವರ ಸರ್ಕಾರ ಮಾಡಿದರೂ, ಅದು ಶಿಕ್ಷಣ ವಿರೋಧಿ ನೀತಿಯೇ. ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಸರ್ಕಾರೀ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು ಅತ್ಯಂತ ಮುಖ್ಯವಾದ ಸಂಗತಿ. ಅದರ ಬಗ್ಗೆ ಬಿಜೆಪಿ ಸರ್ಕಾರಕ್ಕೆ ಆಸಕ್ತಿಯಿದೆಯೆಂದು ಯಾರೂ ಭಾವಿಸಲಾರರು. ಆದರೆ, ಸಿದ್ದರಾಮಯ್ಯನವರು ಅದಕ್ಕೆ ಭಿನ್ನವಾಗಿ ನಡೆದುಕೊಂಡರೇ?

ಕಳೆದ ವರ್ಷ 9000 ಶಿಕ್ಷಕರ ನೇಮಕಾತಿ ಮಾಡಿಕೊಂಡಿರುವುದು ನಿಜ. ಗಮನಿಸಬೇಕಾದ್ದೆಂದರೆ, ಇದಕ್ಕೆ ಹಿಂದೆ ಶಿಕ್ಷಕರ ನೇಮಕಾತಿಯಾಗಿದ್ದು 2009ರಲ್ಲಿ, 2006ರಲ್ಲಿ ದೈಹಿಕ ಶಿಕ್ಷಕರ ನೇಮಕಾತಿಯಾಗಿತ್ತು, 2006ರಿಂದ 2016ರವರೆಗೆ ಒಬ್ಬರೇ ಒಬ್ಬ ದೈಹಿಕ ಶಿಕ್ಷಕರ ನೇಮಕಾತಿ ಆಗಲಿಲ್ಲ, 2008ರಲ್ಲಿ 4,000 ಶಿಕ್ಷಕರನ್ನೂ, 2009ರಲ್ಲಿ 7,000 ಶಿಕ್ಷಕರನ್ನೂ ನೇಮಿಸಿಕೊಳ್ಳಲಾಗಿತ್ತು. (ಈ ಸಂಖ್ಯೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಇರಬಹುದಾದರೂ, ಒಟ್ಟಾರೆ ವಿದ್ಯಮಾನದ ದಿಕ್ಕು ಇದೇ ರೀತಿ ಇತ್ತು ಎಂಬುದು ಖಚಿತ. ಇದಲ್ಲದೇ ಈ ಸರ್ಕಾರ ಬಂದ ನಂತರ ಸುಮಾರು 5,000 ಅತಿಥಿ ಶಿಕ್ಷಕರೆಂಬ ಒಂದು ವರ್ಷದ ಗುತ್ತಿಗೆ ಶಿಕ್ಷಕರನ್ನೂ ನೇಮಿಸಿಕೊಳ್ಳಲಾಗಿದೆ. ವರ್ಷವೊಂದಕ್ಕೆ ಸುಮಾರು 10,000 ಶಿಕ್ಷಕರು ನಿವೃತ್ತಿಯಾಗುವ ಸರ್ಕಾರೀ ವ್ಯವಸ್ಥೆಯಲ್ಲಿ ಸರ್ಕಾರದ ಪ್ರಕಾರವೇ 2016ರಲ್ಲಿ 38,000 ಶಿಕ್ಷಕರ ಹುದ್ದೆಗಳು ಖಾಲಿ ಇದ್ದವು. ಅವುಗಳಲ್ಲಿ ಕೇವಲ 9000 ಹುದ್ದೆಗಳನ್ನು ತುಂಬಲಾಗುವುದೆಂಬುದರ ಅರ್ಥ, ಇನ್ನೂ 29,000 ಶಿಕ್ಷಕರ ಹುದ್ದೆಗಳು ಖಾಲಿ ಇವೆಯೆಂದು ತಾನೇ?

ಖಾಲಿ ಇರುವ ಹುದ್ದೆಗಳ ಸಂಖ್ಯೆಯು ಸರ್ಕಾರದ ಮಾನದಂಡಗಳಿಗನುಗುಣವಾದ ಸಂಖ್ಯೆಯೇ ಹೊರತು, ಶಿಕ್ಷಣದ ಹೋರಾಟಗಾರರ ಮಾನದಂಡಕ್ಕೆ ಅನುಗುಣವಾಗಿಲ್ಲ. ತರಗತಿಗೊಬ್ಬರು ಶಿಕ್ಷಕರಿರಬೇಕು ಮತ್ತು 6ನೇ ತರಗತಿಯ ನಂತರ ವಿಷಯಕ್ಕೊಬ್ಬರು ಶಿಕ್ಷಕರಿರಬೇಕು. ದೈಹಿಕ ಶಿಕ್ಷಕರ ಜೊತೆಗೆ, ಸಂಗೀತ, ಕ್ರಾಫ್ಟ್ ಇತ್ಯಾದಿ ಹೇಳಿಕೊಡುವ ಶಿಕ್ಷಕರಿರಬೇಕು. ಶಾಲೆಗಳಿಗೆ ಗುಮಾಸ್ತರು ಮತ್ತು ಗ್ರೂಪ್ ಡಿ ಹುದ್ದೆಗಳಿರಬೇಕು ಎಂಬುದು ಶಿಕ್ಷಣದ ಆಂದೋಲನದಲ್ಲಿ ಕೆಲಸ ಮಾಡುತ್ತಿರುವವರ ಒತ್ತಾಯ. ಶಿಕ್ಷಣವೆಂಬುದು ರಾಷ್ಟ್ರ ನಿರ್ಮಾಣದ ಕೆಲಸವಾಗಿದ್ದರೆ, ಇದನ್ನು ಮಾಡಬೇಕಾದ್ದು ಯಾವುದೇ ಪ್ರಜಾತಾಂತ್ರಿಕ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಇಲ್ಲಿ ಪ್ರಜಾಪ್ರಭುತ್ವ ಇರುವ ಕುರಿತು ಅನುಮಾನಗಳಿರುವುದರಿಂದ, ಈ ರೀತಿ ನಡೆಯುತ್ತಿರುವುದೇ ಸಹಜ ಎಂಬಂತಾಗಿದೆ.

ಈ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆ ಮತ್ತು ಅಧಿಕಾರ ವಹಿಸಿಕೊಂಡು ಕೆಲವು ದಿನಗಳಲ್ಲಿ ನೀಡಿದ ಆಶ್ವಾಸನೆ ಬೇರೆಯೇ ಆಗಿತ್ತು. 'ಒಂದೇ ಒಂದು ಸರ್ಕಾರೀ ಶಾಲೆಯನ್ನೂ ಮುಚ್ಚುವುದಿಲ್ಲ' ಎಂದು ಮುಖ್ಯಮಂತ್ರಿ ಹೇಳಿದ್ದರೆ, 'ಒಬ್ಬ ವಿದ್ಯಾರ್ಥಿ ಇದ್ದರೂ ಮುಚ್ಚುವುದಿಲ್ಲ' ಎಂದು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಹೇಳಿದ್ದರು. ಆದರೆ, ಈಗ 10 ಮಕ್ಕಳು ಮಾತ್ರವಲ್ಲ, 30ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳನ್ನೂ ಮುಚ್ಚಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೇ 21ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯು 791 ಶಾಲೆಗಳನ್ನು ಮುಚ್ಚಲು ಆದೇಶ ನೀಡಿದ್ದರೆ, ಜೂನ್ 1ರಂದು 2,168 ಶಾಲೆಗಳನ್ನು ಮುಚ್ಚಲು ಸೂಚಿಸಿತ್ತು. ಈಗ 'ಕಡಿಮೆ ಮಕ್ಕಳಿರುವ ಶಾಲೆಗಳನ್ನು ಹತ್ತಿರದ ಶಾಲೆಗಳಿಗೆ ವಿಲೀನಗೊಳಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಯಾವುದೇ ನಿರ್ಣಯ ಕೈಗೊಂಡಿಲ್ಲ. ಆದ್ದರಿಂದ ಮೇ 21 ಮತ್ತು ಜೂನ್ 1ರಂದು ಹೊರಡಿಸಿದ್ದ ಸುತ್ತೋಲೆಗಳನ್ನು ವಾಪಸ್ ಪಡೆಯಲಾಗಿದೆ' ಎಂದು ಆಯುಕ್ತರು ಹೊರಡಿಸಿರುವ ತಿದ್ದುಪಡಿ ಆದೇಶ ಹೇಳುತ್ತದೆ.

'ಯಾವುದೇ ಶಾಲೆಯನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇಲ್ಲ, ಇದೇ ಶಾಲೆಯಲ್ಲಿ ಕಲಿಕೆ ಮುಂದುವರೆಸುತ್ತೇನೆ ಎಂದು ಒಬ್ಬ ವಿದ್ಯಾರ್ಥಿ ಹೇಳಿದರೂ, ಆ ವಿದ್ಯಾರ್ಥಿಗೆ ಅಲ್ಲಿಯೇ ಅವಕಾಶ ಕಲ್ಪಿಸಲಾಗುವುದು' ಎಂದು ಮಂತ್ರಿಗಳು ಈ ಸಾರಿಯೂ ಹೇಳಿದ್ದಾರೆ. ಅವರ ಪ್ರಕಾರ




ಪಂಚಾಯ್ತಿಗೊಂದು ಮಾದರಿ ಶಾಲೆಯನ್ನು ಮಾ... ಊರಿನ ಸುತ್ತಲಿರುವ ಉಳಿದ ಹಳ್ಳಿಗಳ ಮಕ್ಕಳಿ... ವಾಹನ ವ್ಯವಸ್ಥೆ ಮಾಡಲಾಗುವುದು!

ಅವರೇ ಹೇಳಿರುವ ಇನ್ನೂ ಒಂದು ಅಂಶ... ಈ ಸದ್ಯ ಆರ್.ಟಿ.ಇ ಕಾಯ್ದೆ ಅಡಿಯಲ್ಲಿ ಖಾಸ... ಶಾಲೆಗಳಿಗೆ ಪ್ರವೇಶ ಪಡೆದುಕೊಳ್ಳುತ್ತಿರುವ ಮಕ... ಶುಲ್ಕವಾಗಿ ಖಾಸಗಿ ಸಂಸ್ಥೆಗಳಿಗೆ 400 ಕೋಟಿ ರೂ.ಗಳನ್ನು ಸರ್ಕಾರ ನೀಡುತ್ತಿದೆ. ಇನ್ನು ಮೂರ... ವರ್ಷಗಳಲ್ಲಿ ಈ ಹಣ 1,500 ಕೋಟಿ ರೂ.ಗಳಾಗಲಿದೆಯಂತೆ. ಅಂದರೆ ಸರ್ಕಾರದ ಹ... ಖಾಸಗಿಯವರಿಗೆ ನೀಡಲು ನಮ್ಮ ಮಕ್ಕಳೇ ವಾಹಕರು! ಇದು ಸರಿಯಲ್ಲವೆಂದು ಸ್ವತಃ ಶಿಕ್ಷ... ಸಚಿವರೂ ಹೇಳುತ್ತಿದ್ದಾರೆ. ಅವರದ್ದೇ ಪಕ್ಷದ ಸ... ಕೇಂದ್ರದಲ್ಲಿದ್ದಾಗ ತಂದ ಕಾಯ್ದೆಯಿದು. ಅಂದರೆ ಇದೊಂದು ಖಾಸಗಿಯವರ ಪರ ಕಾಯ್ದೆ ಅಷ್ಟೇ...

ಮಕ್ಕಳು ಖಾಸಗಿ ಶಾಲೆಗಳಿಗೆ ಸೇರದಷ್ಟು ... ಸರ್ಕಾರೀ ಶಾಲೆ ನಡೆಸಲು ಸಾಧ್ಯವಿಲ್ಲ ಎಂದು ... ಸರ್ಕಾರ ಹೇಳುವಂತಿಲ್ಲ. ರಾಜ್ಯದ ಕನಿಷ್ಠ 1,000 ಶಾಲೆಗಳಲ್ಲಿ ಅದನ್ನು ಶಾಲೆಯ ಸುತ್ತಲಿನ ಸಮುದ... (ಶಿಕ್ಷಕರು, ಎಸ್‌ಡಿಎಂಸಿ, ಹಿರಿಯ ವಿದ್ಯಾರ್ಥಿಗಳು... ಶಿಕ್ಷಣಾಸಕ್ತರು) ಕಳೆದ ನಾಲ್ಕು ವರ್ಷಗಳಲ್ಲಿ ರುಜುವಾತು ಮಾಡಿ ತೋರಿಸಿದ್ದಾರೆ. ಅಂತಹ ಪ್ರಯತ್ನದಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಸ... ಶಿಕ್ಷಣದ ಕಾರ್ಯಕರ್ತರು ನಾಲ್ಕು ದಿನಗಳ ಹಿಂದೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಶಾಲೆಗ... ವಿಲೀನದ ವಿರುದ್ಧ ಮನವಿ ಪತ್ರ ನೀಡಿದ್ದರು. ರಾಜ್ಯದೆಲ್ಲೆಡೆ ಪತ್ರಿಕಾಗೋಷ್ಠಿಗಳು ನಡೆಯಲಾರಂಭವಾಗಿದ್ದವು. ಇದೇ 28ರಂದು ಮುಖ್ಯಮಂತ್ರಿಗಳ ಮನೆ ಮುತ್ತಿಗೆ ಕಾರ್ಯಕ್ರಮ... ಹಮ್ಮಿಕೊಂಡಿದ್ದಾರೆ. ಈ ಮಧ್ಯೆ ವಿಲೀನದ ಆದೇ... ಹಿಂಪಡೆದುಕೊಂಡಿದ್ದಾರೆ.

ವಿಲೀನ ಮಾಡದಿದ್ದರೆ, ಆ ಶಾಲೆಗಳಲ್ಲಿ ಮಕ್ಕ... ಸಂಖ್ಯೆ ಇನ್ನೂ ಕಡಿಮೆಯಾಗುತ್ತದೆ. ಮಾಡಿದರೆ, ... ವಿಲೀನ ಆಗುತ್ತದೋ, ಆ ಶಾಲೆಗಳಲ್ಲೂ ಮಕ್ಕಳ ...





ಸಂಖ್ಯೆ ಇಳಿಯುತ್ತಾ ಹೋಗುತ್ತದೆ. ಈ ಟ್ರೆಂಡ್ ... ಅತ್ಯಂತ ಸ್ಪಷ್ಟವಾಗಿ ಕಾಣುತ್ತಿದೆ. ಈಗ ವಿಲೀನ ಮಾಡಬೇಡಿ ಎಂದು ಹೇಳುತ್ತಿರುವವರು, ಶಾಲೆಗ... ಇದ್ದ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳಿ ಎಂದು ಹೇಳು... ಸರ್ಕಾರ ಈ ಕೂಗಿಗೆ ಕಿವಿಗೊಡದಿದ್ದರೆ, ಸರ್ಕಾರೀ ಶಾಲೆಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಮುಚ್ಚಿ ಹೋಗುತ್ತವೆ. ಸಾಮಾಜಿಕ ನ್ಯಾಯದ ವಿರುದ್ಧದ ... ನೀತಿಯನ್ನು ಮುಂದುವರೆಸಿಕೊಂಡು ಹೋದ ಮ... ಅದನ್ನು ತೀವ್ರಗೊಳಿಸಿದ ಅಪಖ್ಯಾತಿ ಸಿದ್ದರಾಮಯ್ಯನವರ ಸರ್ಕಾರಕ್ಕೆ ಶಾಶ್ವತವಾಗಿ ಅಂಟಿರುತ್ತದೆ.

ಹಿಂದೂಗಳ ದೇವತೆಗಳು ಮತ್ತು ದಲಿತಬಹುಜನರ ದೇವರುಗಳು



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಆಂಧ್ರದ ಕಂಛ ಇಲ್ಲಯ್ಯನವರು ಖ್ಯಾತ ಚಿಂತಕ ಮತ್ತು ಬರಹಗಾರ. ಕುರುಬ ಕುಟುಂಬದಲ್ಲಿ ಜನಿಸಿದ ಇಲ್ಲಯ್ಯನವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ 1996ರಲ್ಲಿ ಬರೆದ 'ನಾನು ಯಾಕೆ ಹಿಂದೂ ಅಲ್ಲ' ತುಂಬಾ ಪ್ರಖ್ಯಾತವಾದದ್ದು. ಅದು ದಲಿತ ಹೋರಾಟಗಳಿಗೆ ಪ್ರೇರಕ ಆಗಿಯೂ, ದಿಕ್ಸೂಚಿಯಾಗಿಯೂ ಹಲವಾರು ದಶಕಗಳಿಂದ ಕೆಲಸ ಮಾಡಿದೆ. ಹಿಂದೂ ಧರ್ಮ, ಹಿಂದೂತ್ವ ಸಿದ್ಧಾಂತ ಮತ್ತು ಬ್ರಾಹ್ಮಣ್ಯವನ್ನು ತೀವ್ರವಾಗಿ ವಿರೋಧಿಸುವ ಇಲ್ಲಯ್ಯ 'ದಲಿತಬಹುಜನ' ಎಂಬ ಪದವನ್ನು ತಮ್ಮ ಬರಹಗಳಲ್ಲಿ ಉಪಯೋಗಿಸುತ್ತಾರೆ. ಯಾಕೆಂದರೆ ಅವರ ಪ್ರಕಾರ ಈ ದೇಶದ ಬ್ರಾಹ್ಮಣ-ಬನಿಯಾ ಮತ್ತು ಕ್ಷತ್ರಿಯರು ಒಂದುಕಡೆಯಾದರೆ, ಇಲ್ಲಿನ ಶೂದ್ರರು, ಹಿಂದುಳಿದ ವರ್ಗಗಳು ಮತ್ತು ದಲಿತರು ಮತ್ತೊಂದು ಕಡೆ. ಈ ಎರಡೂ ಕಡೆಯವರ ನಡುವೆ ಯಾವುದೇ ಸಮಾನ ಅಂಶಗಳಿಲ್ಲ. ಅದಕ್ಕಿಂತ ಮುಖ್ಯವಾಗಿ ಅಲ್ಪಸಂಖ್ಯಾತರಾದ ಮೊದಲಿನ 'ಹಿಂದೂ' ಗುಂಪಿನವರು ತಮ್ಮ ಷಡ್ಯಂತ್ರಗಳಿಂದ ಬಹುಸಂಖ್ಯಾತರಾದ ದಲಿತಬಹುಜನರನ್ನು ಶತಮಾನಗಳಿಂದ ಶೋಷಿಸಿಕೊಂಡು ಬರುತ್ತಿದ್ದಾರೆ. 'ಯಾಕೆ ನಾನು ಹಿಂದೂ ಅಲ್ಲ' ಎಂಬ ಪುಸ್ತಕವು ಹಿಂದೂಗಳು ಮತ್ತು ದಲಿತಬಹುಜನರ ನಡುವಿನ ವಿಭಿನ್ನತೆಗಳನ್ನು ಮತ್ತು ತಾರತಮ್ಯವನ್ನು ಹಲವಾರು ಸ್ತರಗಳಲ್ಲಿ ವಿಶ್ಲೇಷಿಸುವ ಕೃತಿ ಆಗಿದೆ.

ಇಲ್ಲಯ್ಯನವರು ಪ್ರಮುಖ ದಿನಪತ್ರಿಕೆಗಳಲ್ಲಿ ಬರೆಯುವ ಲೇಖನಗಳನ್ನು ನಾನು ಓದಿದ್ದೆ ಹೊರತು ಅವರ ಯಾವ ಪುಸ್ತಕವನ್ನೂ ಓದಿರಲಿಲ್ಲ. ಆದರೆ ಇತ್ತೀಚೆಗೆ ಇಂಟರ್‌ನೆಟ್‌ನಲ್ಲಿ ಖರೀದಿಸಿದ ಅವರ 'ನಾನು ಯಾಕೆ ಹಿಂದೂ ಅಲ್ಲ' ಪುಸ್ತಕ ಮೊನ್ನೆ ನನ್ನ ಕೈಸೇರಿತು. ಅದರ ಐದನೆ ಅಧ್ಯಾಯ 'ಹಿಂದೂಗಳ ದೇವತೆಗಳು ಮತ್ತು ನಾವು: ನಮ್ಮ ದೇವರುಗಳು ಮತ್ತು ಹಿಂದೂಗಳು' ಎಂಬುದಾಗಿದೆ. ಇದರಲ್ಲಿ ಹಿಂದೂ ದೇವತೆಗಳು ಜನ್ಮ ತಾಳಿದ್ದು ಹೇಗೆ ಮತ್ತು ಯಾಕೆ ಎಂದು ಇಲ್ಲಯ್ಯ ಚರ್ಚಿಸಿದ್ದಾರೆ. ಜೊತೆಗೆ ದಲಿತಬಹುಜನರ ದೇವರುಗಳ ಮತ್ತು ಪೂಜಾವಿಧಾನಗಳ ಸರಳತೆಯನ್ನೂ ವಿವರಿಸಿದ್ದಾರೆ. ಆ ಅಧ್ಯಾಯದ ಹಲವು ಮುಖ್ಯಾಂಶಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ:

ಹಿಂದೂಗಳ ದೇವತೆಗಳಿಗೂ ನಮಗೂ ಎತ್ತಿಂದೆತ್ತಣ ಸಂಬಂಧ? ಅವರ ಬ್ರಾಹ್ಮಣ್ಯ ದೇವತೆಗಳು ನಮ್ಮನ್ನೆಲ್ಲ ತಮ್ಮವರೆಂದು, ತಮ್ಮ ಭಕ್ತರೆಂದು ಒಪ್ಪಿಕೊಳ್ಳುತ್ತವೆಯೇ? ಬೇರೆ ಧರ್ಮಗಳು ಏಕದೈವ ಪರಿಪಾಲಕರಾಗಿದ್ದರೆ ಯಾಕೆ ಹಿಂದೂ ಧರ್ಮಕ್ಕೆ ಇಷ್ಟೊಂದು ದೇವತೆಗಳ ಅಗತ್ಯತೆ ಇತ್ತು? ಈ ದೇವತೆಗಳು ದಲಿತಬಹುಜನರ ಹಿತಾಸಕ್ತಿಗಳಿಗಾಗಿ ಶ್ರಮಿಸಿದವೋ ಅಥವಾ ಬ್ರಾಹ್ಮಣರ ಹಿತಾಸಕ್ತಿಗಳನ್ನು ಗಟ್ಟಿಗೊಳಿಸಿದವೋ? ಹಿಂದೂ ಧರ್ಮ ಎರಡು ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಒಂದು ವಿವಿಧ ದೇವತೆಗಳನ್ನು ಬಳಸಿಕೊಂಡು ಸಮುದಾಯದಲ್ಲಿ ಒಪ್ಪಿಗೆಯನ್ನು ಸೃಷ್ಟಿಸುತ್ತದೆ. ಎರಡು ಇಂತಹ ಒಪ್ಪಿಗೆ ಸಿಗದಿದ್ದಾಗ ಹಿಂಸೆಯನ್ನು ಉಪಯೋಗಿಸಿ ವಿರೋಧಿ ಸಮುದಾಯಗಳನ್ನು ಪಳಗಿಸುತ್ತದೆ. ಹಿಂದೂ ಧರ್ಮದ ಮೂಲ ಸಿದ್ಧಾಂತವೇ ಹಿಂಸೆ. ಆ ಕಾರಣಕ್ಕೇ ಹಿಂದೂ ದೇವತೆಗಳು ಸದಾ ಶಸ್ತ್ರಸಜ್ಜಿತರಾಗಿರುತ್ತಾರೆ. ಇಂತಹ ಶಸ್ತ್ರಸಜ್ಜಿತ ದೇವರುಗಳು ಇತರೆ ಧರ್ಮಗಳಲ್ಲಿ ಕಾಣಸಿಗುವುದಿಲ್ಲ. ಬೇರೆ ಯಾವುದೇ ಧರ್ಮದಲ್ಲಿ ದೇವತೆಗಳು ಒಪ್ಪಿಗೆ ಅಥವಾ ಹಿಂಸೆಯನ್ನು ಉಪಯೋಗಿಸಿ ಜನಸಮುದಾಯಗಳನ್ನು ಪೋಷಿಸಿಲ್ಲ. ಆದ್ದರಿಂದ ಹಿಂದೂ ದೇವತೆಗಳು ಮತ್ತು ದಲಿತಬಹುಜನರ ನಡುವಿನ ಸಂಬಂಧಪೀಡಕ ಮತ್ತು ಪೀಡಿತರ ನಡುವಿನ ಸಂಬಂಧವಾಗಿದೆ.


ಹಿಂದೂಗಳ ದೇವಾನುದೇವ ಇಂದ್ರ. ಆತ ದಲಿತಬಹುಜನರಾಗಿದ್ದ ಆದಿದ್ರಾವಿಡರನ್ನು ಧ್ವಂಸ ಮಾಡಿದ ಮೊದಲ ಆರ್ಯ ನಾಯಕ. ಈ ಕಾರಣಕ್ಕೆ ಆತ ಬ್ರಾಹ್ಮಣರಿಗೆ 'ಹೀರೋ' ಆಗಿದ್ದ. ಹೀಗೆ ಆದಿದ್ರಾವಿಡರನ್ನು ನಾಶ ಮಾಡಿದ ಇಂದ್ರ ತನ್ನ ಜನರನ್ನು ಉತ್ಪಾದನೆಯಲ್ಲಿ ತೊಡಗಿಸಲಿಲ್ಲ, ಬದಲಾಗಿ ತನ್ನ ಜನರಂತೆ ಆತನೂ ಮೋಜು ಮಸ್ತಿಯಲ್ಲಿ ಮುಳುಗಿದ್ದ. ಇಂದ್ರನೇ ದಲಿತಬಹುಜನರನ್ನು ಕೊಂದ ಪ್ರಥಮ ಆರ್ಯ ನಾಯಕ.

ಇನ್ನು ಹಿಂದೂಗಳ ತ್ರಿಮೂರ್ತಿಗಳ ಪೈಕಿ ಮೊದಲಿನವನು ಬ್ರಹ್ಮ. ಬ್ರಹ್ಮ ಎಂದರೆ ಜ್ಞಾನ ಎನ್ನುತ್ತಾರೆ. ಆದರೆ ಈ ಜ್ಞಾನಿಯೂ ದಲಿತಬಹುಜನರನ್ನು ದಮನಿಸಲು ಸಿದ್ಧವಾಗಿರುವ ಶಸ್ತ್ರಸಜ್ಜಿತ ದೇವತೆಯೇ. ಈತನೇ ವರ್ಣವ್ಯವಸ್ಥೆಯ ಮೂಲ ಪುರುಷ. ಈತನ ಹೆಸರಿನಲ್ಲೇ ಕೌಟಿಲ್ಯ, ಮನು, ವೇದವ್ಯಾಸ ಮತ್ತು ವಾಲ್ಮೀಕಿ ತರಹದ ಬ್ರಾಹ್ಮಣ್ಯದ ಸಿದ್ಧಾಂತಿಗಳು ಬ್ರಾಹ್ಮಣ್ಯದ ಹಿತಾಸಕ್ತಿಗಳನ್ನು ಕಾಪಾಡಲು ಜಾತಿವ್ಯವಸ್ಥೆಯನ್ನು ಸ್ಥಾಪಿಸಿದರು. ಹಾಗೆಯೇ ಬ್ರಹ್ಮನ ಹೆಸರಲ್ಲಿ ದಲಿತಬಹುಜನರ ವಿರುದ್ಧದ ವೇದಗಳನ್ನು ಸೃಷ್ಟಿಸಲಾಯಿತು.

ಬ್ರಹ್ಮನ ಪತ್ನಿ ಸರಸ್ವತಿಯನ್ನು ವಿದ್ಯಾದೇವತೆ ಎಂದು ಕರೆಯುತ್ತಾರೆ. ಆದರೆ ಸರಸ್ವತಿ ಒಂದೇ ಒಂದು ಪುಸ್ತಕವನ್ನೂ ಬರೆದದ್ದಿಲ್ಲ. ಯಾಕೆಂದರೆ ಬ್ರಾಹ್ಮಣರು ಮಹಿಳೆಯರಿಗೆ ಓದುಬರಹವನ್ನು ಹೇಳಿಕೊಡುತ್ತಿರಲಿಲ್ಲ. ಆದ್ದರಿಂದ ಎಲ್ಲಿಯೂ ಸರಸ್ವತಿ ಮಹಿಳೆಯರಿಗೂ ಅಕ್ಷರ ಜ್ಞಾನದ ಅವಶ್ಯಕತೆ ಇದೆ ಎಂದು ಹೇಳಿಲ್ಲ. ವಿದ್ಯಾದೇವತೆಯೇ ಅನಕ್ಷರಸ್ಥ ಮಹಿಳೆಯಾಗಿರುವುದು ಎಂತಹ ವಿಪರ್ಯಾಸವಲ್ಲವೇ?

ವಾಸ್ತವವಾಗಿ ಮಹಿಳೆಯರಿಗೆ ಶಿಕ್ಷಣ ಕೊಡಬೇಕೆಂದು ಹತ್ತೊಂಬತ್ತನೆ ಶತಮಾನದ ಮಧ್ಯಭಾಗದಲ್ಲಿ ಹೋರಾಡಿದ್ದು ಜ್ಯೋತಿಬಾ ಫುಲೆ ಅವರ ಪತ್ನಿ ಸಾವಿತ್ರಿಬಾಯಿ ಫುಲೆ. ನಮ್ಮ ದಲಿತಬಹುಜನರ ಮನಸ್ಸಿನಲ್ಲಿ ಸರಸ್ವತಿಯನ್ನು ಎಂದಿಗೂ ಸಾವಿತ್ರಿಬಾಯಿ ಫುಲೆ ಅವರೊಂದಿಗೆ ಹೋಲಿಸಲಾಗುವುದಿಲ್ಲ. ಯಾಕೆಂದರೆ ಬ್ರಹ್ಮ ಹೇಗೆ ಬ್ರಾಹ್ಮಣರ ಕುಲಪತಿಯೋ ಹಾಗೆಯೇ ಆತನ ಪತ್ನಿ ಸರಸ್ವತಿ ಬ್ರಾಹ್ಮಣ ಮಹಿಳೆಯರಂತೆ ಕೇವಲ ಲೈಂಗಿಕ ವಸ್ತುವಿನ ಪ್ರತೀಕ.

ತ್ರಿಮೂರ್ತಿಗಳಲ್ಲಿ ಎರಡನೆಯವನು ವಿಷ್ಣು. ವಿಷ್ಣುವನ್ನು ನೀಲಿ ಮೈಬಣ್ಣದವನಂತೆ ಬಿಂಬಿಸಲಾಗಿದೆ. ಇದಕ್ಕೆ ಕಾರಣವೂ ಇದೆ. ಒಂದಾನೊಂದು ಕಾಲದಲ್ಲಿ ಕ್ಷತ್ರಿಯರು ಮತ್ತು ದಲಿತಬಹುಜನರು ಜತೆಗೂಡಿ ಬ್ರಾಹ್ಮಣರ ವಿರುದ್ಧ ತಿರುಗಿ ಬಿದ್ದಿರಬಹುದು. ಆಗ ಕ್ಷತ್ರಿಯರನ್ನು ಓಲೈಸಲು ವಿಷ್ಣುವನ್ನು



ಸೃಷ್ಟಿಸಿ ಆತ ಬ್ರಾಹ್ಮಣರ ಮತ್ತು ಕ್ಷತ್ರಿಯರ ಸಂಕರದ ಪ್ರತಿಫಲ ಎಂದು ಹೇಳಲಾಯಿತು. ಬ್ರಹ್ಮನ ಸಿದ್ಧಾಂತವನ್ನು ಎತ್ತಿಹಿಡಿಯುವುದೇ ವಿಷ್ಣುವಿನ ಕರ್ತವ್ಯ. ಈತ ತನ್ನ ಕೈಯಲ್ಲಿ ಹಿಡಿದುಕೊಂಡಿರುವ ವಿಷ್ಣುಚಕ್ರವೂ ಬ್ರಾಹ್ಮಣ ವಿರೋಧಿಗಳನ್ನು ನಾಶ ಮಾಡುವ ಸಲುವಾಗಿ. ವಿಷ್ಣು ಮತ್ತು ಲಕ್ಷ್ಮಿ ನಡುವಿನ ಸಂಬಂಧವೂ ಬ್ರಹ್ಮ ಮತ್ತು ಸರಸ್ವತಿ ನಡುವಿನ ಸಂಬಂಧಕ್ಕಿಂತ ಭಿನ್ನವಾದುದ್ದಲ್ಲ. ಯಾಕೆಂದರೆ ಲಕ್ಷ್ಮಿಯ ಕರ್ತವ್ಯ ವಿಷ್ಣುವಿನ ಪಾದಗಳನ್ನು ಒತ್ತುತ್ತಾ ಇರುವುದು ಮತ್ತು ಆಕಸ್ಮಾತ್ತಾಗಿ ಯಾವುದೇ ದಲಿತಬಹುಜನರು ಆಸ್ತಿ ಮಾಡಲು ಅಥವಾ ಬ್ರಾಹ್ಮಣರ ವಿರುದ್ಧ ಪ್ರತಿಭಟಿಸಲು ಮುಂದಾದರೆ ಅವರ ವಿರುದ್ಧ ತನ್ನ ಪತಿಗೆ ಚಾಡಿ ಹೇಳುವುದು. ಬ್ರಾಹ್ಮಣರು ಎಂತಹ ಕಿಲಾಡಿಗಳೆಂದರೆ ಲಕ್ಷ್ಮಿ ಸಂಪತ್ತು ಮತ್ತು ಆಸ್ತಿಯ ಸಂಕೇತ ಎನ್ನುತ್ತಾರೆ. ಆದರೆ ಅದೇ ಬ್ರಾಹ್ಮಣರು ತಮ್ಮ ಸಮುದಾಯದ ಮಹಿಳೆಯರಿಗೇ ಆಸ್ತಿಯಲ್ಲಿ ಪಾಲನ್ನು ನಿರಾಕರಿಸುತ್ತಾರೆ. ವಾಸ್ತವವಾಗಿ ಲಕ್ಷ್ಮಿ ಸಂಪತ್ತಿನ ಸಂಕೇತವಾಗಿರದೆ ಆಕೆಯೂ ತನ್ನ ಗಂಡನನ್ನೇ ಅವಲಂಬಿಸಿರುವ ಬಡವಿಯಾಗಿದ್ದಾಳೆ.

ಶಿವ ಮತ್ತು ಪಾರ್ವತಿಯ ಸೃಷ್ಟಿಯ ಹಿಂದೆಯೂ ಕುತರ್ಕವಿದೆ. ತ್ರಿಶೂಲಧಾರಿಯಾದ ಕಪ್ಪು ಮೈಬಣ್ಣದ ಶಿವ ಆದಿವಾಸಿಯಂತೆ ಕಾಣುತ್ತಾನೆ. ಈತ ಸದಾ ಬ್ರಾಹ್ಮಣನಾದ ಬ್ರಹ್ಮನಿಗೂ, ಬ್ರಾಹ್ಮಣ ಮತ್ತು ಕ್ಷತ್ರಿಯರ ಬೆರಕೆಯಾದ ವಿಷ್ಣುವಿಗೂ ಅಧೀನ. ನೃತ್ಯ ಇಷ್ಟಪಡುವ ಶಿವ ಹಲವಾರು ಬಾರಿ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡು ಬ್ರಹ್ಮ ಅಥವಾ ವಿಷ್ಣುವಿನ ಸಹಾಯದಿಂದ ಪಾರಾಗುತ್ತಾನೆ. ಶಿವ ಹೇಗೆ ವಿಷ್ಣುವನ್ನು ಅವಲಂಬಿಸಿದ್ದಾನೆ ಎನ್ನುವುದಕ್ಕೆ ಭಸ್ಮಾಸುರ ಕತೆಯೇ ಉತ್ತಮ ಉದಾಹರಣೆ. ಶಿವನ ಪತ್ನಿ ಪಾರ್ವತಿಗೂ ಸರಸ್ವತಿ ಮತ್ತು ಲಕ್ಷ್ಮಿಯರಂತೆ ಯಾವ ನಿರ್ದಿಷ್ಟ ಪಾತ್ರ ಇಲ್ಲ. ಶಿವನ ಜತೆಗೂಡಿ ಕಾಡುಮೇಡು ಸುತ್ತುವುದಷ್ಟೇ ಆಕೆಯ ಕೆಲಸ. ಆದರೆ ಆಕೆ ಒಂದು ವಿಚಾರದಲ್ಲಿ ಸರಸ್ವತಿ ಮತ್ತು ಲಕ್ಷ್ಮಿಯರಿಗಿಂತ ಭಿನ್ನ. ಯಾಕೆಂದರೆ ಆಕೆ ಹಲವು ಬಾರಿ ತನ್ನ ಪತಿಯ ಕ್ರಿಯೆಗಳನ್ನು ಪ್ರಶ್ನಿಸುತ್ತಾಳೆ. ಬ್ರಹ್ಮ ಮತ್ತು ವಿಷ್ಣುವಿನೊಂದಿಗೆ ಆದಿವಾಸಿಗಳಿಗೆ ಯಾವುದೇ ಸಾಮ್ಯತೆ ಇಲ್ಲದಿದ್ದರಿಂದ ಅವರನ್ನೇ ಹೋಲುವ ಶಿವನನ್ನು ಸೃಷ್ಟಿಸಲಾಯಿತು. ಮತ್ತು ಶಿವ ಪಾರ್ವತಿಯರನ್ನು ಬ್ರಹ್ಮ ವಿಷ್ಣುವಿಗೆ ಅಧೀನ ಎಂದು ತೋರಿಸುವ ಮೂಲಕ ಆದಿವಾಸಿಗಳು ಬ್ರಾಹ್ಮಣರಿಗೆ ಅಧೀನರಾಗಿರಬೇಕು ಎಂದು ಬಿಂಬಿಸಲಾಯಿತು.

ಆದರೆ ಕಾಲಕ್ರಮೇಣ ದಲಿತಬಹುಜನರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಈ ತ್ರಿಮೂರ್ತಿಗಳು ಬ್ರಾಹ್ಮಣಶಾಹಿಗಳಿಗೆ ಸಾಕಾಗಲಿಲ್ಲ, ಆಗ ಅವರು ಇನ್ನೂ ಹೆಚ್ಚು ಹೆಚ್ಚು ದೇವತೆಗಳನ್ನು ಸೃಷ್ಟಿಸುತ್ತಾ ಹೋದರು. ಹಾಗೆ ಅವರು ಸೃಷ್ಟಿಸಿದ ದೇವತೆಗಳಲ್ಲಿ ವಾಮನ, ಕೃಷ್ಣ ರಾಮ ಮತ್ತು ಸೀತೆ ಪ್ರಮುಖರು.

ಬ್ರಹ್ಮನ ನಂತರ ಹುಟ್ಟಿದ ಬ್ರಾಹ್ಮಣ ದೇವರು ಒಬ್ಬನೆ. ಆತನೇ ವಾಮನ. ವಾಮನ ಹುಟ್ಟಿದ್ದೇ ದಲಿತಬಹುಜನರ ರಾಜನಾಗಿದ್ದ ಬಲಿಯನ್ನು ಕೊಲ್ಲಲೆಂದು. ಯಾಕೆಂದರೆ ಬಲಿ ರಾಜ ಹಿಂದೂಗಳ ಬ್ರಾಹ್ಮಣ್ಯವನ್ನು ವಿರೋಧಿಸುತ್ತಿದ್ದ ಮಾತ್ರವಲ್ಲ, ಜಾತಿಮುಕ್ತ ಸಮಾಜಕ್ಕಾಗಿ ಶ್ರಮಿಸುತ್ತಿದ್ದ. ಅದನ್ನು ಸಹಿಸದ ಬ್ರಾಹ್ಮಣಶಾಹಿಗಳು ಕಪಟತನದಿಂದ ವಾಮನ ಮೂಲಕ ಬಲಿಯನ್ನು ಬಲಿಹಾಕಿದರು.

ಕೃಷ್ಣ ಯಾರು? ಆತನಂತಹ ದೇವತೆಯನ್ನು ಬ್ರಾಹ್ಮಣರು ಸೃಷ್ಟಿಸಿದ್ದಾದರೂ ಯಾತಕ್ಕೆ? ಆತ ಕ್ಷತ್ರಿಯನಾಗಿ ಹುಟ್ಟಿದ್ದರೂ ಯಾಕೆ ಆತನನ್ನು ಯಾದವ ಎಂದು ಕರೆಯಲಾಯಿತು? ಕೃಷ್ಣನನ್ನು ಗುರು, ನಾಯಕ ಮತ್ತು ಯುದ್ಧ ಪ್ರವೀಣ ಎಂದು ಕರೆಯಲಾಗುತ್ತದೆ. ಆತ ಅಲ್ಪಸಂಖ್ಯಾತರ (ಪಾಂಡವರ) ಧರ್ಮದ ಪರ ಬಹುಸಂಖ್ಯಾತ (ಕೌರವರ) ಧರ್ಮದ ವಿರುದ್ಧ ಹೋರಾಡುತ್ತಾನೆ. ಕೊನೆಗೆ ಇದೇ ಕೃಷ್ಣನನ್ನು ಬ್ರಾಹ್ಮಣ್ಯದ ಗ್ರಂಥವಾದ 'ಭಗವದ್ಗೀತೆ'ಯ ಲೇಖಕನಾಗಿ ಮಾಡುತ್ತಾರೆ. ಶೂದ್ರರಿಗೆ ವಿದ್ಯೆಯನ್ನು ನಿರಾಕರಿಸಿದ್ದ ಕಾಲದಲ್ಲಿ ಯಾದವನೊಬ್ಬ ಅದು ಹೇಗೆ ಗೀತೆಯನ್ನು ಬರೆದ? ಅಂತಹ ಯಾದವ ಲೇಖಕ ಇತರೆ ದಲಿತಬಹುಜನರ ನೆರವಿಗೆ ಬರುವುದಿರಲಿ, ತನ್ನ ಯಾದವ ಸಮುದಾಯಕ್ಕೂ ನೆರವಾಗಲಿಲ್ಲ ಯಾಕೆ?

ಇಲ್ಲಿ ನೆನಪಿಟ್ಟುಕೊಳ್ಳಬೇಕಾದ ಮುಖ್ಯ ಅಂಶ ಯಾವುದೆಂದರೆ ಆಗಿನ ಕಾಲದಲ್ಲೂ ಬ್ರಾಹ್ಮಣ, ಕ್ಷತ್ರಿಯ ಮತ್ತು ದಲಿತಬಹುಜನರ ನಡುವೆ ಯುದ್ಧಗಳು ನಡೆಯುತ್ತಿದ್ದದ್ದೂ ಈಗಿನ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಿರುವ ಪ್ರದೇಶದಲ್ಲಿ, ಆ ಪ್ರದೇಶಗಳಲ್ಲಿ ಯಾದವ ಸಮುದಾಯದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಹಾಭಾರತದ ಕಾಲದಲ್ಲಿ ಯಾದವರು ಬ್ರಾಹ್ಮಣ ಮತ್ತು ಕ್ಷತ್ರಿಯರ ವಿರುದ್ಧ ದಂಗೆ ಎದ್ದಿರಬಹುದು. ಆಗ ಯಾದವರನ್ನು ದಮನಿಸಲು ಬ್ರಾಹ್ಮಣಶಾಹಿಗಳು ಕೃಷ್ಣ ಎಂಬ 'ಯಾದವ'ನನ್ನು ಸೃಷ್ಟಿಸಿ ಯಾದವರೊಂದಿಗೆ ಒಡಂಬಡಿಕೆ ಮಾಡಿಕೊಂಡರು. ಆದರೆ ಅವರು ಕಟ್ಟಿದ ಕತೆ ಹೇಗಿದೆ ಎಂದರೆ ಕೃಷ್ಣ ಯಾದವ ಸಂಸ್ಕೃತಿಯಡಿ ಬೆಳೆದಿದ್ದರೂ ರಾಜಕೀಯವಾಗಿ ಆತ ಎಂದೂ ಯಾದವ ಸಂಸ್ಕೃತಿಯೊಂದಿಗೆ ಗುರುತಿಸಿಕೊಂಡವನಲ್ಲ. ಬದಲಾಗಿ ಆತನ ರಾಜಕೀಯ ಪಾತ್ರ ಕ್ಷತ್ರಿಯನಾಗಿದ್ದು ಬ್ರಾಹ್ಮಣ್ಯ ಧರ್ಮವನ್ನು ಎತ್ತಿಹಿಡಿಯುವುದೇ ಆಗಿದೆ.

ಇಡೀ ಮಹಾಭಾರತದಲ್ಲಿ ಒಮ್ಮೆಯೂ ಆತ ದಲಿತಬಹುಜನರ ಪರ ನಿಂತ ಉದಾಹರಣೆ ಇಲ್ಲ. ಆತ ರಾಧ ಮತ್ತು ಇತರೆ ಯಾದವ ಗೋಪಿಕೆಯರೊಂದಿಗೆ ಸರಸವಾಡಿದ್ದರೂ ಆತ ಅಧಿಕೃತವಾಗಿ ಮದುವೆಯಾದ ಎಂಟು ಪತ್ನಿಯರೆಲ್ಲರೂ ಕ್ಷತ್ರಿಯರು. ಅಂದರೆ ಬ್ರಾಹ್ಮಣ್ಯದ ಪುರುಷಪ್ರಧಾನ ಸಂಸ್ಕೃತಿಯಲ್ಲಿ ಯಾದವ ಮಹಿಳೆಯರನ್ನು ಲೈಂಗಿಕ ಸಂಬಂಧಕ್ಕೆ ಉಪಯೋಗಿಸಿಕೊಳ್ಳಬಹುದು ಆದರೆ ಮದುವೆ ಮಾತ್ರ ಸ್ವಜಾತಿ ಕ್ಷತ್ರಿಯ ಯುವತಿಯರೊಂದಿಗೆ ಆಗಬೇಕು.

ಮಹಾಭಾರತದ ಯುದ್ಧದಲ್ಲಿ ಕರ್ಣ ಮತ್ತು ಕೃಷ್ಣ ಎರಡು ಪ್ರತ್ಯೇಕ ಮೌಲ್ಯಗಳನ್ನು ಪ್ರತಿನಿಧಿಸುತ್ತಾರೆ. ಕರ್ಣನೂ ಕ್ಷತ್ರಿಯನಾಗಿ ಹುಟ್ಟಿದ್ದರೂ ಆತ ತನ್ನ ದಲಿತಬಹುಜನರ ಸಂಸ್ಕೃತಿಗೆ ಬದ್ಧನಾಗಿರುತ್ತಾನೆ. ಆದರೆ ಕೃಷ್ಣ ಯಾದವನಾಗಿ ಬೆಳೆದಿದ್ದರೂ ಕ್ಷತ್ರಿಯ ಸಂಸ್ಕೃತಿಯನ್ನು ಬೆಂಬಲಿಸುತ್ತಾನೆ. ಅಲ್ಪಸಂಖ್ಯಾತರ ಬ್ರಾಹ್ಮಣ್ಯವನ್ನು ಸಮರ್ಥಿಸಲು ಕೃಷ್ಣ ಹಿಂಸೆ, ವಂಚನೆ ಮತ್ತು ಪಾಶವತೆಯನ್ನು ಬೆಂಬಲಿಸುತ್ತಾನೆ. ಜೊತೆಗೆ ಭಗವದ್ಗೀತೆಯಲ್ಲಿಯೂ ಹಿಂಸೆ, ವರ್ಣಧರ್ಮ ಮತ್ತು ಕರ್ಮ ಸಿದ್ಧಾಂತಗಳನ್ನು ಬೋಧಿಸುವ ಮೂಲಕ ಬ್ರಾಹ್ಮಣ್ಯವನ್ನು ಎತ್ತಿಹಿಡಿಯುತ್ತಾನೆ.

ಈಗ ದಲಿತಬಹುಜನರ ಮತ್ತು ಮಹಿಳೆಯರ ಸಮ್ಮತಿಯನ್ನೂ ಗಿಟ್ಟಿಸಿಕೊಂಡು ಅಪಾರ ಹಾನಿ ಮಾಡಿರುವ ರಾಮ ಮತ್ತು ಸೀತೆಯರತ್ತ ನಮ್ಮ ಗಮನ ಹರಿಸೋಣ.

ಬ್ರಾಹ್ಮಣರು ತಮ್ಮ ಕೊನೆಯ ಆದರೆ ಅತಿ ಶಕ್ತಿದಾಯಕ ದೇವತೆಯನ್ನು ಸೃಷ್ಟಿಸಿದಾಗ ತಮ್ಮ ಎಲ್ಲಾ ತರ್ಕಗಳನ್ನು ಪ್ರಯೋಗಿಸಿದರು. ರಾಮ ವಿಷ್ಣುವಿನ ಅವತಾರ ಎಂದೂ, ಸೀತೆ ಲಕ್ಷ್ಮಿಯ ಅವತಾರ ಎಂದೂ ಹೇಳಿದರು. ಇವೆರಡು ಸೃಷ್ಟಿಗಳ ಹಿಂದಿದ್ದ ಕುತಂತ್ರವನ್ನು ಅರಿಯುವುದು ಅಗತ್ಯ.

ಉತ್ತರ ಭಾರತದಲ್ಲಿ ದಲಿತಬಹುಜನರ ದಂಗೆಯನ್ನು ದಮನಿಸಿದ ನಂತರ ವರ್ಣಧರ್ಮ ಸಿದ್ಧಾಂತವನ್ನು ಜಾರಿಗೆ ತರಲಾಯಿತು. ಅದೇ ಹೊತ್ತಿಗೆ ಬ್ರಾಹ್ಮಣ್ಯವನ್ನು ವಿರೋಧಿಸಿದ್ದ ಜೈನ ಮತ್ತು ಬೌದ್ಧ ಧರ್ಮಗಳನ್ನೂ ಮೂಲೆಗುಂಪು ಮಾಡಲಾಗಿತ್ತು. ಕೌಟಿಲ್ಯನ ರಾಜ್ಯಶಾಸ್ತ್ರ ಮತ್ತು ಮನುವಿನ ಕಾನೂನುಗಳು ಬ್ರಾಹ್ಮಣ್ಯ ವಿರೋಧಿಗಳನ್ನು ತೆಪ್ಪಗಾಗಿಸಿದ್ದವು.

ಆದರೆ ದಕ್ಷಿಣ ಭಾರತದಲ್ಲಿನ ಚಿತ್ರಣ ಬೇರೆಯದ್ದಾಗಿತ್ತು. ಇಲ್ಲಿ ದಲಿತಬಹುಜನರೇ ಅಧಿಕಾರದಲ್ಲಿದ್ದರು ಮಾತ್ರವಲ್ಲ, ಹೆಚ್ಚಿನ ಪ್ರದೇಶದಲ್ಲಿ ಮಾತೃಪ್ರಧಾನ ಪದ್ಧತಿಯೇ ಆಚರಣೆಯಲ್ಲಿತ್ತು. ಕೆಲವು ಬ್ರಾಹ್ಮಣರು ರಾವಣ ಕೂಡ ಬ್ರಾಹ್ಮಣನಾಗಿದ್ದ ಎನ್ನುತ್ತಾರೆ. ಅದು ಶುದ್ಧ ನಾನ್‌ಸೆನ್ಸ್. ಆತ ಶಿವಭಕ್ತನಾಗಿದ್ದ ದಲಿತಬಹುಜನರ ನಾಯಕನಾಗಿದ್ದ. ಆತ ಸ್ಥಾಪಿಸಲು ಯತ್ನಿಸಿದ ದಲಿತಬಹುಜನರ ಶೈವ ಸಿದ್ಧಾಂತವನ್ನು ಆನಂತರ ಜಾರಿಗೆ ತರುವಲ್ಲಿ ಸಾಕಷ್ಟು ಮಟ್ಟಿಗೆ ಯಶಸ್ವಿಯಾದವರು ಬಸವಣ್ಣ.

ರಾಮಾಯಣದ ಉದ್ದೇಶ ದಕ್ಷಿಣ ಭಾರತದ ಮೇಲೂ ಬ್ರಾಹ್ಮಣ್ಯವನ್ನು ಹೇರುವುದು ಮಾತ್ರವಲ್ಲ ಮಹಿಳೆಯರನ್ನು ನಿಗ್ರಹಿಸುವುದೂ ಆಗಿತ್ತು. ರಾಮ ಮತ್ತು ಲಕ್ಷ್ಮಣ ದಲಿತಬಹುಜನರ ನಾಯಕಿಯಾಗಿದ್ದ ತಾಟಕಿಯನ್ನು ಕೊಂದು ಆಕೆಯ ರಾಜ್ಯವನ್ನು ಬ್ರಾಹ್ಮಣೀಕರಿಸಿದರು. ಆಮೇಲೆ ಕಿಷ್ಕಿಂಧೆ ದಲಿತಬಹುಜನರ ರಾಜ ವಾಲಿ ಕೂಡ ವಿರೋಧ ವ್ಯಕ್ತಪಡಿಸಿದ. ಆಗ ಆತನ ಸಹೋದರ ಸುಗ್ರೀವ ಮತ್ತು ಸಂಬಂಧಿ ಆಂಜನೇಯನೊಂದಿಗೆ ಸಂಚು ರೂಪಿಸಿದ ರಾಮ ವಾಲಿಯನ್ನು ವಂಚಿಸಿ ಕೊಂದು ಹಾಕಿದ. ರಾವಣನ ಸಾವಿನೊಂದಿಗೆ ಇಡೀ ದಕ್ಷಿಣ ಭಾರತವೂ ಬ್ರಾಹ್ಮಣಶಾಹಿಗಳ ವಶವಾಯಿತು. ಯುದ್ಧ ಮುಗಿದ ಮೇಲೆ ಜಾತಿಪದ್ಧತಿಯಿಂದ ಮುಕ್ತವಾಗಿದ್ದ ದಕ್ಷಿಣ ಪ್ರದೇಶಕ್ಕೆ ಉತ್ತರ ಭಾರತದಿಂದ ವಲಸೆ ಬಂದ ಬ್ರಾಹ್ಮಣರು ಇಲ್ಲಿ ಜಾತಿಪದ್ಧತಿಯನ್ನು ಪರಿಚಯಿಸಿದರಲ್ಲದೆ ಎಲ್ಲರ ಮೇಲೆ ತಮ್ಮ ಸಿದ್ಧಾಂತವನ್ನು ಹೇರಿದರು....

ಹೀಗೆ ಬ್ರಾಹ್ಮಣ್ಯದ ಕುತಂತ್ರಗಳನ್ನು ಮತ್ತು ಅವರ ದೇವರುಗಳ ಹಿಂದಿರುವ ತರ್ಕಗಳನ್ನು ವಿವರಿಸುವ ಕಂಛ ಇಲ್ಲಯ್ಯನವರು ತಮ್ಮ 'ನಾನು ಯಾಕೆ ಹಿಂದೂ ಅಲ್ಲ' ಎಂಬ ಪುಸ್ತಕವನ್ನು ಅಂತ್ಯಗೊಳಿಸುವುದು ಈ ಸಾಲುಗಳೊಂದಿಗೆ:

"ಈ ಪುಸ್ತಕವು ರಾಮನ ಹಿಂಸೆ ಮತ್ತು ರಾಮರಾಜ್ಯದ ಹಿಂಸೆ ಎರಡನ್ನೂ ವಿರೋಧಿಸುತ್ತದೆ. ಧಾರ್ಮಿಕ ಫ್ಯಾಸಿಸಂ ಎಂಬ ನಾಣ್ಯದ ಎರಡು ಮುಖಗಳು ಹಿಂದೂ ಧರ್ಮ ಮತ್ತು ಹಿಂದೂತ್ವ ಎಂದು ಚರ್ಚಿಸಿ ಯಾವ ಪ್ರಯೋಜನವೂ ಇಲ್ಲ, ಯಾಕೆಂದರೆ ಒಂದನ್ನು ಪ್ರೀತಿಸಿ ಅದರೊಂದಿಗೆ ಜೀವಿಸುತ್ತಾ ಇನ್ನೊಂದನ್ನು ದ್ವೇಷಿಸಲು ಸಾಧ್ಯವೇ?"


ಅಂದಹಾಗೆ ಈ ಪುಸ್ತಕವನ್ನು ಓದಿ ಮುಗಿಸುತ್ತಿದ್ದಂತೆ ಕಂಛ ಇಲ್ಲಯ್ಯನವರನ್ನು ಸಂಪರ್ಕಿಸಿ ಅದನ್ನು ಕನ್ನಡದಲ್ಲಿ ಪ್ರಕಟಿಸಲು ಅನುಮತಿ ಕೋರಿದೆ. ಅವರು ಸಂತೋಷದಿಂದ ಒಪ್ಪಿದ್ದಾರೆ. ಈಗ ಸೂಕ್ತ ಅನುವಾದಕರಿಗೆ ತಲಾಶ್ ನಡೆಯುತ್ತಿದೆ!!


⇨15


ಉತ್ತರ ಕನ್ನಡ

ಯಡ್ಡಿ ಪಡೆಯಲ್ಲಿ ಅನಂತ್ಮಾಣಿ ಆತಂಕದಲ್ಲಿ ಕಾಗೇರಿ ಮಾಣಿ










ಉತ್ತರ ಕನ್ನಡದ ಬಿಜೆಪಿ ಎಂಬ ಬ್ರಾಹ್ಮಣರ ಪಾರುಪತ್ಯದ ಪಕ್ಷದಲ್ಲಿ ಕಂಪನಗಳೇಳತೊಡಗಿದೆ! ಬಣ ಬಡಿದಾಟ ಮೆಲ್ಲಗೆ ಮಗ್ಗಲು ಬದಲಿಸುತ್ತಿದೆ. ನಿದ್ದೆ ಬಡುಕ ಎಂಪಿ ಅನಂತಕುಮಾರ್ ಹೆಗಡೆ ಯಾನೇ ಅನಂತ್ಮಾಣಿ ರಣೋತ್ಸಾಹದಲ್ಲಿ ಎದ್ದು ಕುಂತಿದ್ದಾನೆ, ಆತನ ಆಜನ್ಮಶತ್ರು ಕಾಗೇರಿ ಹೆಗಡೆ ಉರುಫ್ ಕಾಗೇರಿ ಮಾಣಿ ಭವಿಷ್ಯವೇ ಬರುಡಾದಂತೆ ಚಡಪಡಿಸುತ್ತಿದ್ದಾನೆ. "ಒಂದೋ ನಾ ಮಲ್ಕೊಂಡಿರ್ಬೇಕು.... ಇಲ್ಲಾಂತಂದ್ರೆ ನಿಂತ್ಕಂಡಿರಬೇಕು.... ಎದ್ದು ಓಡಾಡಲಿಕ್ಕೆ ಇಲ್ಲಾ ಕುಂತು ಮಾತಾಡಲಿಕ್ಕೆ ಆಗದಂತಹ ಮಹಾರೋಗ ನಂಗೆ...." ಎಂದು ಪಿಳ್ಳೆ ನೆವ ಹೇಳಿಕೊಂಡು ಜನರ ಕಣ್ಣಿಗೆ-ಕೈಗೆ ಸಿಗದೆ ಖಾಸಗಿ ಕಸುಬಿನಲ್ಲಿ ಮೈ ಮರೆತಿದ್ದ ಅನಂತ್ಮಾಣಿ ಈಗ ಎನ್‌ಆರ್‌ಐ ಪಿಎಂ ಮೋದಿ ಮಾಮನ ಸಂಪುಟದಲ್ಲಿ ಸಚಿವನಾಗುತ್ತೇನೆಂದು ಹೊಸ ಅಂಗಿ-ಚೆಡ್ಡಿ ಹೊಲಿಸಿಕೊಂಡು ಕಾಯುತ್ತಿದ್ದಾರೆ.


ಹಿಂದುಳಿದ ವರ್ಗದ ಹುಂಬ ತರುಣರ ಬಲಿ ಹಾಕುವ ಒಣ ಹಿಂದೂತ್ವ ಖಾಲಿಬರಡು ರಾಜಕಾರಣಕ್ಕೆ ಬಂಡವಾಳ ಮಾಡಿಕೊಂಡಿರುವ ಅನಂತ್ಮಾಣಿ ಮಂತ್ರಿ ಆಗ್ತಾನೋ, ಇಲ್ವೋ ಖುದ್ದು ಆತನಿಗೆ ಪಕ್ಕಾ ಗೊತ್ತಿಲ್ಲ, ಆದರೆ ರಾಜ್ಯ ಬಿಜೆಪಿ ಅಧ್ಯಕ್ಷನಾಗಿ ವಕ್ಕರಿಸಿರುವ ಸಿಡಿಮಿಡಿ ಮುದುಕ ಕುಟಿಲ ಕಾರಸ್ಥಾನ ಒಂದು ಬಿಟ್ಟರೆ, ಉಳಿದೆಲ್ಲ ಕಾರ್ಯವೈಖರಿಯಲ್ಲಿ ಮಾಣಿ ದೇವರಾಯ ನಾಯ್ಕರ ದೀಟೋ!! ನಿರುಪಯೋಗಿ-ಜನದ್ರೋಹಿ ಎಂದು ನಾಯ್ಕ ಜನರಿಂದ ಬೈಸಿಕೊಂಡರೂ ಲಂಚ-ಅವ್ಯವಹಾರಕ್ಕೆ ಕೈಹಾಕಿದ ಆಕ್ಷೇಪಗಳಿರಲಿಲ್ಲ, ಆದರೆ ಅನಂತ್ಮಾಣಿ "ಭೋಲೋ ಭಾರತ್ ಮಾತಾಕಿ ಜೈ" ಎನ್ನುತ್ತಲೇ ಅದಿರು ಮಾಫಿಯಾದಿಂದ ತಟ್ಟೆ ಕಾಸು ಪಡೆದ ಕೀರ್ತಿಗೆ, ಸರ್ಕಾರಿ ಅರಣ್ಯ ನುಂಗಿ ತೋಟ ಮಾಡಿಕೊಂಡ ಸಾಹಸಕ್ಕೆ ಪಾತ್ರನಾಗಿದ್ದಾನೆ. ಆತನ ಭೋಂಗಿ ಮಾತು ನಂಬಿ ಹಿಂದೂತ್ವದ ಹಾಳುಬಾವಿಗೆ ಹಾರಲು ಅಣಿಯಾಗಿರುವ ಒಂದಿಷ್ಟು ಪೆದ್ದು ಶೂದ್ರರ ಗ್ಯಾಂಗ್ ಕಟ್ಟಿಕೊಂಡಿರುವ ಮಾಣಿ ಸಮಾಜಮುಖಿಯಾದ, ಜನಪರವಾದ ಒಂದೇಒಂದು ಕೆಲಸ ಮಾಡಿದ್ದು ಭೂತಗನ್ನಡಿ ಹಿಡಿದು ಹುಡುಕಿದರೂ ಕಾಣಿಸದು.













ಒಂದೂವರೆ ದಶಕ ಕಾಲ ಬದ್ಧತೆಯಿಂದ ಕರ್ತವ್ಯ ನಿಭಾಯಿಸದ ಅನಂತ್ಮಾಣಿ ಈಗ "ಸುದ್ದಿಯನ್ನೂ ಕೊಡ್ತೇನೆ... ಕೆಲ್ಸಾನೂ ಮಾಡ್ತೇನೆ...." ಅಂತಿದ್ದಾನೆ. ಇದು ಮಂತ್ರಿಗಿರಿ ಆಸೆಯ ಹಲುಬುವಿಕೆಯೇ ಹೊರತು ಪ್ರಾಮಾಣಿಕ ತುಡಿತ ಮಿಡಿತವೇನಲ್ಲ. ಜಿಲ್ಲೆ ನಾಡಿಮಿಡಿತವೇ ಅರ್ಥವಾಗದ ಮಾಣಿಯಿಂದ ಅಭಿವೃದ್ಧಿ ವಿಕಾಸದ ಕೆಲಸ-ಕಾರ್ಯ ಸಾಧ್ಯವೂ ಇಲ್ಲ ಬಿಡಿ. ಹಿಂದೂತ್ವ-ಕೋಮುಕಲಹದ ಕಿತಾಪತಿ ಬಿಟ್ಟರೆ ಮಾಣಿಯ ಖಾಲಿ ಬುರುಡೆಗೆ ಜಿಲ್ಲೆಯ ಬೇಕು-ಬೇಡ, ಸುಖ-ಸಂಕಟ ಅರ್ಥವೂ ಆಗುತ್ತಿಲ್ಲ. ಐದು ಬಾರಿ ಎಂಪಿಯಾಗಿ ಕೆಲಸ ಮಾಡಲಾಗದವ ಎರಡ್ಮೂರು ವರ್ಷ ಮಂತ್ರಿಯಾದಾಕ್ಷಣ ಸೇವಾದುರಂಧರನಾಗಲು ಸಾಧ್ಯವಾ? ಮಾಣಿಯ ಎಂಪಿಗಿರಿ "ಸೇವಾದಾಖಲೆ" ಗಮನಿಸಿದರೆ ಆತ ದಂಡ-ಪಿಂಡ ಎಂಬುದು ನಿಸ್ಸಂಶಯವಾಗಿ ಸಾಬೀತಾಗುತ್ತದೆ! ಅನಂತ್ಮಾಣಿಯ ಕದಂಬ ವಸತಿಯೋಜನೆ, ಅಂಟುರಾಳ, ವೆನಿಲ್ಲಾ, ಅಡಿಕೆ ಬೆಲೆ ನಿಗದಿ..... ಎಲ್ಲವೂ ಲೊಳಲೊಟ್ಟೆಯೇ!!


ಅಂತೂ ಅನಂತ್ಮಾಣಿಗೆ ಮಂತ್ರಿಗಿರಿ ಒಣ ರುಬಾಬಿಗೆ ಬೇಕಷ್ಟೇ! ಮತ್ತೆ ಗೆಲ್ಲುತ್ತೇನೆಂಬ ಭರವಸೆಯಾಗಲಿ, ಬಿಜೆಪಿ ಟಿಕೆಟ್ ಸಿಗುತ್ತದೆಂಬ ಧೈರ್ಯವಾಗಲಿ ಅನಂತ್ಮಾಣಿಗೆ ಇಲ್ಲ. ಪಾರ್ಟಿಯಲ್ಲಿ ಹಾಗು ಜನಸಾಮಾನ್ಯರ ನಡುವೆ ಆ ಮಟ್ಟಕ್ಕೆ ಮಾಣಿ "ಯೋಗ್ಯತೆ" ಖರಾಬಾಗಿದೆ. ಕಳೆದ ಎಲೆಕ್ಷನ್‌ನಲ್ಲಿ ತಾನು ಗೆಲ್ತೇನೆಂದು ಖುದ್ದು ಮಾಣಿಗೇ ನಂಬಿಕೆ ಇರಲಿಲ್ಲ. ಮೋದಿ ಮಂಕುಬೂದಿ ಹವಾ ಮತ್ತು ಉತ್ತರ ಕನ್ನಡದಾದ್ಯಂತ ದೇಶಪಾಂಡೆ ವಿರುದ್ಧ ಎದ್ದಿದ್ದ ಆಕ್ರೋಶದ ಅಲೆಯ ಏರಿ ಮಾಣಿ ಬಚಾವಾಗಿದ್ದ. ಹೀಗಾಗಿ ಈ ಬಾರಿ ಮಂತ್ರಿಯಾಗದಿದ್ರೆ ತನಗೆಂದೂ ಛಾನ್ಸ್ ಸಿಗ[...] ಮಾಣಿ ಮಜಬೂತ್ ಮಸಲತ್ತು ಮಾಡುತ್ತಿದ್ದಾನೆ.

ಅನಂತ್ಮಾಣಿ ತಾನು ಮೋದಿ ಮಂತ್ರಿಮಂಡಲ [...] ರಚನೆ ಹೊತ್ತಲ್ಲಿ ಮಂತ್ರಿಯಾಗೋದು ಗ್ಯಾರಂಟಿ [...] ವದಂತಿ ಜಿಲ್ಲೆಯಾದ್ಯಂತ ಹಬ್ಬಿಸಿದ್ದಾನೆ. ಜತೆಗೆ [...] ಆಗಲಿ, ಆಗದಿರಲಿ ಮುಂದೆ ಸಂಸತ್ತಿಗೆ ಸ್ಪರ್ಧಿಸೋ[...] ಎಂತಲೂ ಪರಮಾಪ್ತ ವಲಯದಲ್ಲಿ ಹೇಳಿಕೊಂಡಿ[...] ಆತನ ಗುರಿ ಕುಮಟಾ ಅಸೆಂಬ್ಲಿ ಕ್ಷೇತ್ರದಿಂದ ಶಾಸ[...] ಯಡ್ಡಿಯ ಕನಸಿನ ಸರ್ಕಾರದಲ್ಲಿ ಮಂತ್ರಿಯಾಗೋ[...] ಅನಂತ್ಮಾಣಿ ಕೇಂದ್ರ ಮಂತ್ರಿಯಾಗಲು ವ[...] ಎಮ್ಮೆಲ್ಲೆಯಾಗಲು ಯಾವ್ಯಾವ ರೀತಿಯ ಹಿಕ[...] ಮಾಡುತ್ತಿದ್ದಾನೋ ಅದಕ್ಕಿಂತ ಬಿರುಸಾಗಿ ವಿರೋ[...] ಕಾರ್ಯಾಚರಣೆ ವಿಶ್ವೇಶ್ವರ ಹೆಗಡೆ ಕಾಗೇರಿ ಮಾಡುತ್ತಿ[...] ಅನಂತ್ಮಾಣಿ ಕೇಂದ್ರ ಮಂತ್ರಿಯಾದರೆ ಅಥವಾ ಕುಮ[...] ಶಾಸಕನಾದರೆ ತನ್ನ ಕತೆ ಖತಮ್ ಎಂಬ ಆತಂ[...] ಕಾಗೇರಿ ಮಾಣಿ ಗೊಬ್ರ ಮಂತ್ರಿಯೂ ತನ್ನ ಗಾಡ್‌ಫಾ[...] ಆಗಿರುವ ಅನಂತ್‌ಕುಮಾರ್ (ಶಾಸ್ತ್ರಿ) ಹಿಡಿದುಕೊ[...] ವೈರಿಗೆ ಮದ್ದರೆಯುತ್ತಿದ್ದಾನೆ. ಇಬ್ಬರೂ ಸಂಘಪರಿವ[...] ಚೆಡ್ಡಿ-ಕೇಸರಿ ವಲಯದ ಸರದಾರರೇ ಆದರೂ ಕಾ[...] ಎಬಿವಿಪಿ ಕೇಡರಿನ ನಾಜೂಕಯ್ಯ; ಅನಂತ್ಮಾಣಿ ಹಿಂ[...] ಜಾಗರಣ ವೇದಿಕೆಯ ಬೆಂಕಿ ನವಾಬ. ಹೀಗಾಗಿ ತಿ[...] ಜೋರಾಗಿದೆ; ಜಿಲ್ಲಾ ಬಿಜೆಪಿಯಲ್ಲಿ ತಲ್ಲಣ ಶುರುವಾ[...] ಕಾಗೇರಿ ಕತೆ ಮುಗಿಸಲು ಅನಂತ್ಮಾಣಿ ಹವಣಿಸಿ[...] ಆತನನ್ನು ಮಾಜಿ ಸಂಸದ ಮಾಜಿ[...] ಅನಂತ್-ಬಿಜೆಪಿ-ಶಾಸ್ತ್ರಿ-ಪ್ರಹ್ಲಾದ್ ಜೋಶಿ [...] ತೊಟ್ಟಿದ್ದಾರೆ. ಇದೂ ಬ್ರಾಹ್ಮಣ ರಾಜಕೀಯ. ಬ[...] ಯಡ್ಡಿ ರಾಜ್ಯ ಬಿಜೆಪಿ ಅಧ್ಯಕ್ಷನಾದಾಗ ಆತನಿಗಿಂತ[...] ಹೆಚ್ಚು ಸಂಭ್ರಮ ಪಟ್ಟಿದ್ದು ಸಂಸದ ಅನಂತ್ಮಾಣಿ. ಏಕೆ[...] ಯಡ್ಡಿಗೆ ಆತನ ಆಜನ್ಮವೈರಿ ಅನಂತ್‌ಕುಮಾರ್ ([...] ಮತ್ತು ಪ್ರಹ್ಲಾದ್ ಜೋಶಿ ಬಣದ ಮುಂಚೂಣಿ ಬ್ರಾ[...] ಮುಂದಾಳು ಕಾಗೇರಿ ತಲೆ ಕಂಡರಾಗದು. ಈ ಕಾರ[...] ಅನಂತ್ಮಾಣಿ ಯಡ್ಡಿ ಬಾಲ ಹಿಡಿದುಕೊಂ[...] ಓಡಾಡಲಾರಂಭಿಸಿದ್ದು. ಯಾವಾಗ ತನ್ನ ಪರಮಾಪ್ತ ಮ[...] ಮಂತ್ರಿ, ಭಟ್ಕಳದ ಶಿವಾನಂದ ನಾಯ[...] ಅನಾರೋಗ್ಯದಿಂದಾಗಿ-ಆರ್ಥಿಕ ಹಿಂಜರಿತದಿಂ[...] ರಾಜಕೀಯ ಮಾಡಲಾಗದೆ ಮುದುಡಿಕೊಂಡನೋ [...] ಯಡ್ಡಿ ಉತ್ತರ ಕನ್ನಡದ ಕಾಗೇರಿ ಹಣಿವ ಹಾರವನ್ನು[...] ಯಡ್ಡಿ ಮಹಾತ್ಮ ತನ್ನ ಟೀಮು ರಚಿಸಿಕೊಳ್ಳುವಾಗ ಅನಂತ್ಮಾಣಿಗೆ ಕರೆದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಪದವಿ ದಯಪಾಲಿಸಿದ್ದಾರೆ. ಈ ಅಚಾನಕ್ ಭಾಗ್ಯಕ್ಕೆ ಮಾಣಿಯೇ ಬೆಚ್ಚಿ ಬಿದ್ದಿದ್ದಾನೆ. ಯಡ್ಡಿಜೀ ಕೊಟ್ಟಿರುವ ಅಸ್ತ್ರ ಎದುರಾಳಿ ಕಾಗೇರಿ ಮಾಣಿಯನ್ನು ಮುರಿದು ಹಾಕಲು ಹೆಲ್ಪ್ ಆಗಬಹುದೆಂಬ ಲೆಕ್ಕಾಚಾರದಲ್ಲಿ ಎತ್ತಿಕೊಂಡಿರುವ ಅನಂತ್ಮಾಣಿಯ ಕಣ್ಣಿರುವುದು ಮಾತ್ರ ಕೇಂದ್ರ ಮಂತ್ರಿಗಿರಿಯ ಕೆಂಪುಗೂಟದ ಕಾರಿನ ಮೇಲೆಯೇ....

ಐದೈದು ಬಾರಿ ಪಾರ್ಲಿಮೆಂಟಿಗೆ ಗೆದ್ದುಹೋಗಿರುವ ತಾನು ಈ ಸಲವಾದ್ರೂ ಮಂತ್ರಿ ಆಗಲೇಬೇಕೆಂಬ ಜೀವನದ ಕೊನೆಯಾಸೆಯಲ್ಲಿರುವ ಅನಂತ್ಮಾಣಿ ಹಿಂದೂತ್ವದ ಹರಿಕಾರ ತಾನೆಂದು ಮೋದಿಗೆ ಮನದಟ್ಟು ಮಾಡಲು ಸುಖಾಸುಮ್ಮನೆ ಸಾಬರ ಬಯ್ಯುತ್ತ ನಮಚ್ಛತನ್ನ ಪ್ರದರ್ಶಿಸುತ್ತಿದ್ದಾನೆ. ಹೆಚ್ಚುಕಮ್ಮಿ ಹದಿನೈದು ವರ್ಷ ಪಾರ್ಲಿಮೆಂಟ್‌ನಲ್ಲಿ ಕುಳಿತು ಗೊರಕೆ ಹೊಡೆದಿರುವ ಅನಂತ್ಮಾಣಿಯಿಂದ ಉತ್ತರ ಕನ್ನಡ ಜಿಲ್ಲೆಗೆ ಮೂರು ಬಿಲ್ಲಿ ಪ್ರಯೋಜನವೇನಾಗಿಲ್ಲ! ಅನಂತ್ಮಾಣಿಗೆ ಮಾಜಿ ಎಂಪಿ ದೇವರಾಯ ನಾಯ್ಕನ ಅಣ್ಣನೆಂದು ಜನ ಅಡ್ಡ ಹೆಸರಿಟ್ಟು ತಮಾಷೆ ಮಾಡುತ್ತಿದ್ದಾರೆ. ಅನಂತ್ಮಾಣಿಯಂತೆಯೇ ಆ ದೇವರಾಯ ನಾಯ್ಕನೂ ಕರ್ಮಗೇಡಿಯಾಗಿದ್ದ. ರಸ್ತೆ ಸೇತುವೆ ಕಾಮಗಾರಿಯಂಥ ಚಿಲ್ಲರೆ ಅಭಿವೃದ್ಧಿ ಎಮ್ಮೆಲ್ಲೆಗೆ ಸಂಬಂಧಿಸಿದ್ದು. ತನ್ನದೇನಿದ್ದರೂ ದಿಲ್ಲೀಲಿ ಚಿಂತನ-ಮಂಥನ ಮಾಡಿ ಕಾನೂನು-ಮಸೂದೆ ಮಾಡೋ ಮಹಾಕಾರ್ಯ ಎಂದು ದೇವರಾಯ ನಾಯ್ಕ ಸಂಸದನಾಗಿದ್ದಾಗ ಹಲುಬುತ್ತಿದ್ದ ಇದೇ ರಾಗ ಚಾಚೂತಪ್ಪದೆ ಅನಂತ್ಮಾಣಿ ಈ ಒಂದೂವರೆ ದಶಕ ಕಾಲ ಹಾಡಿದ್ದಾನೆ.

ಹಿಂದೂತ್ವದ ಕಿಚ್ಚು ಹಚ್ಚಿ ಬೇಳೆಬೇಯಿಸಿಕೊಳ್ಳುವ

ಅಸ್ನೋಟಿಕರ್ ಆಟ!




ಕಾರವಾರದಲ್ಲಿ ಹಿನಾಯವಾಗಿ ಸೋತು ಕ್ಷೇತ್ರದಿಂದಲೇ ಪಲಾಯನ ಮಾಡಿ ಗೋವಾ-ಮುಂಬೈ-ದುಬೈ ಎಂದೆಲ್ಲ ಅಂಡಲೆಯುತ್ತಾ ಸಖಿಯರ ಸಂಗಡ ತಲೆ ಮರೆಸಿಕೊಂಡಿದ್ದ ಮಾಜಿ ಮಂತ್ರಿ ಆನಂದ್ ಅಸ್ನೋಟಿಕರ್ ನಿಧಾನಕ್ಕೆ ಬಿಲದಿಂದ ಹೊರಬರಲು ಕಣಿ ಕೇಳುತ್ತಿದ್ದಾರೆ. ಯಡ್ಡಿ ರಾಜ್ಯ ಬಿಜೆಪಿ ಯಜಮಾನನಾಗುತ್ತಲೇ ಥೈಲಿ ಲೆಕ್ಕಾಚಾರ ಹಾಕುತ್ತ ಮತ್ತೆ ಚೆಡ್ಡಿ ಪಾರ್ಟಿಯೊಳಗೆ ನುಸುಳುವ ಹಿಕಮತ್ತು ಮಾಡುತ್ತಿದ್ದಾರೆ.

ಯಡ್ಡಿಗೆ ಕಪ್ಪ ಕೊಟ್ಟರೆ ಟಿಕೆಟ್ ಖಾತ್ರಿ ಎಂದುಕೊಂಡಿರುವ ಅಸ್ನೋಟಿಕರ್ ದೂರ ತಳ್ಳುತ್ತಿರುವ ಸಂಘ ಪರಿವಾರದ ವಿಶ್ವಾಸ ಗಳಿಸಲು ಸ್ಕೆಚ್ ಹಾಕಿದ್ದಾರೆ. ಆರೆಸ್ಸೆಸ್ ಕೇಂದ್ರ ಸ್ಥಾನ ನಾಗಪುರಕ್ಕೆ ಹೋಗಿ ಮೂರು ತಿಂಗಳು ತರಬೇತಿ ಪಡೆದು ಚೆಡ್ಡಿಗಳ ಒಲಿಸಲು ಅಸ್ನೋಟಿಕರ್ ರೆಡಿಯಾಗಿದ್ದಾನೆ. ಆದರೆ ಸದ್ಯಕ್ಕೆ ತನಗೆ ರಾಜಕೀಯ ಪ್ರವೇಶಿಸಲು ಜಾತಕ ಬಲವಿಲ್ಲವೆಂದು ಜ್ಯೋತಿಷಿಗಳು ಹೇಳಿದ್ದಾರಂತೆ. 2017 ರಲ್ಲಿ ತಾರಾಬಲ ಕೂಡಿಬರುವುದರಿಂದ ಆಗ ಬರೋಬ್ಬರಿ 5 ಕೋಟಿಯ ಪ್ರಾಜೆಕ್ಟ್ ಸಿದ್ಧಪಡಿಸಿಕೊಂಡು ಅಖಾಡಕ್ಕೆ ಇಳಿಯಲು ನಿರ್ಧರಿಸಿದ್ದಾರೆ. ಆಗ ಚುನಾವಣಾ ತಯಾರಿಗೆ ಒಂದು ವರ್ಷ ಸಮಯ ಸಿಗುತ್ತದೆಂದು ಈಚೆಗೆ ಕಾರವಾರಕ್ಕೆ ಬಂದಿದ್ದ ಅಸ್ನೋಟಿಕರ್ ಅಳಿದುಳಿದ ಹಿಂಬಾಲಕರ ಎದುರು ಬಡಬಡಿಸಿಹೋಗಿದ್ದಾನೆ.

ಅಸ್ನೋಟಿಕರ್ ಕಾಂಗ್ರೆಸ್ ಸೇರಲು ತಿಪ್ಪರಲಾಗ ಹಾಕಿದರೂ ದೇಶಪಾಂಡೆ ಆತನಿಗೆ ಪ್ರವೇಶ ಸಿಗದಂತೆ ಮಾಡಿದ್ದಾರೆ. ಹೀಗಾಗಿ ಆತನಿಗೆ ಬಿಜೆಪಿಯೇ ಗತಿ ಎಂಬಂತಾಗಿದೆ. ಯಡ್ಡಿಯ 'ಸಿಜರಿನ್ ಸಚಿವ'ನಾಗಿದ್ದ ಈ ಅದ್ನಾಡಿ ಅಧಿಕಾರ ಸಿಕ್ಕಾಗ ಕಳ್ಳ (ಸೇಂದಿ) ಕುಡಿಸಿದ ಮಂಗನಂತಾಡಿದ್ದು ಇವತ್ತಿಗೂ ಕಾರವಾರ-ಅಂಕೋಲಾ ಜನ ಮರೆತಿಲ್ಲ, ಹಾಗಂತ ಅಸ್ನೋಟಿಕರ್‌ನ ಶಾಸಕನಾಗುವ ತೆವಲೇನೂ ಕಮ್ಮಿಯಾಗಿಲ್ಲ. ಒಮ್ಮೆ ಯ[...] ಸರ್ಕಾರ ಬೀಳಿಸುವವರ ಜೊತೆ ಸೇರಿಕೊಂಡು ಶಾಸಕತ್ವಕ್ಕೆ ಸಂಚಕಾರ ತಂದುಕೊಂಡ[...] ಈ ಎಡವಟ್ಟು ಪುಢಾರಿ ಮತ್ತೊಮ್ಮೆ ಉಪಮುಖ್ಯಮಂತ್ರಿಯಾಗಲು ಹಾರಾಡಿ[...] ಏನೂ ಆಗದಿದ್ದಾಗ ಗೋವಾದಲ್ಲೂ ರಾಜಕಾರಣ ಮಾಡ್ತೇನೆ, ಮಾವ ಸಂಜ[...] ಬಾಂದೀಕರನ ಕಾಣಕೋಣ (ಕಾರವರ ಗಡಿಕ್ಷೇತ್ರ)ದಲ್ಲಿ ಎಮ್ಮೆಲ್ಲೆಯಾಗ್ತೇನೆ. ಗೋವಾ[...] ಸಿಎಂ ಆಗ್ತೇನೆಂದೆಲ್ಲ ಬಹಿರಂಗವಾಗೇ ಬೊಬ್ಬಿರಿದಿದ್ದ. ಇಂಥ ಇತಿಹಾಸ-ಭೂಗೋಳ[...] ಅಸ್ನೋಟಿಕರ್ ಸಾವಕಾಶವಾಗಿ ಯಡ್ಡಿ ಪರಿವಾರ ಸೇರಲು ಸರ್ಕಸ್ ಶುರು ಹಚ್ಚಿಕೊಂಡಿದ[...]

ಅಸ್ನೋಟಿಕರ್ ಚಲನವಲನ ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಸ್ವಯಂಘೋಷಿ[...] ಸಮಾಜ ಸೇವಕರಿಗೆ, ಅಸಲಿ ಚೆಡ್ಡಿಗಳಿಗೆ, ಹಾಲಿ ಶಾಸಕರಿಗೆಲ್ಲ ಒಂಥರಾ ಶಾ[...] ನೀಡಿಬಿಟ್ಟಿದೆ. ಶಾಸಕ ಸತೀಶ್ ಸೈಲ್ ಲೆಕ್ಕದಲ್ಲಿ ಕಾಂಗ್ರೆಸ್ ಸಹ-ಶಾಸಕ. ಆದರೆ ಆ[...] ಕಾಂಗ್ರೆಸ್ ಸಹವಾಸದಲ್ಲಿ ಸಂತೋಷವಾಗೇನೂ ಇಲ್ಲ. ದೇಶಪಾಂಡೆಯ ಡಬ್ಬಲ್‌ಗೇಮ[...] ಆತನನ್ನು ಹತಾಶನಾಗಿಸಿಬಿಟ್ಟಿದೆ. ಹೀಗಾಗಿ ಅದಿರು ಮಾಫಿಯಾದ ಡಾನ್ ಡಾಕೂಗಳ[...] ರೆಡ್ಡಿ ಅಂಡ್ ಕೋ ಜತೆಗಿನ ಸಖ್ಯಾ ಪ್ರಯೋಗಿಸಿ ಬಿಜೆಪಿ ಕ್ಯಾಂಡಿಡೇಟಾಗು[...] ದೂರಾಲೋಚನೆ ಸೈಲ್ ಮಾಡಿದ್ದಾನೆ. ಹಾಗೆಯೇ ಕಾರವಾರದ ಕೊಳೆ ತೆಗೆದು ಸು[...] ಮಾಡುತ್ತಿರುವ "ಸಮಾಜ ಸುಧಾರಕ" ಒಬ್ಬ ಬಿಜೆಪಿ ಟಿಕೆಟ್‌ಗೆ "ಪಹರೆ" ನಿಂತಿದ್ದಾ[...] ಅಸ್ನೋಟಿಕರ್ ಮಂತ್ರಿಯಾಗಿದ್ದಾಗ ಆತನ "ಸಪ್ಲೈಯರ್" ಆಗಿದ್ದ ಸ್ವಜಾತಿ ಬಂಧುವ[...] ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾನೆ. ತನ್ನ ತಂದೆ ಆರೆಸ್ಸೆಸ್ ನಿಷ್ಠಾವಂತ ಕಾರ್ಯಕರ್ತನೆಂ[...] ಮೆರಿಟ್ ಮೇಲೆ ಬಿಜೆಪಿ ಟಿಕೆಟ್ ಎಗರಿಸುವ ಪ್ಲಾನ್ ಹಾಕಿದ್ದ ಈ ಅಂಕೋಲಾ ಪಪಂ ಸದಸ್ಯ ಅಸ್ನೋಟಿಕರ್ ಬಿಜೆಪಿಗೆ ಬಂದರೆ ಬಾಯಿ ಮುಚ್ಚಬೇಕಾಗುತ್ತದೆ. ಅಸ್ನೋಟಿಕರ್ ಕಾಂಗ್ರೆಸ್ ಕ್ಯಾಂಡಿಡೇಟ್ ಆದಾಗ ಬಿಜೆಪಿಗೆ ಬೈಹೇಳಿದ "ಸಂಘನಿಷ್ಠೆ" ಈತನದು.



ಇವರೆಲ್ಲ ಅಸ್ನೋಟಿಕರ್ ಆಟದಿಂದ ದಿಕ್ಕುತಪ್ಪಿದಂತಾಗಿದ್ದಾರೆ. ಪಾಪ ಒಟ್ಟಿನಲ್ಲಿ ಉತ್ತರ ಕನ್ನಡದ ಬಿಜೆಪಿ ರಾಜಕಾರಣದಲ್ಲಿ ಯಡ್ಡಿ ಇಫೆಕ್ಟ್, ಸೈಡ್ ಇಫೆಕ್ಟ್‌ಗಳಾಗುತ್ತಿವೆ.

ಮತುಕಾಟ ಶುರುಮಾಡಿದ್ದರು. ಈ ಶಿವಾನಂದ ನಾಯ್ಕ್ ಭಟ್ಕಳದ ಕೋಮು ...ಗಿಸುಂಡದ ಬೈ-ಪ್ರಾಡಕ್ಟ್. ಅನಂತ್ಕುಮಾರ್ ಹೆಗಡೆಯ ಹಿಂಬಾಲಕನಾಗಿದ್ದಾತ. ಮಾಣಿ ಕೋಮು ...ರ್ಯ ಮಾಡುತ್ತಲೇ ಮರೆಸಿಕೊಂಡಾಗೆಲ್ಲ ಈ ನಾಯ್ಕ್ ಆತನ ಗುರುವಿಗೆ ...ಮಗುದಾಣ ಕಲ್ಪಿಸುತಿದ್ದಾತ.

ಇಂಥ ಗುರು-ಶಿಷ್ಯರ ನಡುವೆ ವೈಮನಸ್ಸು ಮೂಡಿದ್ದು ಕೋಚಾ ಸರ್ಕಾರದಲ್ಲಿ ...ಯ್ಕ್ ಮಂತ್ರಿಯಾದಾಗ. ತನಗಿಂತ ಜೂನಿಯರನೂ, ಲಾರಿ ಕ್ಲೀನರಿಕೆ ಮಾಡಿಕೊಂಡಿದ್ದ ...ದ್ದನೂ ಆದ ಶಿವಾನಂದ್ ನಾಯ್ಕ್ ಕ್ಯಾಬಿನೆಟ್ ಮಂತ್ರಿಯಾಗಿದ್ದು ಬ್ರಾಹ್ಮಣಿಕೆ ...ದ್ಧಿಯ ಅನಂತ್ಕುಮಾರ್‌ಗೆ ಸಹಿಸಲಾಗಲಿಲ್ಲ. ಆಗ ಶುರುವಾದ ಮಾಣಿ ದ್ವೇಷದ ...ಯ್ಕನ ಮಾಜಿ ಮಂತ್ರಿ, ಮಾಜಿ ಶಾಸಕ, ಮಾಜಿ ಬಿಜೆಪಿಗ ಮಾಡುವ ತನಕ ...ಯ್ತು. ಗತಿಯಿಲ್ಲದೆ ಜೆಡಿಎಸ್‌ಗೆ ಹೋಗಿದ್ದ ನಾಯ್ಕ್ ಅಲ್ಲಿ ಬಕ್ರತ್ತಾಗದೇ ...ಗ ಬಿಜೆಪಿಯಲ್ಲಿದ್ದೂ ಇಲ್ಲದಂತಿದ್ದಾರೆ. ಹೀಗಾಗಿ ಯಡ್ಡಿ ಅನಂತ್ಕುಮಾರ್‌ಗೆ ದೀಕ್ಷೆ ...ಟ್ಟಿದ್ದಾರೆ. ಯಡ್ಡಿ ಬಲದಿಂದ ಹಿತಶತ್ರು ಕಾಗೇರಿಗೆ ಶಿವಾನಂದ್ ನಾಯ್ಕರ ...ತಿ"ಯೇ ತೋರಿಸುವ ಪಣ ಅನಂತ್ಕುಮಾರ್ ತೊಟ್ಟಿದ್ದಾರೆ.

ಶಾಸಕನಾಗಿ ಮಂತ್ರಿಯಾಗುವ ಆಸೆಯಲ್ಲಿರುವ ಅನಂತ್ಕುಮಾರ್‌ನ ಮೊದಲ ಆಯ್ಕೆಯ ...ತ್ರ ಹವ್ಯಕರೇ ಹೆಚ್ಚಿರುವ ಶಿರಸಿ-ಸಿದ್ದಾಪುರ. ಆದರದು ಕಾಗೇರಿ ಕೈಯ್ಯಲ್ಲಿದೆ. ...ಷ್ಟು ಸುಲಭಕ್ಕೆ ಕಾಗೇರಿ ಕದಲಿಸಲಾಗದೆಂಬ ವಾಸ್ತವ ಅರಿತಿರುವ ಅನಂತ್ಕುಮಾರ್‌ಗೆ ...ಕ್ಷದ ಯಲ್ಲಾಪುರ ಸುರಕ್ಷಿತವಾಗಿ ಕಾಣುತ್ತಿದೆ. ಇಲ್ಲೂ ಹವ್ಯಕರು ಹೆಚ್ಚಿದ್ದಾರೆ. ...ಯುಂಡಗೋಡದಲ್ಲಿ ಹಿಂದುತ್ವದ ಪಡೆಯಿದೆ. ಆದರೆ ಅಲ್ಲಿಯ ಕಾಂಗ್ರೆಸ್ ಶಾಸಕ ...ವರಾಮ ಹೆಬ್ಬಾರ್ ಜತೆಗಿನ ನಂಟು ಅನಂತ್ಕುಮಾರ್‌ಗೆ ಅತ್ತ ಹೋದಂತೆ ತಡೆಯುತ್ತಿದೆ. ...ಯಲ್ಲಾಪುರದ ಮಾಜಿ ಶಾಸಕ ವಿ.ಎಸ್. ಪಾಟೀಲ ಬಿಜೆಪಿಗನಾದರೂ ಅನಂತ್ಕುಮಾರ್‌ನ ...ಡುವಿರೋಧಿ. ಹೀಗಾಗಿ ಅಲ್ಲಿ ಕಾಂಗ್ರೆಸ್ ಮಿತ್ರ ಹೆಬ್ಬಾರನೇ ಗೆಲ್ಲಲಿ ಎಂಬ ದೊಡ್ಡ ...ಮನಸ್ಸು ಅನಂತ್ಕುಮಾರ್‌ನದು. ಅಂದಹಾಗೆ ಇದೇ ಹೆಬ್ಬಾರ್ ಜಿಲ್ಲಾ ಬಿಜೆಪಿ ...ಧ್ಯಕ್ಷನಾಗಿದ್ದಾಗ ಎಂಪಿ ಅನಂತ್ಕುಮಾರ್ ಯಾವುದೋ ಸಿಟ್ಟಿಗೆ ಆತನಿಗೆ ಕಪಾಳಮೋಕ್ಷ ...ಮಾಡಿದ್ದ ಈ ಬೇಸರದಲ್ಲೇ ಹೆಬ್ಬಾರ್ ಬಿಜೆಪಿ ಬಿಟ್ಟು ಕಾಂಗ್ರೆಸ್ ಪಾಲಾಗಿದ್ದು. ಈಗ ...ನಂತ್ಕುಮಾರ್-ಹೆಬ್ಬಾರ್ ಗಳಸ್ಯಕಂಠಸ್ಯ.

ಅದಿರಲಿ, ಅಂತಿಮವಾಗಿ ಅನಂತ್ಕುಮಾರ್ ಆಯ್ಕೆ ಮಾಡಿಕೊಂಡಿರುವುದು ...ಮಟಾ-ಹೊನ್ನಾವರ ಕ್ಷೇತ್ರ. ಒಂದು ಕಾಲದಲ್ಲಿ ಭಟ್ಕಳ ಆತನ "ಕರ್ಮ" ...ಭೂಮಿಯಾಗಿದ್ದರೂ ಅಲ್ಲಿಂದ ಗೆಲ್ಲುವ ತಾಕತ್ತು ಈಗ ಆತನಿಗೆ ಇಲ್ಲ. ಹೀಗಾಗಿ ...ಮಟಾದಿಂದ ಶಾಸಕನಾಗಿ, ಕಾಗೇರಿಯನ್ನು ಶಿರಸಿಯ ಮಾಜಿ ಶಾಸಕನನ್ನಾಗಿ ಮಾಡಿ ...ಯಡ್ಡಿ ಮಂತ್ರಿಮಂಡಲದ ಪವರ್‌ಫುಲ್ ಜನಿವಾರ ಮಂತ್ರಿಯಾಗುವ ಸ್ಕೆಚ್ ಮಾಣಿಯದು. ...ನ್ನು ಎರಡು ವರ್ಷದಲ್ಲಿ ಏನೇನಾಗುತ್ತದೋ. ಆದರೆ ಈಗಲೇ ಕುಮಟಾ ಕ್ಷೇತ್ರದ ...ಬಿಜೆಪಿಯಲ್ಲಿ ಟಿಕೆಟ್ ಕಸರತ್ತು ಬಿರುಸಾಗಿದೆ. ಒಂದರ್ಧ ಡಜನ್ ಎಮ್ಮೆಲ್ಲೆ ಆಕಾಂಕ್ಷಿಗಳು ...ಬಿಜೆಪಿ ಸಂಘಪರಿವಾರದ ದೀಕ್ಷೆ ಪಡೆದು ಕ್ಷೇತ್ರದಲ್ಲಿ ಓಡಾಡಲಾರಂಭಿಸುತ್ತಲೇ ತಮ್ಮ ...ಷ್ಟು ಹಣ ಹರಿಸುತ್ತ ಜನರ ಮಂಗ ಮಾಡಲು ಹವಣಿಸುತ್ತಿದ್ದಾರೆ. ಇದರಲ್ಲಿ ಎದ್ದು ...ಕಾಣುವಾತ ಯಡ್ಡಿ-ಶೋಭಾ ಗ್ಯಾಂಗಿನ ನಾಗರಾಜ ನಾಯಕ್ ಎಂಬ ನಿವೃತ್ತ ಅರಣ್ಯ ...ಧಿಕಾರಿ. ಈತ ಹೊಸಪೇಟೆಯಲ್ಲಿ ಮೊನ್ನೆ-ಮೊನ್ನೆವರೆಗೂ ಡಿಸಿಎಫ್ ಆಗಿದ್ದಾತ. ...ಕಳೆದೊಂದು ವರ್ಷದಿಂದ ತಾನೇ ಬಿಜೆಪಿ ಕ್ಯಾಂಡಿಡೇಟ್, ತನಗೆ ಶೋಭಾ ಕರಂದ್ಲಾಜೆ ...ಟಿಕೆಟ್ ಪಕ್ಕಾ ಮಾಡಿದ್ದಾರೆಂದೂ ತುತ್ತೂರಿ ಊದುತ್ತಿದ್ದಾನೆ. ಕುಮಟಾ-ಹೊನ್ನಾವರದ ...ಕ್ರೀಡೆ-ಸಾಂಸ್ಕೃತಿಕ ಕಾರ್ಯಕ್ರಮ, ಮದುವೆ-ಮುಂಜಿ-ಷಷ್ಠ್ಯಕ್ಕೆಲ್ಲ ಹಣ ಹಂಚುತ್ತಿದ್ದಾನೆ.

ಲಕ್ಷ-ಲಕ್ಷಗಟ್ಟಲೆ ಹಣ ಹರಿಸುತ್ತಿರುವ ನಾಗರಾಜ ನಾಯಕ್ ಅರಣ್ಯ ...ಇಲಾಖೆ-ಜಲಾನಯನ ಇಲಾಖೆಯಲ್ಲಿ ಮಾಡಿರುವ ಲೂಟಿ-ಅವ್ಯವಹಾರ ...ಹೇಳತೀರದು. ಹಾಸನದಲ್ಲಿದ್ದಾಗ ಈತ ಜಲಾನಯನ ಇಲಾಖೆಯ ಅಕ್ಕಿ ಕದ್ದು ...ಸಿಕ್ಕಿಬಿದ್ದಿದ್ದ. ತಿಂಗಳುಗಟ್ಟಲೆ ಜೈಲಲ್ಲಿದ್ದ ಈತ ಬೇನಾಮಿಯಾಗಿ ಸಾಫ್ಟ್‌ವೇರ್ ...ಕಂಪನಿ ತೆರೆವಷ್ಟು ಸರ್ಕಾರಿ ರೊಕ್ಕ ಲಪಟಾಯಿಸಿದ್ದಾನೆಂದು ಜನರಾಡಿಕೊಳ್ಳುತ್ತಿದ್ದಾರೆ. ...ಕಡಬಿ ದುಡ್ಡಿನ ಮದ ನಾಗರಾಜ ನಾಯಕ್‌ಗೆ ಎಮ್ಮೆಲ್ಲೆ ತೆವಲೇರಿನಿರುವ ...ಕತೆಯೇ ಪ್ರತ್ಯೇಕ ಪುರಾಣದಷ್ಟಿದೆ. ಈ ಕಳ್ಳ ಸರ್ಕಾರಿ ನೌಕರನ ದುಡ್ಡಿನ ...ಹುಮಾಕಿಗೆ ಕಳೆದ ಬಾರಿ ಸೋತ ಸೂರಜ್ ನಾಯ್ಕ್ ಸೋನಿ ದಿಕ್ಕೆಟ್ಟು ...ಹೋಗಿದ್ದಾನೆ ಪಾಪ. ರಾಜ್ಯ ಯುವ ಬಿಜೆಪಿ ಅಧ್ಯಕ್ಷನೂ, ಸ್ವಜಾತಿ ಬಂಧುವೂ ...ಆಗಿರುವ ಕಾರ್ಕಳ ಶಾಸಕ ಸುನಿಲ್‌ಕುಮಾರ್ ತನ್ನ ಕಾಪಾಡಬಹುದೆಂಬ ...ನಿರೀಕ್ಷೆ ಸೂರಜ್‌ನದು.

ಕುಮಟೆಯ 'ಸಿಜರಿನ್ ಡಾಕ್ಟರ್' ಎಂದೇ ಹೆಸರುವಾಸಿಯಾಗಿರುವ ಡಾ. ಜಿ.ಜಿ. ಹೆಗಡೆ ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ನೆಗೆದಿರುವುದೇ ಎಮ್ಮೆಲ್ಲೆ ಆಗುವ ...ಆಸೆಯಿಂದ. ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಕೈಕೊಟ್ಟರೂ ...ನಂಬಿದ ಗುರು ರಾಘವೇಶ್ವರ ಸ್ವಾಮೀಜಿ ಕೈಬಿಡಲಿಕ್ಕಿಲ್ಲ ಎಂಬ ನಂಬಿಕೆ ಈ ...ಡಾಕ್ಟರ್‌ನದು. ಯಾರೋ ಮೈತೊಳೆದಿಟ್ಟ ಗೋವಿನ ಪೂಜೆ ಮಾಡಿದ ಪುಣ್ಯ ...ಕಾಪಾಡುತ್ತದೆಂದು ಜಿ.ಜಿ. ಹೆಗಡೆ ವಿಧಾನಸೌಧದ ಕನಸು ಕಾಣುತ್ತಿದ್ದಾರೆ. ...ಯಡ್ಡಿಯ ಕೆಜೆಪಿ ಸಂಗಾತಿ-ಹಾಲಿ ಜಿಪಂ ಸದಸ್ಯೆ ಗಾಯತ್ರಿ ಗೌಡ ತಾನೇ ...ಶಾಸಕಿಯಾದ ಗತ್ತಲ್ಲಿ ಈಗಾಗಲೇ ತಿರುಗಾಟ ಆರಂಭಿಸಿಬಿಟ್ಟಿದ್ದಾರೆ. ಇವರೆಲ್ಲರ ...ನಡುವೆ ಜೆಡಿಎಸ್‌ನಲ್ಲಿ ಇದ್ದೂ ಇಲ್ಲದಂತಾಡುತ್ತಿರುವ ಮಾಜಿ ಶಾಸಕ ದಿನಕರ್ ...ಶೆಟ್ಟಿ ಬಿಜೆಪಿ ಟಿಕೆಟ್‌ಗೆ ಒಳಗೊಳಗೇ ಕಟಿಪಿಟಿ ನಡೆಸಿದ್ದಾರೆ. ಕೇಂದ್ರದ ...ಮಂತ್ರಿ ಸದಾನಂದ ಗೌಡ ಪವಾಡ ನಂಬಿ ಕೂತಿರುವ ದಿನಕರ ಶೆಟ್ಟಿ ...ಪಾರ್ಟಿಯೊಳಗೆ ಬರದಂತೆ ಸಂಸದ ಅನಂತ್ಕುಮಾರ್ ಆಟ ಆಡುತ್ತಿದ್ದಾನೆ.

ಚೋರ ಅರಣ್ಯಾಧಿಕಾರಿ ನಾಗರಾಜ ನಾಯಕ್, ಜಿಪಂ ಸದಸ್ಯೆ ಗಾಯತ್ರಿ ...ಗೌಡ ಏನೇ ಹೇಳಲಿ, ಯಡ್ಡಿ ಅಭ್ಯರ್ಥಿ ಅನಂತ್ಕುಮಾರ್‌ನೇ! ಸೂರಜ್ ನಾಯ್ಕ್ ...ಅನಂತ್ಕುಮಾರ್ ಅನುಯಾಯಿ. ಆತನ ಥಂಡ್ ಮಾಡೋದು ಅನಂತ್ಕುಮಾರ್‌ಗೆ ...ಗೊತ್ತು. ಹೀಗಾಗಿ ಜೆಡಿಎಸ್‌ನಲ್ಲೇ ದಿನಕರ್ ಶೆಟ್ಟಿ ಉಳಿವಂಥ ಪರಿಸ್ಥಿತಿ ...ನಿರ್ಮಾಣ ಮಾಡಿದರೆ ತನಗೆ ಕುಮಟಾ ಟಿಕೆಟ್‌ಗೆ ಅಡ್ಡ ಬರುವವರೇ ಇಲ್ಲ ...ಎಂಬುದು ಅನಂತ್ಕುಮಾರ್‌ಗೆ ಪಕ್ಕಾ ಆಗಿದೆ. ಆ ದಿಸೆಯಲ್ಲೇ ಆತನ ತಂತ್ರಗಾರಿಕೆಯೂ ...ನಡೆದಿದೆ. ದಿನಕರ ಶೆಟ್ಟಿ ಮನಸ್ಸಿನಲ್ಲಿ ಅದೆಷ್ಟೇ ಮಂಡಿಗೆ ತಿಂದರೂ ...ಅನಂತ್ಕುಮಾರ್‌ನನ್ನು ಎದುರಿಸಲು ಸಾಧ್ಯವೇ ಇಲ್ಲ. ಹೀಗಾಗಿ ಆತನ ಹಳೆ ...ಸಂಬಂಧ ಹಾದಿಯೇ ಗತಿ ಆಗುವ ಸಂಕೇತಗಳು ಈಗ ಬಿತ್ತರವಾಗುತ್ತಿದೆ.

ಶಾಸಕಗಿರಿ ತೆವಲಿನ ಅನಂತ್ಕುಮಾರ್‌ನ ಎಂಟ್ರಿಯಿಂದ ಕುಮಟೆಯ ರಾಜಕಾರಣ ...ಕುತೂಹಲ ಕೆರಳಿಸುತ್ತಿದೆ; ದಿನಕ್ಕೊಂದು ಆಯಾಮ ಪಡೆಯುತ್ತಿದೆ. ಯಾರ್ಯಾರು ...ಬಲಿಪಶು ಆಗುತ್ತಾರೋ? ಎಮ್ಮೆಲ್ಲೆ ಹುಚ್ಚಿಂದ ಯಾರ್ಯಾರು ಮಳ್ಳಿಬಿದ್ದು ...ಬೀದಿ ಸೇರುತ್ತಾರೋ? ಯಾರ್ಯಾರು ಎಮ್ಮೆಲ್ಲೆಯಾಗ್ತಾರೋ? ಕಾಲವೇ ಉತ್ತರ ...ಹೇಳಬೇಕಷ್ಟೇ!

● ವರದಿಗಾರ

ಮನೆ ಕಟಿಗಳಕ್ಕೆ ಇಟಗೆ ಬೇಕಲ್ಲ ಸಾರ್

ಥೂತ್ತೇರಿ

► ಯಾಹೂ

ಕರ್ನಾಟಕದ ಕಿರಣ್ ಬೇಡಿಯಾಗಲು ಹೊರಟ ಅನುಪಮಾ ಶಣೈ ಎಂಬ ಪೊಲೀಸ್ ಅಧಿಕಾರಿ, ಫೇಸ್‌ಬುಕ್‌ನಲ್ಲಿ ಆಡುತ್ತಿರುವ ಆಟ ನೋಡಿದರೆ, ಥರ್ಡ್‌ಕ್ಲಾಸ್ ಬ್ಲಾಕ್‌ಮೇಲ್ ಗಿರಾಕಿಯ ಚೇಷ್ಟೆ ನೋಡಿದಂತಾಗುತ್ತಿದೆಯಲ್ಲಾ. ಕರ್ನಾಟಕ ಈವರೆಗೆ ಹಲವಾರು ದಕ್ಷ ಅಧಿಕಾರಿಗಳನ್ನ ಕಂಡಿದೆ. ಅವರೆಲ್ಲಾ ತಮ್ಮ ಮನೋಗತಕ್ಕೆ ಒಗ್ಗದ ಕಾರ್ಯವೆಸಗಲು ಸಾಧ್ಯವಾಗದಾಗ ವರ್ಗ ಮಾಡಿಸಿಕೊಂಡು ಹೋಗಿದ್ದಾರೆ, ಇಲ್ಲ ತಮ್ಮ ವಿನಯವಂತಿಕೆಯ ಹಟದಿಂದಲೇ ಎದುರಾಳಿಗಳನ್ನು ಬಗ್ಗಿಸಿದ್ದಾರೆ. ಆದರೆ, ಈ ದ.ಕ.ಜಿಲ್ಲೆಯ ಅನುಪಮಾ ಶಣೈ ವರ್ತನೆ ನೋಡಿದರೆ, ಪರಮೇಶ್ವರನನ್ನು ಆಟ ಆಡಿಸಿ, ಕಾಂಗ್ರೆಸ್‌ಗೆ ಕೆಟ್ಟ ಹೆಸರು ತಂದು, ಬಿಜೆಪಿಗಳನ್ನೆಲ್ಲಾ ಹೋರಾಟಕ್ಕೆ ಹಚ್ಚಿ, ನಂತರ ಬಿಜೆಪಿಗೆ ಸೇರಿಕೊಂಡು ಮೆರೆಯುವಂತೆ ಕಾಣುತ್ತಿದ್ದಾಳಲ್ಲಾ, ಇವಳಂತೆಯೇ ಆಡಿದ ಮಟ್ಟಣ್ಣ ಮಣ್ಣು ತಿಂದು ಕೂತಿರುವುದು ಇವಳಿಗಿನ್ನೂ ಹೊಳೆದಿಲ್ಲವಂತಲ್ಲಾ, ಥೂತ್ತೇರಿ!

****

ಬಳ್ಳಾರಿ ಜಿಲ್ಲೆಯಲ್ಲಿ ತುಂಬಾ ಫೇಮಸ್ಸಾಗಿರುವ ಪರಮೇಶ್ ಎಲ್ಲ ಲಂಬಾಣಿ ಎಮ್ಮೆಲ್ಲೆಗಳನ್ನ ಹಿಡಿದಿಟ್ಟುಕೊಂಡಿರುವ ಮಂತ್ರಿ. ಆ ಕಾರಣಕ್ಕೆ ಸಿದ್ದು ಕೂಡಾ ಏನೂ ಮಾಡಲಾಗುತ್ತಿಲ್ಲ. ಅಂತಹ ರಾಜಕಾರಣಿಗೆ ಲಿಕ್ಕರ್ ಲಾಬಿಯಿಂದ ಹರಿದು ಬರುತ್ತಿದ್ದ ಹಣದ ಪೈಪುಗಳನ್ನೆ ಬಂದ್ ಮಾಡಿದ ಅನುಪಮ ಒಳ್ಳೆ ಕೆಲಸವನ್ನೇ ಮಾಡಿದ್ದಳು. ಆದರೆ, ಅಂಬೇಡ್ಕರ್ ಭವನದ ಎದುರು ನಿರ್ಮಾಣಗೊಳ್ಳಲಿದ್ದ ಲಿಕ್ಕರ್ ಮಳಿಗೆ ವಿಷಯದಲ್ಲಿ ದಡ್ಡತನ ತೋರಿಬಿಟ್ಟಳು. ಲಿಕ್ಕರ್ ಮಳಿಗೆ ಮಾಲೀಕರು ಪಂಚಮಸಾಲಿ ಬಿಜೆಪಿಗಳಂತೆ. ಅಂತವರನ್ನ ಅರೆಸ್ಟು ಮಾಡಿ ಸಿವಿಲ್ ಡಿಸ್‌ಪ್ಯೂಟಿನೊಳಗೆ ಕ್ರಿಮಿನಲ್ ಮಾರ್ಗ ಜಡಾಯಿಸಿದ ಫಲವಾಗಿ ಸ್ಥಳೀಯ ಬಿಜೆಪಿಗಳೇ ತಿರುಗಿ ಬಿದ್ದಿರುವುದೊಂದು ವಿಪರ್ಯಾಸವಲ್ಲ. ಇದರಿಂದ ರಾಜ್ಯದ ಬಿಜೆಪಿಗಳಿಗೆ ಪ್ರತಿಭಟಿಸಲೂ ಆಗದೆ, ಸುಮ್ಮನಿರಲೂ ಆಗದೆ ಮುಲುಕುವಂತಾಗಿದೆಯಲ್ಲಾ, ಥೂತ್ತೇರಿ!!

****

ದೇವೇಗೌಡರು ಪಿತ್ರಾರ್ಜಿತ ಆಸ್ತಿಯಂತೆ ಕಾಪಾಡಿ ಕೊಂಡು ಬಂದಿದ್ದ ಜೆಡಿಎಸ್ ಎಂಬ ಮನೆಯ ಮುಖ್ಯದ್ವಾರದ ಕಂಬಗಳಂತಿದ್ದ ಜಮೀರು, ಚೆಲುವಣ್ಣ, ಬಾಲಣ್ಣ ಇತ್ಯಾದಿ ಮರಿನಾಯಕರು ಮನೆಯಿಂದಲೇ ಹೊರನಡೆಯತೊಡಗಿದ್ದಾರಲ್ಲಾ, ಇದು ಮಾತ್ರ ಕುಮಾರಣ್ಣನ ಕಾಲದ ಬಹುದೊಡ್ಡ ಬಂಡಾಯ. ಇಂತಹ ಬಂಡಾಯ ಎದುರಿಸಿ ಕುಮಾರಣ್ಣ ಪಾರ್ಟಿ ಉಳಿಸಿಕೊಳ್ಳುವುದು ನಿಜವೆ ಎಂಬ ಅನುಮಾನ ಕಾಡತೊಡಗಿದೆಯಲ್ಲಾ, ಕಡೆಗೆ ಅವರನ್ನೇ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: 'ಬಂದದ್ದೆಲ್ಲಾ ಬರಲೀ ಗೋವಿಂದನ ದಯೆ ಇರಲಿ.....'

'ಹಲೋ ಯಾರು?'

'ನಮಸ್ಕಾರ ಸಾರ್, ನಾನು ಯಾಹೂ.'

'ಏನೇಳಿ ಯಾಹೂ ಅವರೆ.'

'ಏನ್ಸಾರ್, ಈ ಜನ ನಿಮಗೀತರ ಮೋಸ ಮಾಡಿದ್ರು?'

'ಜೆಡಿಎಸ್ ಪಾರ್ಟಿ ಏನಿದೆ, ಅದಕ್ಕೆ ಈ ತರದ ಚಟುವಟಿಕೆಗಳು ಹೊಸದಲ್ಲ ಯಾಹು.'

'ಆದ್ರೂ ಈಗ ಪಾರ್ಟಿ ಬಿಡ್ತಾಯಿರೋದು ನಿಮ್ಮಷ್ಟೇ ಶಕ್ತಿವಂತ್ರು ಸಾರ್.'

'ಆ ಶಕ್ತಿವಂತ್ರಿಗೆ ಶಕ್ತಿ ಕೊಟ್ಟಿರತಕ್ಕಂತವರು ಯಾರು ಅನತಕಂತ್ತದ್ನ ಯೋಚ್ನೆ ಮಾಡಬೇಕಾಗತ್ತೆ.'

'ಶಕ್ತಿ ಕೊಟ್ಟೋರು ನೀವೇ ಸಾರ್.'

'ಅದನ್ನ ಅವ್ರು ತಿಳಕಬೇಕು. ಇತಿಹಾಸದಲ್ಲಿ ಮೋಯಿನಿ, ಬಸ್ಮಾಸುರ, ಬಲಿ ಚಕ್ರವರ್ತಿ ಅಂತ ಇದ್ರು.'

'ಇತಿಹಾಸ ಅಲ್ಲ ಸಾರ್, ಪುರಾಣ ಅದು.'

'ಇರಲಿ, ಆ ತರದ ಕತೆಗಳನ್ನ ನೋಡಿದ ಜನ ಎಚ್ಚೆತ್ತಗಳತಕಂತ ಮನಸು ಮಾಡಿದ್ರೆ ಕಡಿಗೆ ಗಮನ 'ಹರಸದು ಬುಟ್ಟು, ಈತರ ನಡವಳಿಕೆ ಏನಿದೆ, ಅದನ್ನ ನಾವು ಸಯಿಸಲ್ಲ ಅನತಕ್ಕಂತ ಮಾತನ್ನ ಅವ್ರಿಗೆ ಹೇಳಿ.'

'ಹೇಳೊ ತರ ಇಲ್ಲ ಸಾರ್, ಪರಿಸ್ಥಿತಿ ತುಂಬ ಕೈ ಮೀರಿದಂಗೆ ಕಾಣ್ತಾ ಅದೆ.'

'ಕೈ ಮೀರಿದ್ರೆ ನನಿಗೇನು ನಷ್ಟ ಇಲ್ಲ ಅನ್ನದನ್ನ ಅವರು ತಿಳಕಬೇಕು.'

'ಅವ್ರಿಗೂ ನಷ್ಟ ಇಲ್ಲ ಸಾರ್. ನಿಮ್ಮನ್ನ ಬಿಟ್ರೆ ಅವ್ರಿಗೂ ಲಾಭ ಇರಬಹುದು.'

'ಅವ್ರು ಲಾಭವನ್ನ ನೋಡದಾದ್ರೆ, ಅದಕ್ಕಾಗಿನೆ ನಮ್ಮ ಜೊತೆ ಇದ್ರು, ಅನತಕ್ಕಂತ ಮಾತನ್ನ ಹೇಳಬೇಕಾಗ್ತದೆ.'

'ನಿಜ ಸಾರ್, ಈಗವರೆಲ್ಲಾ ನೀವಿಲ್ಲದೆ ಬದುಕೋವಷ್ಟು ಆಸ್ತಿ ಮಾಡಿಕೊಂಡವ್ರೆ.'

'ಅದಕ್ಕೆ ಅವಕಾಶ ಕೊಟ್ಟಿದ್ದು ನಾನೆ. ನಮ್ಮ ತಂದೆಯವರ ಮಾತ ಮೀರಿ ಬಿಜೆಪಿ ಜೊತೆ ಸೇರಿ ಇವರನ್ನೆಲ್ಲಾ ಮಂತ್ರಿಗಳನ್ನಾಗಿ ಮಾಡಿದಾಗ, ಗಳಿಸಿರತಕ್ಕಂತ ಸಂಪತ್ತು ಅವರನ್ನ ಈ ರೀತಿ ಆಡುಸ್ತಾ ಅದೆ.'

'25 ಸಾವಿರ್ರುಪಾಯಿಗೆ ಚಲುವರಾಯಸ್ವಾಮಿ ನಿಮ್ಮ ತಂದೆ ಮನೆಮುಂದೆ ನಿಂತಿದ್ದ ಅಂದ್ರಿ, ಏನ್ಸಾರ್ ಅದು?'

'ಅದು ಏನು ಅಂದ್ರೆ, ಇವತ್ತು ನಮ್ಮೆದುರು ಮಾತನಾಡ್ತ ಇರತಕ್ಕಂತ ಮುಂಡ್ಯದ ನಾಯಕರು, ಸಣ್ಣ ಕಂಟ್ರಾಕ್ಟ್ರಾಗಿದ್ರು, ಮಣ್ಣು ರಸ್ತೆ ಮಾಡಿದ ಬಿಲ್ಲು ಸ್ಯಾಂಕ್ಷನ್ನಿಗೆ ದೇವೇಗೌಡ್ರ ಮನೆ ಬಾಗಲಲ್ಲಿ ಬೆಳಗ್ಗಿಯಿಂದ ಸಂಜೆವರೆಗೂ ಕಾಯ್ತಿದ್ರು.'

'ಹೌದ ಸಾರ್.'

'ದೇವೇಗೌಡ್ರು ಇಲ್ದೆ ಇದ್ರೆ, ಇವತ್ತು ಆ ಮಟ್ಟಕ್ಕೆ ಬರ್ತಿರಲಿಲ್ಲ, ಇವತ್ತು ಕೋಟ್ಯಂತರುಪಾಯಿ ಮನೆ ಕಟ್ಟಿಸಿದ್ದಾರೆ. ಮೈಸೂರಲ್ಲಿ ಕಾರ್ ಶೋರೂಮಿದೆ. ಅವ್ರ್ ಬಾಮೈದ ಒಬ್ಬ ಫಿಲ್ಮ್ ಡಿಸ್ಟ್ರಿಬ್ಯೂಟ್ ಮಾಡ್ತನೆ. ಮಗನ್ನ ಹೀರೊ ಮಾಡಿ ಸಿನುಮ ತಗಿತ ಅವ್ರನೆ. ಇದು ಯಾರಿಂದ ಸಾಧ್ಯ ಆಯ್ತು ಅನ್ನದನ್ನ ಯದೆ ಮುಟಗಂಡು ಯೋಚನೆ ಮಾಡ್ಲಿ.'

'ಸಾರ್', ನಿಮ್ಮಿಂದ ಯಾರು ಆಸ್ತಿ ಮಾಡಿಕಂಡಿದಾರೆ. ಇಡೀ ದೇವೇಗೌಡರ ಕುಟುಂಬದ ಆಸ್ತಿನೆ ರಾಜಕಾರಣದ ಉಳುಮೆಯಿಂದ ಬಂದಿದ್ದು ಅಂತ ಇಬ್ರಾಹಿಂ ಹೇಳ್ತರೆ.'

'ಅವುರು ಹೇಳಬೇಕಾದ್ದ ಬಿಡಿ. ದೇವೇಗೌಡ್ರು ಕೇಂದ್ರದಲ್ಲಿ ಮಂತ್ರಿ ಮಾಡಿದ್ರು, ಆಗ ದುಡದಂತ ಆಸ್ತಿ ಎಷ್ಟು ಗೊತ್ತೆ, 16 ಮಾಸ್ಟರ್ ಬೆಡ್‌ರೂಮಿನ ಮನೆ ಕಟ್ಟಿದಾನೆ ಆತ.'

'ಅದರಗತ್ಯ ಇದೆಯಂತೆ ಸಾರ್, ದೇಶವಿದೇಶದ ಸಾಬ್ರು ಬಂದಾಗ ಉಳಕಳಕ್ಕೆ ಬೇಕಂತೆ. ಆದ್ರೆ ಚಲುವಣ್ಣ ಅಷ್ಟು ದೊಡ್ಡಮನೆ ಕಟ್ಟೊ ಅಗತ್ಯ ಇರಲಿಲ್ಲ.'

'ಅದನ್ನೆ ನಾನು ಹೇಳಿದ್ದು, ಅದಕ್ಕೆ ಆ ನಾಯಕರು ನನಿಗೆ ಆತನ ಮನೆ ನೋಡಿ ಹೊಟ್ಟೆಕಿಚ್ಚು ಬಂದಿದೆ ಅದನ್ನು ಸಯಿಸಕ್ಕಾಗ್ತಯಿಲ್ಲ ಅನತಕ್ಕಂತ ಮಾತನ್ನ ಹೇಳಿದಾರೆ. ನಮಿಗೆ ಒಂದು ಪಾರ್ಟಿ ಆಫೀಸಿಲ್ಲ, ಆದ್ರು ನಮ್ಮ ಸ್ನೇಹಿತರು ಬೂತ ಬಂಗಲೆಗಳನ್ನ ಕಟ್ಟಿಸಿಕೊಂಡಿದಾರೆ. ಇದಕ್ಕೆಲ್ಲ ಯಾರು ಕಾರಣ ಎಂಬತಕ್ಕಂತದ್ನ ಯೋಚನೆ ಮಾಡಬೇಕು.'



'ದಳ ಹುಟ್ಟಿದಾಗಿಂದ ಕೆಲ ನಾಯಕರು ಒಂದು ಕಾಲಮಿತಿಯೊಳಗೆ ಪಾರ್ಟಿ ಬಿಡ್ತಾನೆ ಬಂದಿದಾರೆ ಸಾರ್, ಇದಕ್ಕೆ ಕಾರಣ ಏನು ಅಂತ ಯೋಚ್ನೆ ಮಾಡಿದ್ದೀರಾ?'

'ಜನತಾದಳ ನಾಯಕರನ್ನ ತಯಾರು ಮಾಡೊ ಕಾರ್ಖಾನೆ ಇದ್ದಂಗೆ. ದಳವನ್ನ ಉಪಯೋಗಿಸಿಗಂಡು ಬೆಳೆದಂತೆ ನಾಯಕರು ದೂರ ಹೋಗ್ತಾರೆ. ಅದು ಸ್ವಾಭಾವಿಕ. ಈಗ್ ಒಂದು ಹಸು ಕರುವನ್ನ ಹಾಕ್ತದೆ. ಕರು ಹಾಲುಕುಡುದು ದೊಡ್ಡದಾದ ನಂತರ ಬೇರೆ ಹೋಗ್ತದೆ. ಅದಕ್ಕೇನೂ ಮಾಡಕ್ಕಾಗಲ್ಲ.'

'ಅಂದ್ರೆ ದೇವೇಗೌಡರ ಹಾಲು ಕುಡುದು ಬೆಳೆದೋರೆಲ್ಲ ದೂರ ಹೋಯ್ತರೆ ಅಂದಂಗಾಯ್ತು.'

'ಹೌದು.'

'ಈಗ ಹೋದೋರು ನಿಮ್ಮ ಹಾಲು ಕುಡುದು ಕೊಬ್ಬಿ ದೂರ ಹೋಗಿದಾರೆ ಅಂದಂಗಾಯ್ತು.'

'ಹೌದು, ಒಂದು ನಾಯಿ ಹಲವಾರು ಮರಿಗಳನ್ನ ಹಾಕಿದ ನಂತರ ಆ ಮರಿಗಳು ನಾಯಿ ಹಾಲನ್ನ ಚೀಪಿ ಆ ನಾಯಿ ಏನಿದೆ ಅದು ಬಡಕಲಾದ ನಂತರ, ಈ ಮರಿಗಳೇನಿವೆ ಇವು, ಮಾಂಸದ ಅಂಗ್ಡಿ ಕಂಡ್ರೆ ಹೋಗಿ ಬಿಡ್ತವೆ, ಏನು ಮಾಡಿದ್ರೂ ತಡಿಯಕ್ಕಾಗಲ್ಲ.'

'ಒಳ್ಳೆ ಉದಾರಣೆ ಕೊಟ್ರಿ ಸಾರ್, ನಿಜವಾಗ್ಲು ನೀವು ಮುಂದೆ ಇದನ್ನೆಲ್ಲ ಬರಿಬೇಕು. ನಿಮುಗೆ ಒಳ್ಳೆ ಭಾಷೆ ಇದೆ, ಅನುಭವಾನೂ ಇದೆ.'

'ಮುಂದೆ ನೋಡಣ ಇರಿ.'

'ಒಂದು ಪರಸೊನಲ್ ವಿಷ್ಯ ಸಾರ್.'

'ಏನು ಪರಸನಲ್‌ರಿ?'

'ಪತ್ರಿಕಾರಂಗದಲ್ಲಿದ್ದುಕೊಂಡು ಸ್ವಂತ ಮನೆಯಿಲ್ಲ, ಅದ್ಕೆ ಒಂದು ಮನೆ ಕಟ್ಟಿಗೊಳನಾ ಅಂತ ಇದ್ದೀನಿ.'

'ಜೆಡಿಎಸ್ ಗೆಲ್ಸಿರಿ ಮನೆ ಏನು ಬಂಗಲೆನೆ ತೆಗೆದುಕೊಡ್ತಿನಿ.'

'ಕಟ್ಟಿಸಿರೊ ಮನೆಬೇಡ ಸಾರ್. ನನ್ನ ಮನೆ ನಾನೆ ಕಟ್ಟಿಗೊಬೇಕು. ಅದ್ಕೆ ಇಟ್ಟಿಗೆ ಕೊಡಿಸಿ ಸಾಕು.'

'ಇಟ್ಟಿಗೆ ನಾನೆಲ್ಲಿಂದ ಕೊಡುಸ್ಲಿ? ಅವು ತುಂಬಾ ರೇಟಾಗಿದಾವೆ.'

'ಸಾರ್, ಸೋಲೂರತ್ರ ರಾಧಿಕ ಸಿಸ್ಟರ್ ಇಟ್ಟಿಗೆ ಫ್ಯಾಕ್ಟರಿ ಮಾಡ್ತಾಯಿದಾರೆ, ನೀವೊಂದು ಸಿಫಾರಸ್ಸು ಲೆಟ್ರು ಕೊಟ್ರೆ ನಾನು ಇಟ್ಟಿಗೆ ತುಂಬಕೊಂಡು ಬರ್ತೀನಿ ಸಾರ್.'

'ಫ್ಯಾಕ್ಟರಿ ಈಗ ಶುರುವಾಗ್ತಾಯಿದೆ. ಇಟ್ಟಿಗೆ ತಯಾರಿಕೆ ಪ್ರಾರಂಭವಾದ ನಂತ್ರ ಹೊಡೆದೋದ ಪುಡಿ ಇಟ್ಟಿಗೇನ ನಿಮುಗೇ ಕೊಡ್ತೀವಿ. ಅಲ್ಲಿವರೆಗೂ ಮನೆ ಪಾಯ ಮಾಡಿಕೊಂಡು ರೆಡಿಯಾಗಿರಿ.'

'ಥೂತ್ತೇರಿ!!!'

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಅಮಿತಾಭ್ ಬಚ್ಚನ್‌ನ ಅವಕಾಶವಾದಿ ರಾಜಕಾರಣ

ಅಮಿತಾಭ್ ಬಚ್ಚನ್ ಭಾರತ ಸಿನಿಮಾರಂಗದ ಸೂಪರ್‌ಸ್ಟಾರ್. ಈತನ ರಾಜಕೀಯ ಮುಖ ಈ ನೆಲದ ಟಾಪ್ ಮೋಸ್ಟ್ ಪಕ್ಷಾಂತರ ಪೊಲಿಟಿಷಿಯನ್‌ನ ಪರ್ಯಟನೆಯನ್ನು ನಾಚಿಸುವಷ್ಟು ನಾಜೂಕಿನದ್ದಾಗಿದೆ. ಈ ಸಿನಿದಿಗ್ಗಜ ಇಂತಹ ಅವಕಾಶವಾದಿ ರಾಜಕಾರಣ ತುಳಿಯುತ್ತಾ ಇರುವುದಾದರೂ ಏತಕ್ಕೆ?



ಅಂದು ರಾಜೀವ್ ಸಖ್ಯದಲ್ಲಿ...


ಒಬ್ಬ ವ್ಯಕ್ತಿ ಬೇರೊಂದು ರೂಪದಲ್ಲಿ ನಿರಂತರವಾಗಿ ಯಶಸ್ಸು ಗಳಿಸುತ್ತಾ ಬಂದಾಗ, ಆ ವ್ಯಕ್ತಿಯನ್ನು ಅವನ ಮೂಲರೂಪದಲ್ಲಿ ಅಳೆಯಹೋಗುವುದು ಸಮಂಜಸವಲ್ಲ. ಆದರೆ ಅಂತಹ ವ್ಯಕ್ತಿಯೇ ತನ್ನ ಈ ಎರಡೂ ವ್ಯಕ್ತಿತ್ವಗಳ ನಡುವಿನ ಅಂತರವನ್ನು ಉದ್ದೇಶಪೂರ್ವಕವಾಗಿ ಅಳಿಸಿಹಾಕಿದರೆ ಅದಕ್ಕೇನೆನ್ನಬೇಕು? ಅಮಿತಾಭ್ ಬಚ್ಚನ್ ಯಾವುದೋ ಒಂದು ಬ್ರಾಂಡ್‌ನ ಸಿಮೆಂಟು ಅಥವಾ ಬೇರಾವುದೋ ಉತ್ಪನ್ನಕ್ಕೆ ಜಾಹೀರಾತು ನೀಡಿದಾಗ, ಅಮಿತಾಭ್‌ನ ಕಾರಣಕ್ಕೆ ಜನರು ಅದನ್ನು ಖರೀದಿಸಬೇಕು ಎಂಬ ಅಪೇಕ್ಷೆ ಆ ಜಾಹೀರಾತು ಅಥವಾ ಕಂಪನಿಯ ಉದ್ದೇಶವಾಗಿ ರುತ್ತೆ; ಆದರೆ ಅದೇ ಅಮಿತಾಭ್ ಬಚ್ಚನ್, ನರೇಂದ್ರ ಮೋದಿಯ ಕೈಹಿಡಿದು ಕುಲುಕಾಡಿದರೆ, ಅದರಿಂದ ನಾವೇನನ್ನೂ ಗ್ರಹಿಸಬಾರದೆಂದು ಬಿಗ್ ಬಿ ಆಗ್ರಹಿಸುತ್ತಾರೆ!

ಅಷ್ಟಕ್ಕೂ ನರೇಂದ್ರ ಮೋದಿಯ ಕೈಹಿಡಿದು ಕುಲುಕುವ ಆ ಅಮಿತಾಭ್ ಬಚ್ಚನ್ ಯಾರು? ಗೋವಿಂದ್ ನಿಹ್ಲಾನಿಯಾ ಸಿನಿಮಾ 'ದೇವ್'ನಲ್ಲಿ ದೇವ್ ಪ್ರತಾಪ್ ಸಿಂಗ್ ಪಾತ್ರದಲ್ಲಿ ಮಿಂಚಿದ್ದ ಅಮಿತಾಭ್ ಬಚ್ಚನಾ? ಅಥವಾ 1984 ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿದ್ದ ಅಮಿತಾಬ್‌ನೇ? 'ದೇವ್' ಸಿನಿಮಾದಲ್ಲಿ ಕೋಮುದಳ್ಳುರಿಗೆ ಕಾರಣವಾಗುವ ಮುಖ್ಯಮಂತ್ರಿಯ (ಅಮರೀಷ್ ಪುರಿ ಈ ಪಾತ್ರ ಮಾಡಿದ್ದರು) ವಿರುದ್ಧ ಸಿಡಿದು ನಿಲ್ಲುವ ಪೊಲೀಸ್ ಅಧಿಕಾರಿಯ ಪಾತ್ರ ಅಮಿತಾಭ್‌ಗೆ ಹೊಸದೊಂದು ಇಮೇಜನ್ನೇ ಸೃಷ್ಟಿಸಿಕೊಟ್ಟಿತ್ತು. ಆ ಸಿನಿಮಾದಲ್ಲಿ ಅಮರೀಷ್ ಪುರಿ ನಿರ್ವಹಿಸಿದ್ದ ಪಾತ್ರದ ಛಾಯೆ ನರೇಂದ್ರ ಮೋದಿಯನ್ನು ಹೋಲುವುದು ರಹಸ್ಯವೇನೂ ಅಲ್ಲ.

ಮೋದಿ ರಾಜೀವ್‌ಗಿಂತ ಒಳ್ಳೆಯವನೋ ಅಥವಾ ಕೆಟ್ಟವನೋ ಎಂಬುದು ಇಲ್ಲಿನ ಪ್ರಶ್ನೆಯಲ್ಲ; ಈ ಇಬ್ಬರೂ ವ್ಯಕ್ತಿಗಳ ಜೊತೆಗೆ ನಿಲ್ಲುವ ಅಮಿತಾಭ್‌ನ ನಿರ್ಣಯ ಒಬ್ಬ ವ್ಯಕ್ತಿಯಾಗಿ ತೆಗೆದುಕೊಂಡದ್ದೋ ಅಥವಾ ಒಬ್ಬ ನಟನಾಗಿ ತೆಗೆದುಕೊಂಡದ್ದೋ ಎನ್ನುವುದು ಮುಖ್ಯ. ಒಂದು ಕಾಲಕ್ಕೆ ಗಾಂಧಿ-ನೆಹರೂ ಕುಟುಂಬದ ಅತ್ಯಾಪ್ತ ಸ್ನೇಹಿತರಲ್ಲಿ ಒಬ್ಬರೆನಿಸಿದ್ದ, ಅನಂತರ ಅಮರ್ ಸಿಂಗ್‌ನ ಪರಮ ಗೆಳೆಯನಾಗಿದ್ದು ತನ್ನ ಹೆಂಡತಿ ಜಯಾ ಬಚ್ಚನ್‌ರನ್ನು ಅದೇ ಅಮರ್ ಸಿಂಗ್‌ನ ಪ್ರಭಾವದಡಿ ಸಮಾಜವಾದಿ ಪಾರ್ಟಿಯಿಂದ ರಾಜ್ಯಸಭಾ ಸದಸ್ಯೆಯನ್ನಾಗಿಸಿದ್ದ ಅಮಿತಾಭ್ ಬಚ್ಚನ್ ಈಗ ನರೇಂದ್ರ ಮೋದಿಯ ಸಖ್ಯಕ್ಕೆ ಸರಿದಿದ್ದಾನೆ. ಪಕ್ಷಾಂತರಿ ರಾಜಕಾರಣಿಗಳಲ್ಲೂ ಅಪರೂಪಕ್ಕೆ ನೋಡಲು ಸಿಗುವ ಪಕ್ಷಾಂತರಿ ಮುಖವನ್ನು ಕಾಯ್ದುಕೊಂಡಿದ್ದಾನೆ.

ಪಕ್ಷಾಂತರ ರಾಜಕಾರಣವನ್ನು ಮೈಗೂಡಿಸಿಕೊಂಡ ಫಿಲ್ಮ್‌ಸ್ಟಾರ್ ರಾಜಕಾರಣಿಗಳಿಗೇನೂ ಕೊರತೆ ಇಲ್ಲ. ಆದರೆ ಅಮಿತಾಬ್ ಬಚ್ಚನ್ ಬಾಲಿವುಡ್‌ನಲ್ಲಿ ತನ್ನ ವರ್ಚಸ್ಸನ್ನು ಕಾಯ್ದುಕೊಂಡಂತೆಯೇ ತನ್ನ ರಾಜಕೀಯ ಬೆಸುಗೆಗಳನ್ನು ವರ್ಚಸ್ವಿಯುತವಾಗಿ ಕಾಯ್ದುಕೊಳ್ಳಲೆತ್ನಿಸಿರುವುದೇ ವಿಶೇಷ. ಈ ಬೆಸುಗೆಗಳು ಆತನ ಫಿಲ್ಮಿ ಕೆರಿಯರ್ ಉದ್ದಕ್ಕೂ ಸಮಾನಾಂತರವಾಗಿ ಸಾಗಿ ಬಂದಿವೆ ಮಾತ್ರವಲ್ಲ, ಅಮಿತಾಭ್‌ಗೆ ಲಾಭವನ್ನೂ ತಂದುಕೊಟ್ಟಿವೆ. ಇವುಗಳಿಗೆ ಆತ ತೆತ್ತಿರುವ ಬೆಲೆ ಎಂದರೆ ಆ ಬೆಸುಗೆಗಳನ್ನು ಅಧಿಕೃತವಾಗಿ ಅಲ್ಲಗಳೆಯುತ್ತಾ ಬಂದಿರುವುದಷ್ಟೆ!

ಅಮಿತಾಭ್ ಸಿನಿಮಾ ನಟನಾಗುವುದಕ್ಕೂ ಮುಂಚಿನಿಂದಲೇ ನೆಹರೂ ಹಾಗೂ ಬಚ್ಚನ್ ಕುಟುಂಬಗಳು ಪರಸ್ಪರ ಸ್ನೇಹಿತರಾಗಿದ್ದವು. ಈ ಸ್ನೇಹಕ್ಕೆ ಹುಳಿ ಬಿದ್ದದ್ದೇ ಅಮಿತಾಭ್ ಸೂಪರ್‌ಸ್ಟಾರ್‌ಗಿರಿಯ ಅಹಂ ಹತ್ತಿಸಿಕೊಂಡ ನಂತರ. ಹಾಗೆ ನೋಡಿದರೆ ಸಮಾಜವಾದಿ ಪಾರ್ಟಿಯ ಅಮರ್ ಸಿಂಗ್, ಅಮಿತಾಭ್‌ಗೆ ಕಷ್ಟ ಕಾಲದಲ್ಲಿ ಕೈಹಿಡಿದ ಗೆಳೆಯ. ಅಮಿತಾಭ್‌ನ ಆರ್ಥಿಕ ಮುಗ್ಗಟ್ಟನ್ನು ಸಂಭಾಳಿಸುವುದರಿಂದ ಹಿಡಿದು ಅಮಿತಾಭ್ ಕುಟುಂಬಕ್ಕೆ ಸಂಸತ್ ಸದಸ್ಯ ಸ್ಥಾನ ಧಾರೆಯೆರೆಯುವವರೆಗೆ ಅಮರ್ ಸಿಂಗ್ ಸ್ನೇಹದ ಹಸ್ತ ಚಾಚಿದ್ದರು. ಆದರೆ ಮೋದಿಯೊಂದಿಗೆ ಅಮಿತಾಭ್‌ನ ಸಖ್ಯ ಗಟ್ಟಿಯಾಗುತ್ತಾ ಬಂದಂತೆ, ಆತ ಅಮರ್ ಸಿಂಗ್ ಸಖ್ಯದಿಂದ ಏನೆಲ್ಲಾ ಲಾಭಗಳನ್ನು ಪಡೆದೆ ಅನ್ನೋದನ್ನು ಮರೆತ.



ಇಂದು ಮೋದಿ ತೆಕ್ಕೆಯಲ್ಲಿ...

ಕೌಟುಂಬಿಕ ಹಿನ್ನೆಲೆ

ಅಮಿತಾಭ್‌ನ ತಂದೆ, ಕವಿ ಹರಿವಂಶರಾಯ್ ಬಚ್ಚನ್ ತನ್ನ ಆತ್ಮಚರಿತ್ರೆಯ ಒಂದು ಕಡೆ ಹೀಗೆ ಉಲ್ಲೇಖಿಸಿದ್ದಾರೆ: "ಸರೋಜಿನಿ ನಾಯ್ಡು ನನ್ನನ್ನು ಅಲಹಾಬಾದ್‌ನಲ್ಲಿರುವ ಆನಂದ್ ಭವನ್‌ಗೆ ಆಹ್ವಾನಿಸಿದ್ದು, ತೇಜಿ ಮತ್ತು ಇಂದಿರಾ (ಆಗಿನ್ನೂ ಅವರು ಅವಿವಾಹಿತರಾಗಿದ್ದರು) ಜತೆಗಿನ ನನ್ನ ಸುದೀರ್ಘ ಸ್ನೇಹ ಪಯಣದ ಆರಂಭದ ಮೊದಲ ಹೆಜ್ಜೆ. ಶ್ರೀಮತಿ ನಾಯ್ಡುರವರು ನಮ್ಮಿಬ್ಬರ ಜೋಡಿಯನ್ನು (ಹರಿವಂಶ ಮತ್ತು ತೇಜಿ) 'ಕವಿ ಮತ್ತು ಕಾವ್ಯ' ಅಂತ ಪರಿಚಯಿಸಿದ್ದನ್ನು ಇಂದಿರಾ ತುಂಬಾ ದಿನ ಸ್ಮರಿಸುತ್ತಲೇ ಇದ್ದರು. ತೇಜಿಯನ್ನು ವಿದೇಶಿ ಆಗಂತುಕರಿಗೆ ಪರಿಚಯಿಸುವಾಗಲೂ ಇಂದಿರಾ ಅದೇ ವಾಕ್ಯ ಉಲ್ಲೇಖಿಸಿದ್ದರು."

1955 ರಲ್ಲಿ ಹರಿವಂಶರನ್ನು ದೆಹಲಿಗೆ ಕರೆತಂದು, ವಿದೇಶಾಂಗ ಸಚಿವಾಲಯದಲ್ಲಿ ವಿಶೇಷ ಅಧಿಕಾರಿಯಾಗಿ ನಿಯೋಜಿಸಿದ್ದೇ ಜವಾಹರಲಾಲ್ ನೆಹರೂ. ಅಸಲಿಗೆ ಅಮಿತಾಭ್‌ನ ಸಿನಿಮಾ ಎಂಟ್ರಿಗೂ ನೆಹರೂ-ಗಾಂಧಿ ಕುಟುಂಬದ ಋಣವಿದೆ. ಕಾಂಗ್ರೆಸ್ ಪಕ್ಷದೊಂದಿಗೆ ನಿಕಟ ಸಂಪರ್ಕವಿರುವ ಹಿರಿಯ ಪತ್ರಕರ್ತ ಪಂಕಜ್ ಒಂದು ಕಡೆ ಹೀಗೆ ಬರೆದಿದ್ದಾರೆ: "ತಮ್ಮ ಫ್ಯಾಮಿಲಿ ಫ್ರೆಂಡ್ ತೇಜಿಯವರ (ಅಮಿತಾಭ್‌ನ ತಾಯಿ) ಕೋರಿಕೆಯ ಮೇರೆಗೆ ಅಮಿತಾಭ್‌ಗೆ ಸಿನಿಮಾದಲ್ಲಿ ಒಂದು ಬ್ರೇಕ್ ಕೊಡುವಂತೆ ಇಂದಿರಾ ಗಾಂಧಿ, ನರ್ಗೀಸ್ ದತ್ ಮತ್ತು ಖವಾಜಾ ಅಹ್ಮದ್ ಅಬ್ಬಾಸ್ ಅವರಿಗೆ ಪತ್ರಗಳನ್ನು ಬರೆಯುವುದಕ್ಕೂ ಮುನ್ನ ಅಮಿತಾಭ್ ಸಾಕಷ್ಟು ಬೆವರು ಹರಿಸಿದ್ದರೂ ಆತನಿಗೆ ಅವಕಾಶ ಸಿಕ್ಕಿರಲಿಲ್ಲ. ಇಂದಿರಾ ಗಾಂಧಿಯ ಆ ಪತ್ರದ ನಂತರವಷ್ಟೇ ಅಬ್ಬಾಸ್‌ರು ತಮ್ಮ 'ಸಾತ್ ಹಿಂದೂಸ್ಥಾನಿ' ಚಿತ್ರದಲ್ಲಿ ಅಮಿತಾಭ್‌ಗೆ ಅವಕಾಶ ಕೊಟ್ಟದ್ದು ಮತ್ತು ನರ್ಗೀಸ್ ದತ್ ಆತನಿಗೆ ನೆರವು ನೀಡುವಂತೆ ಪತಿ ಸುನೀಲ್ ದತ್‌ರಿಗೆ ದುಂಬಾಲು ಬಿದ್ದದ್ದು."

ಬಚ್ಚನ್ ಕುಟುಂಬ ಈ ನೆರವಿಗೆ ಪ್ರತಿಯಾಗಿ ಗಾಂಧಿ ಕುಟುಂಬದ ಬೆನ್ನಿಗೆ ನಿಂತದ್ದು ಬೇರೆ ಮಾತು. ಇಂದಿರಾ ಗಾಂಧಿ ಹೇರಿದ್ದ ಪ್ರಜಾಪ್ರಭುತ್ವ ವಿರೋಧಿ 'ತುರ್ತುಪರಿಸ್ಥಿತಿ'ಯನ್ನು ಬೆಂಬಲಿಸಿದ ಬುದ್ಧಿಜೀವಿಗಳಲ್ಲಿ ಹರಿವಂಶ್ ಬಚ್ಚನ್ ಕೂಡಾ ಒಬ್ಬರಾಗಿದ್ದರು. ಅದಕ್ಕೆ ಪ್ರತಿಯಾಗಿ 1976ರಲ್ಲಿ ಹರಿವಂಶ್‌ಗೆ ಪದ್ಮಭೂಷಣ ಪ್ರಶಸ್ತಿಯೂ ಒಲಿದುಬಂತು. ತುರ್ತುಪರಿಸ್ಥಿತಿ ಹೇರಿಕೆ ನಂತರದಲ್ಲೇ ಎದುರಾದ ಚುನಾವಣೆಯಲ್ಲಿ ಅಮಿತಾಭ್, ಸಂಜಯ್ ಗಾಂಧಿ ಪರವಾಗಿ ಪ್ರಚಾರ ಮಾಡಿದ್ದ. 'ಅಮಿತಾಭ್: ದಿ ಮೇಕಿಂಗ್ ಆಫ್ ಅ ಸೂಪರ್‌ಸ್ಟಾರ್' ಎಂಬ ಪುಸ್ತಕದಲ್ಲಿ ಲೇಖಕಿ ಸುಷ್ಮಿತಾ ದಾಸ್‌ಗುಪ್ತಾ ಹೀಗೆ ದಾಖಲಿಸಿದ್ದಾರೆ: "ತುರ್ತುಪರಿಸ್ಥಿತಿಯ ವಿರುದ್ಧವಿದ್ದ ಜನಾಕ್ರೋಶವನ್ನು ಗ್ರಹಿಸಲು ಬಿಗ್ ಬಿ ಸಂಪೂರ್ಣ ವಿಫಲರಾಗಿದ್ದರು ಮತ್ತು ಅದಕ್ಕೆ ಪ್ರತಿಯಾಗಿ ಜನರಿ ಸರಿಯಾದ ಅವಹೇಳನಕ್ಕೆ ಈಡಾದರು." ಸಂಜ ಗಾಂಧಿಗಿಂತ ಹೆಚ್ಚಾಗಿ ರಾಜೀವ್ ಗಾಂಧಿ ಜೊತೆ ಅಮಿತಾಭ್ ಸ್ನೇಹವೇ ಆತನ ಬಣ್ಣದ ಬದು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ರಾಜಕೀಯ ಪ್ರವೇಶ


ತಾವು ಬರೆದ ಸೋನಿಯಾ ಗಾಂಧಿ ಕು ಜೀವನಚರಿತ್ರೆಯಲ್ಲಿ ಪತ್ರಕರ್ತ ರಶೀದ್ ಕಿದ್ವಯ್ 1968ರ ಜನವರಿ 13ನೇ ತಾರೀಖಿನ ಚಳಿಗಾಲದ ಒ ಸಂಜೆಯನ್ನು ಮೆಲುಕು ಹಾಕಿದ್ದಾರೆ. ರಾಜೀವ್ ಗಾಂಧಿಯ ಮದುವೆಯಾಗಲು ಸೋನಿಯಾ ಮಯನೋ ದೆಹ ಬಂದಿಳಿದ ಘಳಿಗೆ ಅದು. ಆಕೆಯನ್ನು ಏರ್‌ಪೋರ್ಟ್ ಬರಮಾಡಿಕೊಂಡಿದ್ದೇ ಅಮಿತಾಭ್ ಬಚ್ಚನ್. 198 ಒಂದು ಸಂದರ್ಶನದಲ್ಲಿ ಸೋನಿಯಾ ಹೀಗೆ ಹೇಳಿದ್ದ "ಭಾರತೀಯ ಸಂಪ್ರದಾಯ ಮತ್ತು ಸಂಸ್ಕೃತಿಯ ಹತ್ತಿರದಿಂದ ನೋಡಿ ಕಲಿತುಕೊಳ್ಳಲು ನೆರವಾಗುವ ಬಚ್ಚನ್ ಕುಟುಂಬದ ಜತೆ ಕೆಲ ದಿನ ಕಳೆಯುವ ಮಮ್ಮಿ (ಇಂದಿರಾ) ನನಗೆ ಹೇಳಿದ್ದರು. ಆ ಕುಟುಂಬದಿ ನಾನು ನಿಧಾನಕ್ಕೆ ಬಹಳಷ್ಟು ಕಲಿತೆ. ತೇಜಿ ಆಂಟಿ, ಎರಡನೇ ತಾಯಿ, ಅಲ್ಲಲ್ಲ..... ನನ್ನ ಮೂರನೇ ತಾ ನನ್ನ ಮೊದಲ ತಾಯಿ ಇಟಲಿಯಲ್ಲಿರುವ ನನ್ನ ಎರಡನೆಯವರು ನನ್ನ ಅತ್ತೆ ಇಂದಿರಾ ಗಾ ಮೂರನೆಯವರೇ ತೇಜಿ (ಅಮಿತಾಭ್ ತಾಯಿ) ಅ ಅಮಿತ್ ಮತ್ತು ಬಂಟಿ (ಅಮಿತಾಭ್‌ನ ಸೋ ಅಜಿತಾಬ್) ಇಬ್ಬರೂ ನನ್ನ ಸೋದರರಿದ್ದಂತೆ."

1984ರಲ್ಲಿ, ಇಂದಿರಾ ಗಾಂಧಿಯ ಹತ್ಯೆಯ ನ ರಾಜಕಾರಣಕ್ಕೆ ಯಾರ್ಯಾರನ್ನು ಕರೆತರಬೇಕೆಂದು ರಾಜೀ ಗಾಂಧಿ ಒಂದು ಪಟ್ಟಿ ತಯಾರಿಸಿದ್ದರು. ಆ ಪಟ್ಟಿಯ ಅಮಿತಾಭ್ ಹೆಸರೂ ಇತ್ತು. ಅವರಿಬ್ಬರೂ ಬ ಸ್ನೇಹಿತರು. ಅಲಹಾಬಾದ್‌ನ ಅಮಿತಾಭ್‌ರ ಮನೆಯ ನಡೆದ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯೊಂದರಲ್ಲಿ ಮೊದಲ ಬಾ ಮುಖಾಮುಖಿಯಾದಾಗ ಅಮಿತಾಭ್‌ಗೆ ನಾಲ್ಕು ವ ರಾಜೀವ್‌ಗೆ ಇನ್ನೂ ಎರಡು ವರ್ಷ! ಅಮಿತಾಭ್ ದಿನವನ್ನು ಹೀಗೆ ಸ್ಮರಿಸುತ್ತಾರೆ: "ಆತ ಅವತ್ತು ಚೆಡ್ಡಿ ಮಾಡಿಕೊಂಡಿದ್ದನೆಂದು ಅಮ್ಮ ಹೇಳುತ್ತಿದ್ದಳು."


ಆದರೆ ಬಚ್ಚನ್‌ನ ರಾಜಕೀಯ ಎಂಟ್ರಿ ಅದ ಸಂಕೀರ್ಣತೆಯಿಂದ ಕೂಡಿತ್ತೆಂದರೆ ಅಮಿತಾಭ ಸಾಮರ್ಥ್ಯವನ್ನು ಮೀರಿದ್ದಾಗಿತ್ತು. ರಾಜೀವ್ ಹೆಸರಿನ ಜೊ ಅಮಿತಾಭ್ ಹೆಸರೂ ಬೋಫೋರ್ಸ್ ಹಗರಣ ಕೇಳಿಬಂದಿದ್ದೇ ತಡ ಅಮಿತಾಭ್‌ನ ರಾಜಕೀಯ ದಿನ



ಇಂದಿರಾ ಗಾಂಧಿಯ ಅಂತಿಮ ದರ್ಶನದಲ್ಲಿ...



ರಾಜೀವ್‌ಗಾಂಧಿಯ ಚಿತೆ ಬಳಿಯಲ್ಲಿ...



ಇಂದಿರಾ ಗಾಂಧಿ ಮತ್ತು ಅಮಿತಾಭ್ ತಾಯಿ ತೇಜಿ



70ರ ದಶಕದಲ್ಲಿ ಸೋನಿಯಾ ಗಾಂಧಿ ಜೊತೆ....

ರಿಹೋದವು. ಸಿಖ್ ಹತ್ಯೆಯ ಕಳಂಕಕ್ಕೆ ಪ್ರತಿಯಾಗಿ 84ರ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದ ಈ ್ ತಾಯಿಯ ಮಗ (ತೇಜಿ ಸಿಖ್ ಜನಾಂಗಕ್ಕೆ ರಿರುವವರು) ಬೋಫೋರ್ಸ್ ಹಗರಣದಿಂದಾಗಿ ತನ್ನ ರ್ಾರದಿಂದ ಹಿಂದೆ ಸರಿಯಬೇಕಾಯ್ತು.

ಅಮಿತಾಭ್‌ಗೆ ರಾಜಕೀಯೋದ್ಯಮ

"ನಾನು ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದಾಗಿನಿಂದ ನು ರಾಜಕಾರಣದಿಂದ ದೂರವೇ ಉಳಿದಿದ್ದೇನೆ. ಮತ್ತೆ ಲ್ಲಿಗೆ ಕಾಲಿಡಲು ನನಗಿಷ್ಟವಿಲ್ಲ. ವರ್ಷದಿಂದ ವರ್ಷಕ್ಕೆ ದರ್ಶನದಿಂದ ಸಂದರ್ಶನಕ್ಕೆ ನಾನಿದನ್ನು ಒತ್ತಿ ಹೇಳುತ್ತಲೇ ದಿದ್ದೇನೆ. ಇಂತಹ ಅರ್ಥಹೀನ ಪ್ರಶ್ನೆಗಳನ್ನು ಪುನಃಪುನಃ ಳುವುದೇ ನಿರರ್ಥಕ ಅಂತ ನನಗನ್ನಿಸುತ್ತೆ." 2010 ನವರಿ 19ರಂದು ಅಮಿತಾಭ್ ತನ್ನ ಬ್ಲಾಗ್‌ನಲ್ಲಿ ರೆದುಕೊಂಡದ್ದು ಹೀಗೆ.

ಅಮಿತಾಭ್‌ನ ಇಂತಹ ಸಮರ್ಥನೆಯೇ ವಾಸ್ತವಕ್ಕೆ ಸಿ ಬಳಿಯುವಂತದ್ದು. ಆತ ಮೊದಲ ಬಾರಿ ರಾಜಕೀಯ ದ ಹೊರಬಂದಾಗ ಗಾಂಧಿ ಕುಟುಂಬದೊಂದಿಗಿನ ವರ ಒಡನಾಟ ಬಹುಪಾಲು ಮುಕ್ಕು ಅಡರಿಸಿಕೊಂಡದ್ದು ಳ್ಳಿಲ್ಲ. ಆದರೆ ಶಿವಸೇನೆಯ ಭಾಳಾ ಠಾಕ್ರೆ ಜೊತೆಗೆ ಮಿತಾಭ್‌ನ ಸ್ನೇಹ ಮುಂದುವರೆದುಕೊಂಡೇ ಬಂದಿತ್ತು. 96 ರಲ್ಲಿ ಅಂದಿನ ಪ್ರಧಾನಿ ದೇವೇಗೌಡ ಮತ್ತು ಠಾಕ್ರೆ ಡುವಿನ ಒಂದು ಗುಪ್ತ ಮಾತುಕತೆಗೆ ಅಮಿತಾಭ್ ತನ್ನ ನೆಯಲ್ಲೇ ವೇದಿಕೆ ಕಲ್ಪಿಸಿಕೊಟ್ಟದ್ದು ಇದಕ್ಕೆ ಸಾಕ್ಷಿ. ಆ ಟೆ ಅಂದಿನ ಆಡಳಿತಾರೂಢ ಮಿತ್ರಪಕ್ಷಗಳಲ್ಲಿ ನಡುಕ ಟ್ಟಿಸಿದ್ದು ಈಗ ಇತಿಹಾಸ.

ಆಗಿನಿಂದಲೂ ಭಾಳಾ ಸಾಹೇಬ್ ಠಾಕ್ರೆಯನ್ನು ಮಿತಾಭ್ ಗೌರವಿಸುತ್ತಲೇ ಬಂದಿದ್ದಾರೆ. ಠಾಕ್ರೆ ಯುವುದಕ್ಕೂ ಕೆಲದಿನ ಮೊದಲು ತನ್ನ ಬ್ಲಾಗ್‌ನಲ್ಲಿ ಮಿತಾಭ್ ಹೀಗೆ ಬರೆದುಕೊಂಡಿದ್ದರು: "ಕೆಲ ನಿಮಿಷಗಳ ಂದಷ್ಟೇ ಬಾಳಾ ಸಾಹೇಬರು ಕರೆ ಮಾಡಿದ್ದರು. 'ನಾನು ಸಿನಿಮಾ ನೋಡಬೇಕು ಅಂದ್ಕೊಂಡಿದೀನಿ. ಮನೆಗೆ ಂದು ಆ ಸಿನಿಮಾ ತೋರಿಸು! ಅಲ್ಲದೇ ನಿನ್ನನ್ನು ನೋಡಿ ಹಳ ದಿನಗಳೇ ಆಗಿಹೋಯ್ತು' ಅಂದರು. ಅವರ ನೆಯಲ್ಲೇ ಸಿನಿಮಾ ಪ್ರೊಜೆಕ್ಷನ್‌ಗೆ ವ್ಯವಸ್ಥೆ ಮಾಡುವುದಾಗಿ ರವಸೆ ನೀಡಿದೆ. ಅವರ ಆರೋಗ್ಯದ ಬಗ್ಗೆ ವಿಚಾರಿಸಿದೆ. ನು ಚೆನ್ನಾಗಿದೀನಿ ಅಂತ ಅಂದರು. ಅನಾರೋಗ್ಯದ ರಣದಿಂದಾಗಿ ಅವರು ಹೊರಗೆ ಕಾಣಿಸಿಕೊಳ್ಳಲು ಆಗ್ತಿಲ್ಲ. ದ್ರೆ, ಅವರೊಳಗಿನ ಕಿಚ್ಚು ಇನ್ನೂ ಆರಿಲ್ಲ. ಮೊದಲಿನಂತೆಯೇ ಈಗಲೂ ಅವರು ನಿಶ್ಚಲ ಮತ್ತು ದೃಢವಾಗಿದ್ದಾರೆ. ಅವರ ಆ ದೃಢತೆಯಲ್ಲಿ ನಿಮಗೊಂದು ತ್ಮೀಯ ಪ್ರೀತಿಯ ಸೆಲೆ ಕಾಣಿಸುತ್ತೆ. ಅವರ ಉಪಸ್ಥಿತಿಯನ್ನು ಶ್ವಾಸಪೂರ್ಣ ಮತ್ತು ಆತ್ಮೀಯವಾಗಿಸುವುದೇ ಆ ಪ್ರೀತಿ. ಅವರ ಹಾಸ್ಯಪ್ರಜ್ಞೆಯೂ ಅಷ್ಟೇ ಸಮೃದ್ಧವಾಗಿದೆ."

ಈಗ 1996ಕ್ಕೆ ಮರಳುವುದಾದರೆ ದೇವೇಗೌಡರ ಜೊತೆ ಸೌಹಾರ್ದಯುತ ಭೇಟಿ ಮುಗಿಸಿ ಒಂದು ವಾರವಾಗಿತ್ತಷ್ಟೇ, ಬೆಂಗಳೂರಿನಲ್ಲಿ ಕರ್ನಾಟಕದ ಮುಖ್ಯಮಂತ್ರಿಯ ಸಮ್ಮುಖದಲ್ಲಿ ತಮ್ಮ ಹೊಸ ಕಂಪನಿ 'ಅಮಿತಾಭ್ ಬಚ್ಚನ್ ಕಾರ್ಪೊರೇಷನ್ ಲಿ.' (ಎಬಿಸಿಎಲ್) ಸಂಸ್ಥೆಯು ವಿಶ್ವಸುಂದರಿ ಸ್ಪರ್ಧೆ ಆಯೋಜಿಸುವುದಾಗಿ ಬಚ್ಚನ್ ಘೋಷಿಸಿದ್ದರು. ಆ ಸ್ಪರ್ಧೆ ಅಮಿತಾಭ್‌ನ ಆರ್ಥಿಕ ಸಂಕಟದ ಸುದೀರ್ಘ ಹಾದಿಯ ಮೊದಲ ಹೆಜ್ಜೆಯಾಗಿತ್ತು ಮಾತ್ರವಲ್ಲ ಮುಲಾಯಂ ಸಿಂಗ್ ನೇತೃತ್ವದ ಸಮಾಜವಾದಿ ಪಾರ್ಟಿಯ ನಾಯಕ ಅಮರ್ ಸಿಂಗ್‌ರನ್ನು ಅಮಿತಾಭ್‌ಗೆ ಹತ್ತಿರ ತರುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಅಮಿತಾಭ್ ಮತ್ತು ಆತನ ಹೆಂಡತಿ ಜಯಾರಿಂದ 'ಎಬಿಸಿಎಲ್' ಕಂಪನಿ ಸ್ಥಾಪನೆಯಾದಾಗ ಅದು ಭಾರತದ ಮೊದಲ ಮನರಂಜನಾ ಕಂಪನಿಯಾಗಿತ್ತು. 2000ನೇ ಇಸವಿಯ ವೇಳೆಗೆ ಈ ಕಂಪನಿ 1000 ಕೋಟಿ ರೂಪಾಯಿ ವಹಿವಾಟು ನಡೆಸಲಿದೆ ಅಂತ ಅಮಿತಾಭ್ ಯೋಜನೆ ಹಾಕಿಕೊಂಡಿದ್ದರು. ಆದರೆ 1999ರ ವೇಳೆಗೆ ವಿಶ್ವಸುಂದರಿ ಸ್ಪರ್ಧೆ ಹಾಗೂ 'ಮೃತ್ಯುದಾತ', 'ಸಾತ್ ರಂಗ್ ಕೆ ಸಪ್ನೆ', 'ಮೇಜರ್ ಸಾಬ್' ನಂತಹ ಸಿನಿಮಾಗಳು ಮತ್ತು 'ಅಚೇ ಬೇಬಿ', 'ನಾಮ್ ಕ್ಯಾ ಹೈ' ತರಹದ ಮ್ಯೂಸಿಕ್ ಆಲ್ಬಮ್‌ಗಳ ಏಟಿನಿಂದಾಗಿ ಎಬಿಸಿಎಲ್ ಸಂಸ್ಥೆ ಅದೆಷ್ಟು ಹದಗೆಟ್ಟು ಹೋಗಿತ್ತೆಂದರೆ ತನ್ನ ಆರ್ಥಿಕ ಸಂಕಟವನ್ನು ದೂರ ಮಾಡುವಂತೆ ಕೈಗಾರಿಕಾ ಮತ್ತು ಆರ್ಥಿಕ ಪುನರ್‌ರಚನಾ ಮಂಡಳಿಗೆ (ಬಿಐಎಫ್‌ಆರ್) ಅರ್ಜಿ ಗುಜರಾಯಿಸುವ ದೀನಸ್ಥಿತಿಗೆ ಕುಸಿದಿತ್ತು.

ಸಂಪೂರ್ಣ ಜಯಾ ಬಚ್ಚನ್‌ರ ಒಡೆತನದಲ್ಲಿದ್ದ ಸರಸ್ವತಿ ಆಡಿಯೋ ವಿಷುಯಲ್ಸ್ ಸಂಸ್ಥೆಯನ್ನು ಬರೋಬ್ಬರಿ 7 ಕೋಟಿ ರೂಪಾಯಿಗೆ 1995 ರಲ್ಲಿ ಎಬಿಸಿಎಲ್‌ಗೆ ಮಾರಾಟ ಮಾಡಿದ್ದೂ ಸಹ ಬಚ್ಚನ್‌ನ ವೃತ್ತಿಪರ ಉದ್ಯಮಕ್ಕೆ ನೆರವಾಗಲಿಲ್ಲ. ನಿಜ ಹೇಳಬೇಕೆಂದರೆ ಸರಸ್ವತಿ ಆಡಿಯೋ ವಿಷುಯಲ್ ಸಂಸ್ಥೆ ಒಂದು ಕೋಟಿಗೂ ಬೆಲೆ ಬಾಳುವಂತಿರಲಿಲ್ಲ. ಆದರೂ ಎಬಿಸಿಎಲ್ ಆರು ಕೋಟಿ ಹೆಚ್ಚು ಕೊಟ್ಟು ಖರೀದಿ ಮಾಡಿತ್ತು. ಅಲ್ಲದೇ ಎಬಿಸಿಎಲ್‌ನ ಪ್ರಧಾನ ಆಸ್ತಿಗಳಾಗಿದ್ದ ಅಮಿತಾಭ್ ಮತ್ತು ಜಯಾರೊಂದಿಗೆ ಹತ್ತು ವರ್ಷಗಳ ಅವಧಿಗೆ ಕ್ರಮವಾಗಿ 10 ಕೋಟಿ ಮತ್ತು 3 ಕೋಟಿ ರೂಪಾಯಿ ಕಾಂಟ್ರಾಕ್ಟನ್ನು ಆ ಕಂಪನಿ ಮಾಡಿಕೊಂಡಿತ್ತು. ಆರಂಭದ ಹಂತದಲ್ಲೇ ಒಟ್ಟಾರೆ 60.5 ಕೋಟಿ ಮುಖಬೆಲೆಗೆ ಪ್ರತಿಯಾಗಿ ಕಂಪನಿ 70.8 ಕೋಟಿ ಲುಕ್ಸಾನು ಮಾಡಿಕೊಂಡಿತ್ತು. ಸಾಲಗಾರರ ಹಾವಳಿಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಬಿಐಎಫ್‌ಆರ್‌ಗೆ ಅರ್ಜಿ ಗುಜರಾಯಿಸಿದ್ದು ಕಂಪನಿಯ ಜಾಣ ನಡೆಯಾಗಿತ್ತು.

ಕಾಂಗ್ರೆಸ್‌ನಿಂದ ಸಮಾಜವಾದಿಗೆ

ಎಬಿಸಿಎಲ್ ಸಂಸ್ಥೆಯ ಆರ್ಥಿಕ ಮುಗ್ಗಟ್ಟೇ ಅಮಿತಾಭ್‌ರನ್ನು ಸಮಾಜವಾದಿ ಪಾರ್ಟಿಯ ಅಮರ್ ಸಿಂಗ್ ಸುಖ್ಯಕ್ಕೆ ತಂದದ್ದು. ದಾಸ್‌ಗುಪ್ತರ ಪ್ರಕಾರ, ಅಮಿತಾಭ್ ಆರಂಭದಲ್ಲಿ ರಾಜಕಾರಣದ ಪ್ರವೇಶಿಸಿದ ದಿನಗಳಿಗೂ, ಅಮರ್ ಸಿಂಗ್ ಜೊತೆಗಿನ ಸ್ನೇಹದ ದಿನಗಳಿಗೂ ವ್ಯತ್ಯಾಸಗಳಿದ್ದವು. ಆಕೆ ಹೇಳುವಂತೆ "ಆ ಕರಾಳಹಿಂಸೆಯ (1984ರ ಸಿಖ್ ನರಮೇಧ) ಹೊರತಾಗಿಯೂ ಅಮಿತಾಭ್ ತಾನು ನಂಬಿಕೊಂಡಿದ್ದ ಪಕ್ಷದ ಪರವಾಗಿಯೇ ದೃಢವಾಗಿ ನಿಂತಿದ್ದರು. ಆದರೆ, ಅಮರ್ ಸಿಂಗ್ ಜೊತೆಗಿನ ಸ್ನೇಹ ಅವಕಾಶವಾದಿತನದಾಗಿದ್ದು, ವೈಯಕ್ತಿಕ ಸ್ವಾರ್ಥದಿಂದ ಕೂಡಿತ್ತು."

ಆ ಸ್ನೇಹ ಪರಸ್ಪರ ಇಬ್ಬರಿಗೂ ಅನುಕೂಲವಾದಂತಹ ಸ್ನೇಹದಂತೆಯೇ ಕಾಣಿಸುತ್ತದೆ. ಸೆಲೆಬ್ರಿಟಿಗಳ ಆ ಕಂಪನಿಯ ಪರ ಅಮರ್ ಸಿಂಗ್ ಒಲವು ಹೊಂದಿದ್ದು ಅವುಗಳಲ್ಲಿ ಅತ್ಯಂತ ದೊಡ್ಡದು ಎನ್ನಲಾಗುತ್ತದೆ. ಅವರ ಸ್ನೇಹ ಯಾವ ಹಂತಕ್ಕೆ ತಲುಪಿತೆಂದರೆ ಜಯಾ ಬಚ್ಚನ್‌ಗೆ ರಾಜ್ಯ ಸಭಾ ಸದಸ್ಯೆ ಸ್ಥಾನ ಸಮಾಜವಾದಿ ಪಾರ್ಟಿಯಿಂದ ಒಲಿದುಬಂತು.

2004ರ ಉತ್ತರ ಪ್ರದೇಶ ಚುನಾವಣೆಯಲ್ಲಿ ಎಸ್‌ಪಿ ಪಕ್ಷದ ಪರವಾಗಿ ಆಕೆ ಪ್ರಚಾರ ಮಾಡಿದ್ದಕ್ಕೆ ಪ್ರತಿಯಾಗಿ ಜಯಾಗೆ ಒಲಿದು ಬಂದ ಅವಕಾಶ ಅದು. ಬಾರಬಂಕಿಯ ಪ್ರಚಾರ ಸಭೆಯೊಂದರಲ್ಲಿ ಜಯಾ ಹೀಗೆ ಭಾಷಣ ಮಾಡಿದ್ದರು: "ಯಾವ ಜನ ನಮಗೆ ರಾಜನೀತಿಯನ್ನು ಕಲಿಸಿಕೊಟ್ಟರೋ, ಅದೇ ಜನ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟರು." ಆದಕ್ಕೆ ರಾಹುಲ್ ಗಾಂಧಿ "ಬಚ್ಚನ್‌ಗಳು ಸುಳ್ಳು ಹೇಳುತ್ತಿದ್ದಾರೆ. ಯಾರು ಯಾರಿಗೆ ಮೋಸ ಮಾಡಿದರು ಅನ್ನೋದು ಜನಕ್ಕೇ ಚೆನ್ನಾಗಿ ಗೊತ್ತಿದೆ" ಅಂತ ತಿರುಗೇಟು ನೀಡಿದ್ದರು.

ಎರಡೂ ಕುಟುಂಬಗಳ ನಡುವಿನ ವಿರಸ ತಾರಕಕ್ಕೇರಿದ್ದಾಗ ಹಿಂದೊಮ್ಮೆ ಅಮಿತಾಭ್ "ಅವರು ರಾಜರು, ನಾವು ಸಾಮಾನ್ಯ ಜನ. ರಾಜರು ಬಾಂಧವ್ಯವನ್ನು ಉಳಿಸಿಕೊಳ್ಳಲು ಬಯಸದಿದ್ದರೆ ಸಾಮಾನ್ಯ ಜನ ತಾನೆ ಏನು ಮಾಡಲು ಸಾಧ್ಯ? ನಮ್ಮೊಂದಿಗೆ ಬಾಂಧವ್ಯ ಉಳಿಸಿಕೊಳ್ಳಿ ಅಂತ ರಾಜರ ಮೇಲೆ ಸಾಮಾನ್ಯ ಜನ ಒತ್ತಡ ಹೇರಲು ಸಾಧ್ಯವೇ?" ಅಂದಿದ್ದರು. ಅವರದೇ ಮಾತಿನಲ್ಲಿದ್ದ 'ಸಾಮಾನ್ಯ ಜನ' ಕೆಲವೇ ದಿನಗಳ ನಂತರದಲ್ಲಿ ಸಮಾಜವಾದಿ ಪಾರ್ಟಿಯ ಸ್ಟಾರ್ ಪ್ರಚಾರಕರಾಗಿದ್ದು ವಿಪರ್ಯಾಸ.


ಅಮಿತಾಭ್‌ರ ಮೋದೀಕರಣ

"ಉನ್ನತಾಧಿಕಾರದಲ್ಲಿರುವ ಗೌರವಾನ್ವಿತರ ಭಾವನಾತ್ಮಕ ಕೃತಜ್ಞತೆ ಮತ್ತು ಸಹಕಾರಗಳು ನಮ್ಮನ್ನು ಮಾತು ಇಲ್ಲದವರನ್ನಾಗಿಸುತ್ತವೆ. ನಾನೀಗ ಅಂತಹುದೇ ಪರಿಸ್ಥಿತಿಯಲ್ಲಿದ್ದೇನೆ. ಶ್ರೀ ನರೇಂದ್ರ ಮೋದಿಯವರು ತಮ್ಮ ಆತ್ಮೀಯ ಆತಿಥ್ಯ ಹಾಗೂ ಸಜ್ಜನಿಕೆಯ ಜತೆಗೆ ನಮ್ಮ 'ಪಾ' ಸಿನಿಮಾಕ್ಕೆ ತೆರಿಗೆ ವಿನಾಯ್ತಿ ನೀಡಲು ಮುತುವರ್ಜಿ ವಹಿಸಿ ಮಂಜೂರು ಮಾಡಿಸಿಕೊಟ್ಟಿದ್ದಾರೆ. ಅವರು ಸರಳವಾಗಿ ಮತ್ತು ಅತಿ ಕಡಿಮೆ ಮೂಲ ಸೌಕರ್ಯಗಳೊಂದಿಗೆ ಬದುಕು ನಡೆಸುತ್ತಿದ್ದಾರೆ. ಅವರ ಮಾತುಗಳಲ್ಲಿ ಅಭಿವೃದ್ಧಿ ಮತ್ತು ಪ್ರಗತಿಯತ್ತ ಒಲವು ಪುಟಿಯುತ್ತದೆ. ಹೊಸಹೊಸ ಆಲೋಚನೆ ಮತ್ತು ಮಾದರಿಗಳನ್ನು ಅವರು ಸದಾ ಸ್ವಾಗತಿಸುತ್ತಾರೆ. ತಮ್ಮ ಸಿಎಂ ಹುದ್ದೆಯನ್ನು ಅವರು ಆಗಿಂದಾಗ್ಗೆ 'ಕಾಮನ್ ಮ್ಯಾನ್' ಅಂತ ವಿಶ್ಲೇಷಿಸಿಕೊಳ್ಳುವುದನ್ನು ಯಾರೂ ತಪ್ಪು ತಿಳಿಯುವ ಅಗತ್ಯವಿಲ್ಲ. ಅವರು ನುಡಿದಂತೆಯೇ ನಡೆದುಕೊಳ್ಳುತ್ತಿದ್ದಾರೆ." 2010ರ ಜನವರಿ 6 ಮತ್ತು 7ರ ಬ್ಲಾಗ್‌ನಲ್ಲಿ ಅಮಿತಾಭ್ ಹೀಗೆಲ್ಲ ಬರೆದುಕೊಂಡಿದ್ದರು.

ನರೇಂದ್ರ ಮೋದಿಯನ್ನು ಅಮಿತಾಭ್ ಹಾಡಿ ಹೊಗಳಿದ ದಿನವೇ ಅತ್ತ ಅಮರ್ ಸಿಂಗ್ ಸಮಾಜವಾದಿ ಪಾರ್ಟಿಯ ತನ್ನ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಇದು ಕಾಕತಾಳೀಯವೇನಲ್ಲ. ಅಮಿತಾಭ್ ಒಂದು ಮೂಲದಲ್ಲಿ ತನ್ನ ರಾಜಕೀಯ ಆಧಾರವನ್ನು ಕಳೆದುಕೊಳ್ಳುತ್ತಿದ್ದಂತೆಯೇ ಮತ್ತೊಂದು ಮೂಲದಿಂದ ಅದನ್ನು ಸಕ್ರಿಯವಾಗಿ ದಕ್ಕಿಸಿಕೊಳ್ಳುತ್ತಿದ್ದರು.

ಕಾಂಗ್ರೆಸ್ಸಿಗ ರಾಜೀವ್ ಶುಕ್ಲಾ ಆರೋಪಿಸುವಂತೆ ಅಮಿತಾಭ್ ಬಚ್ಚನ್ ಮೋದಿ ಮುಖ್ಯಮಂತ್ರಿಯಾಗಿದ್ದ ಗುಜರಾತ್ ರಾಜ್ಯದ ರಾಯಭಾರಿಯಾಗಲು ಸಮ್ಮತಿ ಸೂಚಿಸಿದ್ದೇ ಆತ ಬಲು ಜಾಗರೂಕತೆಯಿಂದ ಸಲುಹಿ ಕೊಂಡು ಬಂದಿರುವ 'ಅನುಕೂಲಸಿಂಧು ಬಾಂಧವ್ಯ'ದ ಭಾಗವಾಗಿ. "ಮೊದಲು ಅದು ಉತ್ತರ ಪ್ರದೇಶದಲ್ಲಿತ್ತು. ಮುಲಾಯಂ ಸಿಂಗ್ ಅಲ್ಲಿನ ಮುಖ್ಯಮಂತ್ರಿಯಾಗಿದ್ದಷ್ಟು ಕಾಲ ಸಮಾಜವಾದಿ ಪಾರ್ಟಿಯ ಚುನಾವಣಾ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬಚ್ಚನ್ ಈಗ ಮೋದಿ ಮತ್ತು ಗುಜರಾತ್‌ನತ್ತ ತಿರುಗಿದ್ದಾರೆ" ಎಂದಿದ್ದರು ಶುಕ್ಲಾ. "ಇದು ಒಂದು ಸಂಪೂರ್ಣ 'ಯು' ಟರ್ನ್ ಮಾತ್ರವಲ್ಲ, ಸೈದ್ಧಾಂತಿಕ ಪಲ್ಟಿಯೂ ಹೌದು" ಅಂತ ಶುಕ್ಲಾ ಹೇಳುತ್ತಾರೆ.

ಆದರೆ ಮಲ್ಲಿಕಾ ಸಾರಾಭಾಯ್‌ರ ಹೇಳಿಕೆ ಅಮಿತಾಭ್‌ರನ್ನು ಹೆಚ್ಚು ಕುಟುಕುತ್ತದೆ. "ಗುಜರಾತ್ ಸರ್ಕಾರದ ಅಧಿಕಾರಿಯೊಬ್ಬರು ನನಗೆ ಹೇಳಿರುವಂತೆ ಬಚ್ಚನ್ ಗುಜರಾತ್‌ನಲ್ಲಿ ತೆರಿಗೆ ವಿನಾಯ್ತಿಯನ್ನೂ, ತನ್ನ ಫಿಲ್ಮ್‌ಸಿಟಿಗೆ ಉಚಿತ ಜಮೀನನ್ನೂ ಮತ್ತು ತಮ್ಮ ಹೆಂಡತಿ ಜಯಾ ಬಚ್ಚನ್‌ಗೆ ರಾಜ್ಯಸಭಾ ಸ್ಥಾನವನ್ನೂ ಬೇಡಿಕೆಯಾಗಿಟ್ಟ ನಂತರವೇ ಅಮಿತಾಭ್ ರಾಯಭಾರಿಯಾಗಲು ಒಪ್ಪಿದ್ದು. ಉತ್ತರ ಪ್ರದೇಶದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಯಿಂದಾಗಿ ಇವ್ಯಾವುವೂ ಅಲ್ಲಿ ಈಡೇರುವುದಿಲ್ಲ ಎಂದು ಮನದಟ್ಟಾದ ನಂತರವೇ ಆ ಬೇಡಿಕೆ ಸಹಿತ ಬಚ್ಚನ್ ಗುಜರಾತ್‌ನತ್ತ ಮುಖ ಮಾಡಿದ್ದು."




ನರಸಿಂಹರಾವ್ ಪ್ರಮಾಣವಚನದ ಸಂದರ್ಭದಲ್ಲಿ...

ಜಯಾ ಬಚ್ಚನ್‌ರ ಅಧಿಕಾರಾವಧಿ ಇನ್ನೂ ಮೂರು ತಿಂಗಳಲ್ಲಿ ಕೊನೆಯಾಗಲಿದ್ದು ಆ ಕುಟುಂಬಕ್ಕೆ ರಾಜಕೀಯ ವೇದಿಕೆಯ ಅವಶ್ಯಕತೆ ಇದೆ. ಬಚ್ಚನ್ ಕುಟುಂಬದ ಮೇಲೆ ದಾಳಿಗಳಾದಾಗಲೆಲ್ಲ ಅದರಿಂದ ಬಚಾವಾಗಲು ಆಕೆ ತನ್ನ ರಾಜಕೀಯ ಅಧಿಕಾರವನ್ನು ಗುರಾಣಿಯಂತೆ ಬಳಸುತ್ತಾ ಬಂದಿದ್ದಾಳೆ. 2007ರ ಅತ್ಯಂತ ದುಬಾರಿ ವಿದ್ಯಮಾನಗಳಲ್ಲಿ ಒಂದಾದ ಐಶ್ವರ್ಯ-ಅಭಿಷೇಕ್ ಮದುವೆಯಲ್ಲಿ 2 ಕೋಟಿ ಹೆಚ್ಚುವರಿಯಾಗಿ ಖರ್ಚು ಮಾಡಿದ್ದನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಪ್ರಶ್ನಿಸಲು ಬಂದಾಗಲೂ ಆಕೆ ಅದನ್ನೇ ಮಾಡಿದ್ದಳು. ಸತ್ಯವೇನೇ ಆಗಿರಲಿ, ಗಮನಿಸಬೇಕಾದ ಅಂಶವೆಂದರೆ ಬಚ್ಚನ್ ಕುಟುಂಬದ ಈ ರಾಜಕಾರಣದ ವ್ಯವಹಾರವನ್ನು ಅನುಮಾನಿಸುವವರ ಸಂಖ್ಯೆ ಕಮ್ಮಿ ಇಲ್ಲ. ಮುಖ್ಯವಾಗಿ ಅವರ 'ಅವಕಾಶವಾದಿತನದ' ಬಗ್ಗೆ ಧ್ವನಿ ಜೋರಾಗುತ್ತಿದೆ.

● ಹರ್ತೋಷ್ ಸಿಂಗ್ ಬಲ್

ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ



ಸಮಾಜವಾದಿ ಪಾರ್ಟಿ ಸಖ್ಯದಲ್ಲಿ...

ದಕ್ಷಿಣ ಪದವೀಧರ ಕ್ಷೇತ್ರ: 'ತೆನೆ'ಗೆ 'ಕೈ'ಯಿಟ್ಟ 'ಕಮಲ


ವಿಧಾನಮಂಡಲದ ಹಿರಿಯರ ಮನೆ ಎಂದೇ ಕರೆಯುವ ವಿಧಾನ ಪರಿಷತ್ತಿಗೆ ದಕ್ಷಿಣ ಪದವೀಧರ ಕ್ಷೇತ್ರದಿಂದ ಜೂನ್ 9ರಂದು ನಡೆಯುತ್ತಿರುವ ಚುನಾವಣೆಗೆ ಕಣದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ತೀವ್ರ ಪೈಪೋಟಿಯ ನಡುವೆ ಸೆದ್ದು ಹೊಡೆಯಲು ಕಾಂಗ್ರೆಸ್ ಪೊಲಿಟಿಕಲ್ ಅಸ್ತ್ರಗಳ ಸಮೇತ ಸಜ್ಜಾಗಿದೆ. ಚುನಾವಣಾ ಅಖಾಡದಲ್ಲಿ ಸದ್ಯದ ಚಿತ್ರಣದ ಪ್ರಕಾರ ಬಿಜೆಪಿಯ ಮೈ.ವಿ.ರವಿಶಂಕರ್ ಹಾಗೂ ಜೆಡಿಎಸ್‌ನ ಕೆ.ಟಿ.ಶ್ರೀಕಂಠೇ ಗೌಡರ ನಡುವೆ ಪ್ರಬಲ ಸ್ಪರ್ಧೆ ಏರ್ಪಟ್ಟಂತೆ ಕಾಣುತ್ತ ದಾದರೂ ಕಾಂಗ್ರೆಸ್‌ನ ಡಾ. ಎಚ್.ಎನ್.ರವೀಂದ್ರರನ್ನು ಏಕ್‌ದಂ ರೂಲ್‌ಔಟ್ ಮಾಡಲಾಗುವುದಿಲ್ಲ.


ತಮ್ಮದೇ ಪಕ್ಷ ರಾಜ್ಯದ ಚುಕ್ಕಾಣಿ ಹಿಡಿದಿರುವುದರಿಂದ ಈ ಬಾರಿ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಶತಾಯ-ಗತಾಯ ಕಾಂಗ್ರೆಸ್ ಬಾವುಟ ಹಾರಿಸಬೇಕೆಂದು ರವೀಂದ್ರ ತಿಣುಕಾಡುತ್ತಿದ್ದಾರೆ. ಕ್ಷೇತ್ರದ ವ್ಯಾಪ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆಯೂ ಸೇರಿರುವುದರಿಂದ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಕ್ಷೇತ್ರದಲ್ಲೇ ಕಾಂಗ್ರೆಸ್ ಅಭ್ಯರ್ಥಿ ಸೋತರೆ ರಾಜಕೀಯವಾಗಿ ಬೇರೆಯೇ ಸಂದೇಶ ರವಾನೆಯಾಗುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಗೆಲುವಿಗೆ ಗಂಭೀರ ಪ್ರಯತ್ನ ನಡೆಸಿದೆ. ದಕ್ಷಿಣ ಪದವೀಧರ ಕ್ಷೇತ್ರವೆಂದರೆ ಅದು ಬಿಜೆಪಿಯ ಭದ್ರಕೋಟೆ. ಮೂರು ಬಾರಿ ಇಲ್ಲಿಂದ ಗೆಲ್ಲುವ ಮೂಲಕ ಗೋ.ಮಧುಸೂದನ್ ಅದನ್ನು ಮತ್ತಷ್ಟು ಖಾತ್ರಿಮಾಡಿಟ್ಟಿ ದ್ದಾನೆ. ಜೆಡಿಎಸ್‌ನ ಕೆ.ಟಿ.ಶ್ರೀಕಂಠೇ ಗೌಡರಾದರು ಒಮ್ಮೆ ಇಲ್ಲಿಂದ ಗೆದ್ದಿದ್ದಾರಾದರು ಕಾಂಗ್ರೆಸ್ ಒಮ್ಮೆಯೂ ಗೆದ್ದಿಲ್ಲ. ಈ ಸಲ ಆ ಕಳಂಕ ತೊಡೆದು ಕಾಂಗ್ರೆಸ್ ವಿಜಯಪತಾಕೆ ಹಾರಿಸುತ್ತದೆ ಅಂತ ಕಾಂಗ್ರೆಸ್ ನಾಯಕರು ಮಾತಿನ ಪಟಾಕಿ ಸಿಡಿಸುತ್ತಿದ್ದಾರೆ. ಆದರೆ ಅಷ್ಟು ಸುಲಭದ ಮಾತಲ್ಲ ಎನ್ನುವುದಂತೂ ಸತ್ಯ.


ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ **1,20,445** ಮಂದಿ ಮತದಾರರಿದ್ದಾರೆ. ಒಟ್ಟು **17** ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಅತಿಹೆಚ್ಚು **56,075** ಮತದಾರರಿದ್ದರೆ, ಮಂಡ್ಯ ಜಿಲ್ಲೆಯಲ್ಲಿ **31,769** ಮತದಾರರಿದ್ದಾರೆ. ಹಾಸನ ಜಿಲ್ಲೆಯಲ್ಲಿ **23,769** ಮತದಾರರಿದ್ದರೆ, ಚಾಮರಾಜನಗರ ಜಿಲ್ಲೆಯಲ್ಲಿ ಅತಿ ಕಡಿಮೆ **8,832** ಮತದಾರರಿದ್ದಾರೆ. ಮೂರು ರಾಜಕೀಯ ಪಕ್ಷಗಳಲ್ಲದೆ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಎಚ್.ಎನ್.ಮಂಚೇಗೌಡ, ಕನ್ನಡ ಚಳವಳಿಯ ವಾಟಾಳ್ ನಾಗರಾಜ್, ಖ್ಯಾತ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮೊದಲಾದವರೂ ಅಖಾಡಕ್ಕೆ ಧುಮುಕಿದ್ದಾರೆ.


ಜಾತಿವಾರು ಲೆಕ್ಕಾಚಾರ

ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಒಕ್ಕಲಿಗ ಮತದಾರರದ್ದೇ ಪಾರುಪತ್ಯ, ಮಂಡ್ಯ, ಹಾಸನ ಜಿಲ್ಲೆಯಲ್ಲಿ ಒಕ್ಕಲಿಗ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮೈಸೂರಿನಲ್ಲಿ ಒಕ್ಕಲಿಗ, ಲಿಂಗಾಯತ ಮತ್ತು ಬ್ರಾಹ್ಮಣ ಮತದಾರರದ್ದೇ ನಿರ್ಣಾಯಕ. ಇನ್ನು ಚಾಮರಾಜನಗರದಲ್ಲಿ ದಲಿತ ಮತ್ತು ಲಿಂಗಾಯತ ಜನಾಂಗದ ಮತಗಳು ಗಣನೀಯ ಸಂಖ್ಯೆಯಲ್ಲಿವೆ. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಲಿಂಗಾಯತ ಮತ್ತು ಬ್ರಾಹ್ಮಣ ಮತದಾರರ ಒಲವು ಬಿಜೆಪಿ ಪಕ್ಷದ ಮೇಲಿದ್ದುದರಿಂದಲೇ ಈ ಹಿಂದೆ ಗೋ.ಮಧುಸೂದನ್ ಮೂರು ಬಾರಿ ಗೆಲ್ಲಲು ಸಾಧ್ಯವಾದದ್ದು. ಬಹುಸಂಖ್ಯೆಯ ಲ್ಲಿರುವ ಒಕ್ಕಲಿಗ ಮತಗಳು ಒಕ್ಕಲಿಗ ಜನಾಂಗಕ್ಕೆ ಸೇರಿರುವ ಜೆಡಿಎಸ್‌ನ ಶ್ರೀಕಂಠೇಗೌಡ ಹಾಗೂ ಕಾಂಗ್ರೆಸ್‌ನ ರವೀಂದ್ರರ ನಡುವೆ ಹಂಚಿಹೋಗುವುದರಿಂದ ಬಿಜೆಪಿಯ ಬ್ರಾಹ್ಮಣ ಅಭ್ಯರ್ಥಿ ರವಿಶಂಕರ್‌ಗೆ ಚಾನ್ಸ್ ಜಾಸ್ತಿ ಅನ್ನೋ ಲೆಕ್ಕಾಚಾರ ಕಮಲ ಪಾಳಯದಲ್ಲಿದೆ. ಈ ಕ್ಷೇತ್ರದಲ್ಲಿ ಗೆಲುವನ್ನೆ ಕಾಣದ ಕಾಂಗ್ರೆಸ್ ಪಕ್ಷ ಈ ಬಾರಿ ಸಂಘಟಿತರಾಗಿ ಹೋರಾಟ ಮಾಡುವ ಜೊತೆಗೆ ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ಎದುರಾಳಿಗಳಾದ ಬಿಜೆಪಿ ಮತ್ತು ಜೆಡಿಎಸ್‌ಗೆ ಪ್ರಬಲವಾಗಿ ಸೆದ್ದು ಹೊಡೆದಿದೆ. ಚುನಾವಣೆಗೂ ಮುನ್ನ ಈ ಬಾರಿಯೂ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಅಭ್ಯರ್ಥಿಗಳ ನಡುವೆಯೇ ನೇರ ಪೈಪೋಟಿ ಎಂದು ಹೇಳಲಾಗುತ್ತಿತ್ತು, ಆದರೆ ದಿನಕಳೆದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾರಥ್ಯದಲ್ಲಿ ಕಾಂಗ್ರೆಸ್ ನಾಯಕರು ಅಖಾಡಕ್ಕೆ ಇಳಿದಿರುವುದರಿಂದ ಸ್ವಲ್ಪಮಟ್ಟಿಗೆ ಕ್ಷೇತ್ರದ ಚಿತ್ರಣ ಬದಲಾಗುತ್ತಿರುವಂತೆ ಕಂಡುಬರುತ್ತಿದೆ.














ಪದವೀಧರ ಕ್ಷೇತ್ರದ ಚುನಾವಣೆ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ನಡೆಯುವ ಹಿನ್ನೆಲೆಯಲ್ಲಿ ಮೂರು ಪಕ್ಷಗಳ ಅಭ್ಯರ್ಥಿಗಳು ತಮ್ಮದೇ ಆದ ರಾಜಕೀಯ ಲೆಕ್ಕಾಚಾರದ ಮೇಲೆ ಮತಯಾಚಿಸುತ್ತಿದ್ದಾರೆ. ಗೆಲ್ಲಲು ಹರಸಾಹಸ ನಡೆಸುತ್ತಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತದಾರರನ್ನು ಬುಟ್ಟಿಗೆ ಹಾಕಿಕೊಳ್ಳಲು ಯಥಾ ಹಾದಿಯನ್ನೇ ತುಳಿದಿವೆ. ಮೂರು ಪಕ್ಷಗಳಿಂದ ಹಲವೆಡೆ ಭರ್ಜರಿ ಮದ್ಯ, ಬಾಡೂಟದ ಸಮಾರಾಧನೆ ನಡೆದಿದೆ. ಅಲ್ಲದೆ ಹಲವೆಡೆ ಹಣವನ್ನೂ ಹಂಚಲಾಗಿದೆ. ಗೆಲ್ಲುವುದನ್ನೇ ಗುರಿಯಾಗಿಸಿಕೊಂಡಿರುವ ಅಭ್ಯರ್ಥಿಗಳು ಅದಕ್ಕಾಗಿ ಕೋಟ್ಯಾಂತರ ಹಣವನ್ನು ನೀರಿನಂತೆ ಹರಿಸುತ್ತಿದ್ದಾರೆ. ಇವರ ಅಬ್ಬರದ ನಡುವೆ ಪಕ್ಷೇತರ ಅಭ್ಯರ್ಥಿಗಳ ಹೆಸರೇ ಸ್ಪರ್ಧೆಯಲ್ಲಿ ಮಂಕಾಗಿಹೋಗಿವೆ.

ಕಾಂಗ್ರೆಸ್ ಲೆಕ್ಕಾಚಾರ

ಗೆಲುವಿನ ನಾಗಾಲೋಟ ಮುಂದುವರಿಸಲು ಕಸರತ್ತು ನಡೆಸುತ್ತಿರುವ ಬಿಜೆಪಿ ಪ್ರಯತ್ನಕ್ಕೆ ಕಡಿವಾಣ ಹಾಕುವ ಜತೆಗೆ ಜೆಡಿಎಸ್ ಗೆಲುವು ಸಾಧಿಸದಂತೆ ನೋಡಿಕೊಳ್ಳಲು ಕಾಂಗ್ರೆಸ್ ತನ್ನದೇ ಆದ ಕಾರ್ಯತಂತ್ರ ರೂಪಿಸಿದೆ. ಸ್ವತಃ ಸಿದ್ದರಾಮಯ್ಯ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲೇಬೇಕೆಂದು ಫರ್ಮಾನು ಹೊರಡಿಸಿದ್ದಾರೆ. ತಾವೇ ಹಲವು ಬಾರಿ ಮೈಸೂರಿಗೆ ಬಂದು ಪ್ರಚಾರ ನಡೆಸಿದ್ದಾರೆ. ಸಿಎಂ ಆಪ್ತ ಸಚಿವರಾದ ವಿ.ಶ್ರೀನಿವಾಸಪ್ರಸಾದ್, ಎಚ್.ಸಿ.ಮಹದೇವಪ್ಪ, ಎಚ್.ಎಸ್.ಮಹದೇವ್ ಪ್ರಸಾದ್ ಮೊದಲಾದವರ ತಂಡ ಡಾ.ರವೀಂದ್ರ ಗೆಲುವಿಗೆ ಕಾರ್ಯತಂತ್ರಗಳನ್ನು ಪ್ರಯೋಗಿಸುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಅತ್ಯಧಿಕ ಲೀಡ್ ಕೊಡಿಸಲು ಶಾಸಕರಾದ ತನ್ವೀರ್ ಸೇಟ್, ವಾಸು, ಸೋಮಶೇಖರ್, ಹುಣಸೂರಿನ ಎಚ್.ಪಿ.ಮಂಜುನಾಥ್, ಪಿರಿಯಾಪಟ್ಟಣದ ವೆಂಕಟೇಶ್ ಸೇರಿದಂತೆ ಹಲವು ನಾಯಕರು ಗರಗರನೆ ಸುತ್ತುತ್ತಿದ್ದಾರೆ. ಹಾಸನದಲ್ಲಿ ಸಚಿವ ಎ.ಮಂಜು ಗೌಡರ ಪಾಳಯಕ್ಕೆ ನುಗ್ಗಿ ಒಂದಷ್ಟು ಒಕ್ಕಲಿಗ ಮತಗಳನ್ನು ಸೆಳೆಯುವ ಕಾರ್ಯತಂತ್ರ ರೂಪಿಸಿದ್ದಾರೆ. ಮಂಡ್ಯದಲ್ಲಿ ಕಾಂಗ್ರೆಸ್‌ಗಿಂತ ಜೆಡಿಎಸ್‌ಗೆ ಹೆಚ್ಚಿನ ಮತಗಳು ಬರಬಹುದು. ಸೋಮಾರಿ ಸಚಿವ ಅಂಬರೀಶ್ ಕಾಂಗ್ರೆಸ್ ಅಭ್ಯರ್ಥಿಯ ಪ್ರಚಾರಕ್ಕೆ ಬಂದಿಲ್ಲ, ತೋರಿಗೆಗೆಂಬಂತೆ ಒಂದೆರಡು ಬಾರಿ ಪ್ರಚಾರ ನಡೆಸಿದ್ದಾರೆ. ಮಳವಳ್ಳಿಯಲ್ಲಿ ಶಾಸಕ ನರೇಂದ್ರಸ್ವಾಮಿ ಪ್ರಾಬಲ್ಯದ ಕಾರಣಕ್ಕೆ ಕಾಂಗ್ರೆಸ್ ಅಭ್ಯರ್ಥಿಗೆ ಒಂದಷ್ಟು ಮತ ಹೆಚ್ಚು ದೊರಕಬಹುದು.


ಶತಾಯಗತಾಯ ಗೆಲ್ಲಲೇಬೇಕು, ಆ ಮೂಲಕ ಮುಖ್ಯಮಂತ್ರಿಗೆ ಆಗಬಹುದಾದ 'ತವರು ಮುಖಭಂಗ' ತಪ್ಪಿಸಬೇಕೆಂಬ ಆತಂಕದಲ್ಲಿರುವ ಕಾಂಗ್ರೆಸ್ ನಾಯಕರು ಪಕ್ಷದೊಳಗೆ ತಲೆದೋರಿದ್ದ ಬಂಡಾಯವನ್ನು ಶಮನ ಮಾಡಿರುವುದು ರವೀಂದ್ರರಿಗೆ ಪ್ಲಸ್ ಪಾಯಿಂಟ್ ಆಗಲಿದೆ. ಕಳೆದ ಬಾರಿ ಸೋತಿದ್ದ ಲಕ್ಷ್ಮಣ್ ಈ ಬಾರಿಯೂ ತನಗೇ ಟಿಕೆಟ್ ದೊರೆಯಲಿದೆ ಎಂಬ ವಿಶ್ವಾಸದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪದವೀಧರರನ್ನು ಮತದಾರರನ್ನಾಗಿ ನೋಂದಾಯಿಸಿ ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಆದರೆ ಭಾರತೀಯ ವೈದ್ಯಕೀಯ ಮಂಡಳಿ ಸದಸ್ಯ ಡಾ.ರವೀಂದ್ರ ಕಾಂಗ್ರೆಸ್ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಕಳೆದ ಬಾರಿ ಸೋತಿದ್ದ ಲಕ್ಷ್ಮಣ್‌ರ ಗೆಲುವಿಗೆ ಶ್ರಮಿಸಬೇಕು ಅಂತ ಕಾಂಗ್ರೆಸ್‌ನ ಪ್ರಭಾವಿ ನಾಯಕರೆಲ್ಲ ಸಜ್ಜಾಗಿದ್ದ ಸಂದರ್ಭದಲ್ಲಿ ರವೀಂದ್ರ ದಿಢೀರ್ ಟಿಕೆಟ್ ಸಮೇತ ಹಾಜರಾದದ್ದು ಹಲವರಲ್ಲಿ ಅಸಮಾಧಾನ ಹುಟ್ಟುಹಾಕಿತ್ತು. ಇನ್ನು ಚುನಾವಣೆಯಲ್ಲಿ ಸ್ಪರ್ಧಿಸುವ ಸಲುವಾಗಿಯೇ ಉಪನ್ಯಾಸಕ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದಿದ್ದ ಮಂಡ್ಯದ ಎಚ್.ಎನ್.ಮಂಚೇಗೌಡ, ಪದವೀಧರರ ಹೆಸರು ನೋಂದಾಯಿಸಿಕೊಂಡು ಚುನಾವಣೆಗೆ ಸಿದ್ಧತೆ ನಡೆಸಿದ್ದರು. ಎರಡು ಬಾರಿ ಸೆನೆಟ್ ಸದಸ್ಯರಾಗಿ ಆಯ್ಕೆಯಾಗಿದ್ದ ಮಂಚೇಗೌಡ ಮೂಲತಃ ಮಂಡ್ಯದವರಾದರೂ ಕಳೆದ 25 ವರ್ಷಗಳಿಂದ ಉಪನ್ಯಾಸಕರಾಗಿ ಮೈಸೂರಿನಲ್ಲಿಯೇ ನೆಲೆಸಿದ್ದಾರೆ. ಮಂಡ್ಯ, ಮೈಸೂರು, ಹಾಸನ ಸಂಪರ್ಕದಲ್ಲಿ ಇದ್ದವರು. ಅವರಿಗೂ ಕಾಂಗ್ರೆಸ್
ಕೈ ತಪ್ಪಿದ್ದರಿಂದ ಬಂಡಾಯ ಅಭ್ಯರ್ಥಿಯಾಗಿ
ಕಣದಲ್ಲಿದ್ದಾರೆ.

ಹಾಗೆಯೇ ವಿವಾದದ ಹೇಳಿಕೆಯ ಮೂಲಕ
ಗುರುತಿಸಿಕೊಂಡಿರುವ ಪ್ರಗತಿಪರ ವಿಚಾರವಾದಿ,
ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಕೂಡ ಕಣದಲ್ಲಿ
ಇವರಿಬ್ಬರೂ ಕಾಂಗ್ರೆಸ್ ಮತಬುಟ್ಟಿಗೆ ಕೈಹಾಕಿ
ಒಂದಷ್ಟು ಮತಗಳನ್ನು ಸೆಳೆಯುವುದರಿಂದ ಅದು
ಕಾಂಗ್ರೆಸ್‌ನ ರವೀಂದ್ರರಿಗೆ ಮೈನಸ್ಸು. ಇವರಿಬ್ಬರು
ಪಡೆಯುವ ಮತಗಳ ಆಧಾರದ ಮೇಲೆ ರವೀಂ
ಗೆಲುವು ನಿರ್ಧಾರವಾಗಲಿದೆ. ಇವರು ಹೆಚ್ಚು ಮ
ಸೆಳೆದದ್ದೇ ಆದಲ್ಲಿ ರವೀಂದ್ರ ಜಯದ ಸನಿಹಕ್ಕೂ
ಹೋಗುವುದು ಕಷ್ಟವಾಗಲಿದೆ. ಕನ್ನಡ ಚಳವಳಿ
ವಾಟಾಳ್ ನಾಗರಾಜ್ ಸ್ಪರ್ಧೆ ಅಂತಹ
ಪರಿಣಾಮವನ್ನೇನೂ ಬೀರಲಾರದು.

ಜೆಡಿಎಸ್ ಪೈಪೋಟಿ

ಕಳೆದ ಬಾರಿ 2ನೇ ಸ್ಥಾನ ಗಳಿಸಿದ್ದ
ಕೆ.ಟಿ.ಶ್ರೀಕಂಠೇಗೌಡರನ್ನೇ ಜೆಡಿಎಸ್ ಮತ್ತೆ
ಕಣಕ್ಕಿಳಿಸಿದೆ. ತನಗೇ ಜೆಡಿಎಸ್ ಟಿಕೆಟ್ ಎಂದು
ಪ್ರಚಾರ ಆರಂಭಿಸಿದ್ದ ಶಾಸಕ ಚಲುವರಾಯಸ್ವಾಮಿ
ಭಂಟ ಮದ್ದೂರಿನ ವಿ.ಕೆ.ಜಗದೀಶ್, ಟಿಕೆಟ್ ಸಿ
ಸಿಟ್ಟಿನಿಂದ ಬಿಜೆಪಿ ಸೇರಿರುವುದರಿಂದ ಜೆಡಿಎಸ್
ಮತಗಳಿಗೆ ಒಂದಷ್ಟು ಪೆಟ್ಟು ಬೀಳಲಿದೆ.
ಉಪನ್ಯಾಸಕನಾಗಿ, ಪ್ರಾಂಶುಪಾಲರ ಸಂಘದ ಅಧ್ಯ
ದುಡಿದಿರುವ ಕೆ.ಟಿ.ಶ್ರೀಕಂಠೇಗೌಡ ಕಳೆದ ಬಾರಿ
ಸೋತರೂ 4 ಜಿಲ್ಲೆಗಳಲ್ಲಿ ಒಡನಾಟ ಮುಂದುವ
ದ್ದರು. ಒಂದೊಮ್ಮೆ ಶ್ರೀಕಂಠೇಗೌಡರಿಗಲ್ಲದೆ ವಿ
ಜಗದೀಶ್‌ಗೆ ಟಿಕೆಟ್ ಸಿಕ್ಕಿದ್ದರೆ ಜೆಡಿಎಸ್ ಸೋಲ
ಸಾಧ್ಯತೆಗಳೇ ದಟ್ಟವಾಗಿರುತ್ತಿದ್ದವು. ಹಾಗಾಗಿ
ದೇವು-ಕುಮ್ಮಿ ಜೋಡಿ ಕೊನೆಗಳಿಗೆಯಲ್ಲಿ
ಚಲುವರಾಯಸ್ವಾಮಿ ಭಂಟನಿಗೆ ಕೈಕೊಟ್ಟು
ಶ್ರೀಕಂಠೇಗೌಡರಿಗೆ ಟಿಕೆಟ್ ಕೊಟ್ಟುಬಿಟ್ಟರು.

ಇನ್ನು ಶಾಸಕ ಚಲುವರಾಯಸ್ವಾಮಿ ದೇವೇ
ಹಾಗೂ ಕುಮಾರಸ್ವಾಮಿ ವಿರುದ್ಧ ಬಂಡಾಯ ಸಾ
ಬಹಿರಂಗವಾಗಿಯೇ ಶ್ರೀಕಂಠೇಗೌಡರಿಗೆ
ಮತಹಾಕದಂತೆ ಕರೆ ನೀಡಿದ್ದಾರೆ. "ಕಳೆದ 10
ವರ್ಷಗಳಿಂದ ಶ್ರೀಕಂಠೇಗೌಡ ಪಕ್ಷ ವಿರೋಧಿ
ಚಟುವಟಿಕೆ ನಡೆಸಿಕೊಂಡೇ ಬಂದಿದ್ದಾನೆ.
ದೇವೇಗೌಡರು ಯಾವ ಒತ್ತಡಕ್ಕೆ ಮಣಿದು ಅ
ಟಿಕೆಟ್ ಕೊಟ್ಟರೋ ಗೊತ್ತಿಲ್ಲ. ನನ್ನ ಮೇಲೆ
ಯಾವುದೇ ಕ್ರಮಕೈಗೊಂಡರೂ ಕೈಗೊಳ್ಳಲಿ, ಆ
ಕೆ.ಟಿ.ಶ್ರೀಕಂಠೇಗೌಡರಿಗೆ ಮತ ಹಾಕಬಾರದು"
ಎಂದು ತನ್ನ ಬೆಂಬಲಿಗರಿಗೆ ಕರೆನೀಡಿದ್ದು ಮಂ
ಜಿಲ್ಲೆಯಲ್ಲಿ ದೊಡ್ಡ ಮಟ್ಟದ ಪೆಟ್ಟೇ ಬೀಳಬಹು
ಹಾಗೆಯೇ ಚಲುವರಾಯಸ್ವಾಮಿ ಜತೆ
ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು, ಮಾ
ಶಾಸಕರಾದ ಎಂ.ಶ್ರೀನಿವಾಸ, ಬಿ.ರಾಮಕೃಷ್ಣ ಅ



ಬಂಧ ಹೊಂದಿದ್ದು ಇವರೆಲ್ಲ ಒಳಗೊಳಗೆ ೊಟ್ಟರೆ ಶ್ರೀಕಂಠೇಗೌಡ ಗೆಲುವಿಗೆ ಡಿತವಾಗಿಯೂ ತೊಡಕಾಗಲಿದೆ.

ಚಲುವರಾಯಸ್ವಾಮಿ ತನ್ನ ಶಿಷ್ಯ ಸರ್ಕಾರಿ ನೌಕರರ ಘದ ಜಿಲ್ಲಾಧ್ಯಕ್ಷ ನಾಗೇಶನಿಗೆ ಸರ್ಕಾರಿ ನೌಕರಿಯ ುವ ಪದವೀಧರ ಮತದಾರರಿಗೆ ಬಿಜೆಪಿಯ ಶಂಕರ್‌ಗೆ ಮತ ಹಾಕಿಸಲು ಅಪ್ಪಣೆ ಕೊಡಿಸಿದ್ದಾರೆ ್ನಲಾಗಿದೆ. ಅಲ್ಲದೆ ಕಳೆದ ಮಂಗಳವಾರ ಮಂಡ್ಯದ ಕರ ಭವನದಲ್ಲಿ ಸೇರಿದ್ದ ಮತದಾರರಿಗೆ 'ಏಕೆ ಏನು ದು ಈಗ ಪ್ರಶ್ನಿಸಬೇಡಿ ಮುಂದಿನ ದಿನಗಳಲ್ಲಿ ಲ್ಲವನ್ನೂ ತಿಳಿಸುವೆ' ಅಂತೇಳಿದ ಚಲುವರಾಯಸ್ವಾಮಿ ಜೆಪಿ ಅಭ್ಯರ್ಥಿ ಬೆಂಬಲಿಸುವಂತೆ ಮನವಿ ಡಿರುವುದು ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗಲಿದೆ.

ಇಷ್ಟೆಲ್ಲ ಬಂಡಾಯವನ್ನೆಲ್ಲ ಬದಿಗೊತ್ತಿರುವ ವೇಗೌಡ ಮತ್ತು ಕುಮಾರಸ್ವಾಮಿ ಮಂಡ್ಯ, ಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ುಸಿನ ಪ್ರಚಾರ ನಡೆಸಿದ್ದಾರೆ. ಜಾತಿ ಅಜೆಂಡಾದ ೀಲೆ ಹೆಚ್ಚು ಕಣ್ಣಿಟ್ಟಿರುವ ಅಪ್ಪ-ಮಗ ಆದಷ್ಟು ಕ್ಕಲಿಗರ ಮತಗಳನ್ನು ಸೆಳೆಯಲು ಕಾರ್ಯತಂತ್ರ ೂಪಿಸಿದ್ದಾರೆ. ಮೈಸೂರಿನ ಶಾಸಕರಾದ ಟಿ.ದೇವೇಗೌಡ, ಸಾ.ರಾ. ಮಹೇಶ, ಚಿಕ್ಕಮಾದು, ದೇಶ ನಾಗರಾಜು ಸೇರಿದಂತೆ ಹಲವು ಜೆಡಿಎಸ್ ಯಕರು ಶ್ರೀಕಂಠೇಗೌಡರ ಗೆಲುವಿಗೆ ಶಕ್ತಿಮೀರಿ ಯತ್ನಿಸುತ್ತಿದ್ದಾರೆ.

ಶ್ರೀಕಂಠೇಗೌಡರು ಹಾಸನದಲ್ಲಿ ಎಚ್.ಡಿ.ರೇವಣ್ಣ ಂಡ್ಯದಲ್ಲಿ ಡಿ.ಸಿ.ತಮ್ಮಣ್ಣರ ಬಲವನ್ನು ಟ್ಟಿಕೊಂಡಿದ್ದಾರೆ. ವಿಧಾನಪರಿಷತ್ ಉಪಸಭಾಪತಿ ರಿತಿಬ್ಬೇಗೌಡ ಮೂಲಕ ಉಪನ್ಯಾಸಕರು, ಶಿಕ್ಷಕರ ತಗಳನ್ನು ಸೆಳೆಯುವಲ್ಲಿ ಶ್ರೀಕಂಠೇಗೌಡರು ಶಸ್ವಿಯಾದರೆ ಗೆಲುವಿನ ದಡ ತಲುಪಬಹುದು. ಳೆದ ಬಾರಿ ಅಲ್ಪಮತಗಳ ಅಂತರದಿಂದ ಸೋತಿದ್ದು ನುಕಂಪ ಕೆಲಸ ಮಾಡಿದರೆ ಶ್ರೀಕಂಠೇಗೌಡರಿಗೆ ಮತ್ತೊಂದು ಛಾನ್ಸ್ ಗ್ಯಾರಂಟಿ.

ಗೆಲುವಿಗಾಗಿ ಬಿಜೆಪಿ ಕಸರತ್ತು

ದಕ್ಷಿಣ ಪದವೀಧರ ಕ್ಷೇತ್ರ ಬಿಜೆಪಿಯ ದ್ರಕೋಟೆಯೆಂದೇ ಹೆಸರಾಗಿದೆ. ಹಾಲಿ ಸದಸ್ಯ ೋ.ಮಧುಸೂದನ್‌ಗೆ ಮತ್ತೊಂದು ಅವಕಾಶ ೀಡುವ ಬದಲು ಬಿಜೆಪಿ ಮೈಲ್ಯಾಕ್ ಮಾಜಿ ಅಧ್ಯಕ್ಷ, ್ರಾಹ್ಮಣ ಸಮುದಾಯದ ಮೈ.ವಿ.ರವಿಶಂಕರ್‌ಗೆ ಿಕೆಟ್ ನೀಡಿದೆ. ಈ ಬಾರಿಯೂ ಕ್ಷೇತ್ರವನ್ನು ಬಿಜೆಪಿ ೆಕ್ಕೆಗೆ ತೆಗೆದುಕೊಂಡು ರಾಜ್ಯಾಧ್ಯಕ್ಷ ಯಡ್ಡಿಗೆ ಗಿಫ್ಟ್ ೀಡಲು ಬಿಜೆಪಿ ನಾಯಕರು ಶಕ್ತಿಮೀರಿ ್ರಯತ್ನಿಸುತ್ತಿದ್ದಾರೆ.

ರವಿಶಂಕರ್‌ನನ್ನು ಗೆಲ್ಲಿಸಿಕೊಂಡು ಿದ್ದರಾಮಯ್ಯನವರಿಗೆ ಮುಖಭಂಗ ಮಾಡಲು ಯಡ್ಡಿ ುರುಸಿನಿಂದ ಓಡಾಡುತ್ತಿದ್ದಾನೆ. ಯಡ್ಡಿ ಕಾರಣಕ್ಕೆ ಮಂಡ್ಯ, ಮೈಸೂರು, ಚಾಮರಾಜನಗರದ ಲಿಂಗಾಯತ ಮತಗಳು ಸಾಲಿಡ್ಡಾಗಿ ಬಿಜೆಪಿ ಬುಟ್ಟಿಗೆ ಬೀಳಲಿವೆ. ಲಿಂಗಾಯತ ಮಠಾಧೀಶರು ಕೂಡ ಯಡ್ಡಿಯ ಆಣತಿಗೆ ಬೆಂಬಲವಾಗಿ ರವಿಶಂಕರ್‌ಗೆ ಮತ ಹಾಕಿಸಲು ನಿಂತಿದ್ದಾರೆ. ನ್ನು ಸಾಂಪ್ರದಾಯಿಕ ಬ್ರಾಹ್ಮಣ ಮತಗಳಂತೂ ಬಿಜೆಪಿ ಜೋಳಿಗೆ ಸೇರಿಕೊಳ್ಳಲಿವೆ. ಕೇಂದ್ರ ಸಚಿವ ಸದಾನಂದಗೌಡ, ಸಂಸದೆ ಶೋಭಾ ಕರಂದ್ಲಾಜೆ, ಮಾಜಿ ಸಚಿವರಾದ ರಾಮದಾಸ್, ಸಿ.ಟಿ.ರವಿ, ವಿಜಯಶಂಕರ್ ಸೇರಿದಂತೆ ಬಿಜೆಪಿಯ ಹಲವರು ಬಿರುಸಿನ ಪ್ರಚಾರ ನಡೆಸಿದ್ದಾರೆ. ಒಕ್ಕಲಿಗ ಮತಗಳನ್ನು ಸೆಳೆಯುವ ಸಲುವಾಗಿ ಸದಾನಂದಗೌಡ, ಶೋಭಾ ಕರಂದ್ಲಾಜೆ, ಸಿ.ಟಿ.ರವಿಯನ್ನು ಮಂಡ್ಯ, ಹಾಸನಕ್ಕೆ ನುಗ್ಗಿಸಲಾಗಿದೆ.

ದೇವು-ಕುಮ್ಮಿ ವಿರುದ್ಧ ಬಂಡಾಯವೆದ್ದಿರುವ ಚಲುವರಾಯಸ್ವಾಮಿ ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸಲೇಬೇಕೆಂದು ಪಣತೊಟ್ಟಿರುವುದರಿಂದ ಹಿಂಬಾಲಕರಿಗೆ ಬಿಜೆಪಿಗೆ ಮತ ಹಾಕುವಂತೆ ಕರೆ ನೀಡಿದ್ದಾರೆ. ಇದು ಬಿಜೆಪಿಗೆ ಪ್ಲಸ್ ಪಾಯಿಂಟ್. ಕಾಂಗ್ರೆಸ್‌ನಲ್ಲಿದ್ದ ಯಮದೂರು ಸಿದ್ದರಾಜು ಹಾಗೂ ಜೆಡಿಎಸ್‌ನ ವಿ.ಕೆ.ಜಗದೀಶ್ ಇಬ್ಬರೂ ಟಿಕೆಟ್ ಸಿಗದ ಕಾರಣಕ್ಕೆ ಬಿಜೆಪಿಗೆ ಜಂಪ್ ಆಗಿರೋದು ಕಮಲ ಪಾಳಯದ ಗೆಲುವಿನ ವಿಶ್ವಾಸ ಹೆಚ್ಚಿಸಿದೆ. ಕಳೆದ ಆರು ತಿಂಗಳ ಹಿಂದೆಯೇ ಬಿಜೆಪಿ ರವಿಶಂಕರ ಹೆಸರನ್ನು ಅಂತಿಮಗೊಳಿಸಿತ್ತು. ಆಗಿನಿಂದಲೇ ನಾಲ್ಕು ಜಿಲ್ಲೆಗಳಲ್ಲಿ 2 ಸುತ್ತಿನ ಪ್ರಚಾರ ಮುಗಿಸಿದ್ದಾರೆ. ಟಿಕೆಟ್ ಸಿಗದ ಕಾರಣಕ್ಕೆ ಮುನಿಸಿಕೊಂಡಿದ್ದ ಗೋ.ಮಧುಸೂದನ್ ಕೂಡಾ ಯಡ್ಡಿ ರಾಜ್ಯಾಧ್ಯಕ್ಷನಾದ ನಂತರ ಬಂಡಾಯದ ಬಾವುಟ ಮಡಚಿಟ್ಟುಕೊಂಡು ಪ್ರಚಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ಇದು ಎಷ್ಟರಮಟ್ಟಿಗೆ ಪ್ರಾಮಾಣಿಕ ಎಂಬುದು ಮಾತ್ರ ಗೊತ್ತಿಲ್ಲ. ಹಾಗೆಯೇ ಚಾಮರಾಜನಗರದ ಪ್ರಭಾವಿ ಲಿಂಗಾಯತ ಮುಖಂಡ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಮತ್ತೆ ತನ್ನ ಪೊಲಿಟಿಕಲ್ ಗುರು ಯಡಿಯೂರಪ್ಪನ ಸಮ್ಮುಖದಲ್ಲಿ ಬಿಜೆಪಿಗೆ ವಾಪಾಸಾಗಿರುವುದು ಕೂಡಾ ಕೌಂಟ್ ಆಗಲಿದೆ.

ಮನಿ, ಮದ್ಯ, ಬಾಡೂಟ ಮತ್ತು ಮತ ಪ್ರಾಶಸ್ತ್ಯ

ಗೆಲ್ಲಲು ಹರಸಾಹಸ ನಡೆಸುತ್ತಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತದಾರರನ್ನು ಬುಟ್ಟಿಗೆ ಹಾಕಿಕೊಳ್ಳಲು ಯಥಾ ಹಾದಿಯನ್ನೇ ತುಳಿದಿವೆ. ಮೂರು ಪಕ್ಷಗಳಿಂದ ಹಲವೆಡೆ ಭರ್ಜರಿ ಮದ್ಯ ಬಾಡೂಟದ ಸಮಾರಾಧನೆ ನಡೆದಿದೆ. ಅಲ್ಲದೆ ಹಲವೆಡೆ ಹಣವನ್ನೂ ಹಂಚಲಾಗಿದೆ. ಗೆಲ್ಲುವುದನ್ನೇ ಗುರಿಯಾಗಿಸಿಕೊಂಡಿರುವ ಅಭ್ಯರ್ಥಿಗಳು ಅದಕ್ಕಾಗಿ ಕೋಟ್ಯಾಂತರ ಹಣವನ್ನು ನೀರಿನಂತೆ ಹರಿಸುತ್ತಿದ್ದಾರೆ. ಇವರ ಅಬ್ಬರದ ನಡುವೆ ಪಕ್ಷೇತರ ಅಭ್ಯರ್ಥಿಗಳ ಹೆಸರೇ ಸ್ಪರ್ಧೆಯಲ್ಲಿ ಮಂಕಾಗಿಹೋಗಿವೆ.

ಪದವೀಧರ ಕ್ಷೇತ್ರದ ಚುನಾವಣೆ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ನಡೆಯುವ ಹಿನ್ನೆಲೆಯಲ್ಲಿ ಮೂರು ಪಕ್ಷಗಳ ಅಭ್ಯರ್ಥಿಗಳು ತಮ್ಮದೇ ಆದ ರಾಜಕೀಯ ಲೆಕ್ಕಾಚಾರದ ಮೇಲೆ ಮತಯಾಚಿಸುತ್ತಿದ್ದಾರೆ. ಅತೀ ಹೆಚ್ಚು ಅಭ್ಯರ್ಥಿಗಳು ಸ್ಪರ್ಧಿಸಿರುವುದರಿಂದ ಮೊದಲ ಸುತ್ತಿನಲ್ಲೇ ಆಯ್ಕೆಯಾಗಲು ಅಗತ್ಯವಿರುವ ಮತಗಳು ಬರುವ ಸಾಧ್ಯತೆ ಬಹಳ ಕಡಿಮೆ. ಈ ಹಿನ್ನೆಲೆಯಲ್ಲಿ ಮೂರು ಪಕ್ಷಗಳ ಅಭ್ಯರ್ಥಿಗಳು ಎರಡನೇ ಪ್ರಾಶಸ್ತ್ಯದ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ.

ಅತ್ಯಂತ ಕಡಿಮೆ ಮತ ಪಡೆದ ಅಭ್ಯರ್ಥಿಯಿಂದ ಎಲಿಮಿನೇಷನ್ ಪ್ರಕ್ರಿಯೆ ಆರಂಭವಾಗಲಿದ್ದು, ಆ ಅಭ್ಯರ್ಥಿಗೆ ಬೀಳುವ ಎರಡನೇ ಪ್ರಾಶಸ್ತ್ಯದ ಮತಗಳು ಉಳಿದಿರುವ ಅಭ್ಯರ್ಥಿಗಳ ಮತಗಳ ಮೌಲ್ಯವನ್ನು ಹೆಚ್ಚಿಸಲಿವೆ. ಇದು ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ಹಿಂದೆ ಬಿದ್ದಿರುವ ಅಭ್ಯರ್ಥಿಯ ಸ್ಥಾನವನ್ನು ಅದಲು-ಬದಲು ಮಾಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಯಾರು ಗೆಲ್ಲಲಿದ್ದಾರೆ ಎಂಬುದು ಕುತೂಹಲ ಮೂಡಿಸಿದೆ.

■ ವರದಿಗಾರ

ಸೀಟೇ ಸಿದ್ಧಾಂತ!

ಚುನಾವಣೆಗಳು ಬಂದರೆ ಸಾಕು, ಇಲೀನೂ ಹುಲಿ ಆಗೋಯ್ತದೆ. ಅದ್ಯಾವುದೋ ಮುದುಕಿ ನನ್ನ ಕೋಳಿ ಕೂಗದೆ ಇದ್ರೆ ಬೆಳಕು ಹರಿಯೋದೆ ಇಲ್ಲಾ ಅನ್ನೋ ಅಮಲಿನಲ್ಲಿದ್ದಳಂತಲ್ಲ ಹಂಗೆ ಎಂಟತ್ತು ಓಟು ಇರೋರು ಹಾರಾಡ್ತಾರೆ. ಹನಿಗೂಡಿದರೆ ಹಳ್ಳ, ಓಟಿಗೆ ಓಟು ಸೇರಿದ್ರೆ ಸೀಟು ಅಲ್ವಾ. ಅದಕ್ಕೇ ಹಿಂಗೆ. ಅಲ್ಲಾರಿ ಇಲ್ಲಿ ಬೀಳೋರ್‍ಗೆ ಕೌಚಾಕೋಕೆ ಏನುವ್ಯೆನ ಮಾಡಬೇಕೋ ಅದ ಮಾಡಬೇಕಾಯ್ತದೆ. ಎದುರು ಅಭ್ಯರ್ಥಿಗಳೇನೂ ಸುಮ್ಮನೆ ಈ ತಮಾಷೆ ನೋಡ್ತಾ ಕುಂತಿರೋಲ್ಲ. ಹಂಗೆ ಹಾರಾಡೋ ಆಸಮ್ಮಿಗಳನ್ನು ತಮ್ಮ ಕಡೆಗೆ ಹೆಂಗಾದ ಎಳ್ಕೋಬೇಕು ಅಂತ ಕಾಳು ಎಸೀತಾನೆ ಇರ್ತಾರೆ. ಅವರೊಬ್ಬರು ಬಂದರೆ ಅವರ ಹಿಂದೆ ಮತದಾರರ ಹಿಂಡೇ ಬರ್ತದೆ ಅಂತ ಅಲ್ಲ, ಚುನಾವಣೆ ಸಮಯದಲ್ಲಿ ಆ ಪಾರ್ಟಿಯೋರು ಬಂದವ್ರೆ, ಈ ಪಾರ್ಟಿಯೋರು ನಮ್ ಸೇರ್‍ಕಂಡವ್ರೆ ಅಂದ್ರೆ ಅದೇ ಒಂದು ತರಹ ಗ್ರೇಡು ಅಂತ ಹಂಗೆಲ್ಲ ಮಾಡಿ ಕುಂತ್ಕೊಂತಾರೆ. ಅವ್ರುಗ್ಗೆ ಇಲ್ಲಿ ಮಣೆ ಹಾಕವ್ರೆ ಅಂತ ತಿಳೀತಿದ್ದಂಗೆ ಇಲ್ಲಿಂದ ಬ್ಯಾರೆ ಕಡೆಗೆ ಹಾರೋರು ಇರ್ತಾರೆ ಅನ್ನಿ. ಇದೆಲ್ಲ ಎಲ್ಲಾ ಚುನಾವಣೆಗಳಲ್ಲೂ ಎಲ್ಲಾ ಪಕ್ಷಗಳಲ್ಲೂ ನಡೆಯೋದೇಯ.

ಇದನ್ನೆಲ್ಲ ಯಾಕೆ ಹೇಳ್ತಿದೀನಿ ಅಂದ್ರೆ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ಬಂತಲ್ಲ, ಎಲ್ಲ ಪಕ್ಷಗಳ ಮುಖಂಡರೂ ನಮ್ಮೂರಿಗೆ ದಾಳಿ ಇಟ್ಟರು. ಜೈಲು ಮುಖ್ಯಮಂತ್ರಿ ಯಾನೆ ಮುಖ್ಯಮಂತ್ರಿಯಾಗಿದ್ದಾಗ ಭ್ರಷ್ಟಾಚಾರದ ಆರೋಪದ ಮೇಲೆ ಜೈಲು ಸೇರಿದ್ದವರೂ ಬಂದಿದ್ದರು. ರಾಜ್ಯ ಸರ್ಕಾರ ಭ್ರಷ್ಟಾಚಾರದ ವಿರುದ್ಧ ಏನು ಪಸಂದಾಗಿ ಮಾತನಾಡಿದ್ರೂ ಅಂತೀರಿ. ಕೇಳೋಕೆ ಎರಡು ಕಿವೀನೂ ಸಾಲ್ದು. ಅವರ ಮಾತ ಕೇಳ್ತಾ ಕೇಳ್ತಾ ಸತ್ಯಹರಿಶ್ಚಂದ್ರನ ವಾರಸುದಾರರು ಇವರೇಯ ಅನ್ನಿಸಿತು, ಅವತ್ತೇನಾಯ್ತು ಅಂತೀರಿ. ಯಾವುಯಾವುದೋ ಪಕ್ಷದ ಧುರೀಣರು(!) ಇವರ ಪಕ್ಷಕ್ಕೆ ಸೇರ್‍ಕಂಡ್ರು! ಓಹೋ ಭಾಷಣದ ಪ್ರಭಾವ ಹಿಂಗೆ ಮಾಡಿಸಿರಬೇಕು ಅನ್ನಸ್ತು. ಹಿಂಗೆ ಆ ಪಕ್ಷದಿಂದ ಈ ಪಕ್ಷಕ್ಕೆ ಹಾರಿದವರಲ್ಲೊಬ್ಬರನ್ನ ಹಿಡಿದು 'ಯಾಕ್ರೀ



ಹಿಂಗ್ಮಾಡಿದ್ರಿ' ಅಂತ ಕೇಳ್ದೆ. ಅದ್ಕೆ ಅವು 'ಯಾಕ್ ಅಂದ್ರೆ ಆ ಪಕ್ಷದೋರು ಟಿಕೀಟು ಕೊಡ್ಲಿಲ್ಲ ಅದ್ಕೆ. ಈ ಪಕ್ಷ ಸೇರ್‍ದೆ' ಅಂದ್ರು!

ಅಂದ್ರೆ ಏನಾಯ್ತು ಟಿಕೇಟು ಕೊಟ್ಟರೆ ಒಂದು ಪಕ್ಷಕ್ಕೆ ಕೊಡದಿದ್ದರೆ ಇನ್ನೊಂದು ಪಕ್ಷ!

ಅರೆ ತತ್ವ ಸಿದ್ಧಾಂತ ಯಾವುದೂ ಇಲ್ಲ ಅಂದ್ರೆ ಯಾರು ಇಲ್ಲ ಅಂದೋರು. ಅವೂ ಇವೆಯಲ್ಲ?

ಯಾವು ಅವು?

ಸೀಟ ಅವರ ತತ್ವ! ಅದೇ ಅವರ ಸಿದ್ಧಾಂತ!!

****

ಮತ ಮಾರುಕಟ್ಟೆ

ಇದೇನಯ್ಯ ಇದು ಹಿಂಗಾಗಿ ಕುಂತದೆ. ಜಾತ್ಯತೀತ ಜನತಾದಳ ಅನ್ನೊ ಪಕ್ಷದಲ್ಲಿ ಕೆಲವು ಕರಿ ಕುರಿ ಸೇರ್‍ಕಂಡಿದ್ದೊ. ಅಷ್ಟೆ ಇಲ್ಲಿ ಹುಲ್ಲುಗಾವಲು ಕೊಳೆದ್ದು ಹೋಗಿದೆ ಅನ್ನೋದು ಮನದಟ್ಟಾಗಿರಬೇಕು. ಹುಲುಸಾದ ಹುಲ್ಲುಗಾವಲು ಕಡೆ ಹೋಯ್ತೀವಿ ಅಂತ ಕುಂತ್ಕಂಡೊ. ಕುಮಾರಣ್ಣ ಇದ್ರಲ್ಲ ಹಂಗೆಲ್ಲ ಹಿಂಡು ಅಗಚೋಕೆ ಬಿಟ್ಟುಕೊಡ್ತಾರ? 'ಹಂಗೇನಾರ ಅಗಚಿಕೊಂಡೋದ್ರೆ ಬಲಿ ಹಾಕ್ತೀನಿ. ಶಿಸ್ತಿನ ಕ್ರಮ ಕೈಗೊಳ್ತೀನಿ' ಅಂತಾವ ತೊಡೆ ನಡುಗೋ ಹಂಗೆ ಖಡಕ್ಕಾಗಿ ಹೇಳಿದ್ರು. ಪಕ್ಷ ಕಾಯೋ ನ್ಯಾಯಸ್ಥರ ಮಾತೇಯ ಇದು. ಅಪ್ಪನಿಗುಟ್ಟಿದ ಮಾತ್ನೇ ಹೇಳವ್ನೆ ಅಂದ್ಕೊಂಡ್ರು ಜನಾರ ಜನಾ ಎಲ್ಲ. ಆಮೇಲೇನಾಯ್ತು ಅಂತೀರಿ ಇವರ ಕಡಿಂದ ರಾಜ್ಯಸಭೆಗೆ, ವಿಧಾನಪರಿಷತ್ತಿಗೆ ಜನ ನಿಲ್ಸಿದ್ರು. ಅವರ ಗೆಲ್ಲೋಕೆ ಬೇಕಾದಷ್ಟು ಓಟು ಇರ್ಲಿಲ್ಲ, ಅದ್ಕೇನು ಮಾಡಿದ್ರು ಕುಮಾರಣ್ಣೋರು ಅಂದ್ರೆ ಆತ್ಮಸಾಕ್ಷಿ ಹಿಡ್ಕಂಡ್ರು. 'ಕಾಂಗ್ರೆಸ್ನೋರು ಅವರ ಆತ್ಮಸಾಕ್ಷಿಯಂತೆ ಮತ ನೀಡಿ' ಅನ್ನೊ ಕರೇನ ಕೊಟ್ರು. ಅರೆ ಇದು ಯಾವ ಸೀಮೆ ನ್ಯಾಯವಯ್ಯ ಇದು. ಕಾಂಗ್ರೆಸ್ನೋರು ಆತ್ಮಸಾಕ್ಷಿಯಂತೆ ಮತ ನೀಡಬೇಕಂತೆ. ಜೆಡಿಎಸ್ನೋರು ಹಂಗೆ ಮಾಡಿದ್ರೆ ಶಿಸ್ತಿನ ಕ್ರಮ ತಗೋತಾರಂತೆ! ರಾಜಕೀಯ ಮುತ್ಸದ್ದಿ ಕುಮಾರಣ್ಣೋರು. ಮುತ್ಸದ್ದಿಗಳ ಮಾತೆಲ್ಲ ಹಿಂಗೆಯೋ ಏನೋ!

ರಾಜಕೀಯದಲ್ಲಿ ಆತ್ಮಸಾಕ್ಷಿ ಅನ್ನೋದು ಒಂದು ಇದೆ

ಅಣಕ



• ಎಚ್.ಎಲ್.ಕೇಶವಮೂರ್ತಿ

ಅನ್ನೋದು ಮರತೇ ಹೋಗಿತ್ತು, ಮೊದಲು ಇದನ್ನ ನೆನಪು ಮಾಡ್ಕೋರು ಇಂದಿರಾ ಗಾಂಧಿ ಅವರು. ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಸಂಜೀವ ರೆಡ್ಡಿಯವರ ವಿರುದ್ಧ ಇಂದಿರಾ ಅವರು ವಿ.ವಿ. ಗಿರಿಯವರನ್ನ ನಿಲ್ಲಿಸಿದ್ರು. ಆಗ ಅವರು ಕುಮಾರಣ್ಣನ ತರಹವೇ 'ಕಾಂಗ್ರೆಸ್ಸಿಗರು ಆತ್ಮಸಾಕ್ಷಿಗೆ ಅನುಗುಣವಾಗಿ ಮತ ನೀಡಬೇಕು' ಅನ್ನೋ ಕರೆ ನೀಡಿದ್ದರು. ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡರು.

ಕಾಲ ಬದಲಾಗಿದೆ. ಆಗಿನ ಆತ್ಮಸಾಕ್ಷಿ ಮೌಲ್ಯವೇ ಬೇರೆ. ಈಗಿನದ್ದೇ ಬೇರೆ. ಅದರ ಮೌಲ್ಯ ಕಂಡಾಬಟ್ಟೆ ಏರೋಗದೆ. ಈಗ ಅದರ ಮಾರುಕಟ್ಟೆ ಬೆಲೆ ಐದರಿಂದ ಹತ್ತು ಕೋಟಿಯವರೆಗೂ ಹರಿದಾಡುತ್ತಿದೆ. ಪಾಪ ಶಾಸಕರೂ ಹಂಗೇ ಏನೂ ಗೆದ್ದು ಬಂದಿರೋಲ್ಲ, ಹಣ ಚೆಲ್ಲೇ ಗೆದ್ದು ಬಂದಿರೋದು. ಅವಕಾಶ ಸಿಕ್ಕಿದಾಗ ಗೋರಿಕೊಳ್ಳಬೇಕು ಅನ್ನೊ ಆಸೆ ಎಂತಹವರಿಗಾದರೂ ಇರೋದೇಯ. ಎಂಎಲ್‌ಎ ಚುನಾವಣೆ ವೆಚ್ಚ ಏರಿರುವುದರಿಂದ ಇಲ್ಲಿನ ಓಟಿಗೂ ಬೆಲೆ ಜಾಸ್ತಿಯಾಗಿರೋದು ಸಹಜವೇ ಅನ್ನಿಸುತ್ತೆ, ಹಿಂದೆಲ್ಲ ಅಲ್ಲಿ ಚುನಾವಣೆ ವೆಚ್ಚ ಕಡಿಮೆ ಇರುತ್ತಿತ್ತು, ಹಿಂಗಾಗಿ ಇದೂ ಕಡಿಮೆ ಇರುತ್ತಿತ್ತು, ಆವಾಗೆಲ್ಲ ಶಾಸಕರಿಗೇ ಅಧಿಕಾರ ನೀಡುತ್ತಿದ್ದರು. ಅವರೋ ಸಾವಿರದ ಲೆಕ್ಕದಲ್ಲೋ ಲಕ್ಷದ ಲೆಕ್ಕದಲ್ಲೋ ಅವರ ಯೋಗ್ಯತೆ ಅನುಸಾರ ಹಣ ಪಡೆದು ಓಟು ಹಾಕುತ್ತಿದ್ದರು. ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಹೆಚ್ಚಾಯಿತಲ್ಲ, ಚುನಾವಣಾ ನೀತಿನೇ ಬದಲಾಯ್ತು. ಅವರಾಗಿ ಅವರೇ ಬಂದರೋ ಅಥವಾ ಇವರೇ ಎಳ್ಕೊಂಡ್ಕೋದ್ರೋ ಗೊತ್ತಿಲ್ಲ... ದುಡ್ಡಿನ ಕುಳಗಳು ಮೊಕ ಮಾಡ್ಡೊ. ಲಂಚ ಅನ್ನೋದು ಕೇಂದ್ರೀಕೃತ ಆಯಿತು. ಪಕ್ಷದ ಧುರೀಣರು 'ಇಂತೋರ್‍ಗೆ ವೋಟಾಕಿ' ಅಂದ್ರೆ ಅವ್ರುಗ್ಗೆ ಹಾಕುವಂಗಾಯ್ತು, ಆಗ್ಲೂ ಪಕ್ಷೇತರರಿಗೆ, ಊರಿಗೆಲ್ಲ ಒಬ್ಬಳೇ ಪದ್ಮಾವತಿ ಅನ್ನೋಹಂಗೆ ಪಕ್ಷಕ್ಕೆಲ್ಲ ಒಬ್ಬನೇ ಶಾಸಕನಾಗಿರೋ ಮಹಾನುಭಾವರಿಗೆ ಯಾವ ಅಡೆತಡೆಯೂ ಇಲ್ಲದೆ ಹಣ ಬಂದು ಸೇರುತ್ತಿತ್ತು ಅನ್ನಿ. ಇದೆಲ್ಲ ತಮ್ಮ ಕಣ್ಣಮುಂದೆಯೇ ನಡೀತಿರಬೇಕಾದರೆ ಹಲವು ಶಾಸಕರನ್ನು ಹೊಂದಿದ್ದ ಪಕ್ಷಗಳ ಶಾಸಕರಿಗೆ ಸಹಜವಾಗಿಯೇ ಹೊಟ್ಟೆಗೆ ಬೆಂಕಿಬಿದ್ದಂತೆ ಆಗುತ್ತಿತ್ತು. ಇಂತಹ ಸುವರ್ಣಾವಕಾಶದಿಂದ ವಂಚಿತರನ್ನಾಗಿ ಮಾಡಿದ ಪಕ್ಷದ ಧುರೀಣರಿಗೆ ಹಿಡಿ ಶಾಪ ಹಾಕುತ್ತಿದ್ದರು. ಆದರೆ ಈಗೇನಾಗಿದೆ ಪಕ್ಷದ ಆದೇಶವನ್ನು ಉಲ್ಲಂಘಿಸಿ ಮತ ಚಲಾಯಿಸಿದರೂ ಪಕ್ಷಾಂತರ ಕಾಯ್ದೆ ಅನ್ವಯ ಆಗೋಲ್ಲ ಅನ್ನೋದು ಬಹಿರಂಗವಾಗಿದೆ. ಹಿಂಗಾಗಿ ಮತಮಾರುಕಟ್ಟೆ ರೇಟು ದಿನೇದಿನೇ ಏರುತ್ತಿದೆ!

ಮಾಮೂಲಿನಂತೆ ಇದೆಲ್ಲ ನಡೀತಿದ್ರೂ ಕುಟುಕು ಕಾರ್ಯಾಚರಣೆ ಅಂತ ಕರ್ನಾಟಕದ ಶಾಸಕರಿಗೆ ಮಸಿ ಬಳಿಯುವ ಕೆಲಸಾನ ಕೆಲವು ಇಂಗ್ಲಿಷ್ ಚಾನೆಲ್‌ಗಳು ಮಾಡವೆ. ಅವು ಚುನಾವಣೇನೆ ರದ್ದು ಮಾಡಿ ಅಂತ ಕುಂತವೆ. ಕೇಂದ್ರ ಚುನಾವಣಾ ಆಯೋಗ 'ಹಂಗೆಲ್ಲ ಮಾಡಕ್ಕೆ ಬರೋದಿಲ್ಲ, ಪ್ರೂಫ್ ಕೊಡಿ' ಅಂತ ಅದೆ. ಅದ ಕೊಡಬೇಕು ಅಂತಲೇ ಏನೋ ಅದೆಷ್ಟೋ ಶಾಸಕರು ಬೊಂಬಾಯಿಗೆ ಹೋಗವ್ರಂತೆ. ಅದೇ ಪ್ರೂಫು ಅಂತವೆ ಚಾನೆಲುಗಳು. ಅರೆ ಏನೋ ಕೆಲಸದ ಮೇಲೆ ಶಾಸಕರು ಬೊಂಬಾಯಿಗೆ ಹೋಗಿರಬಹುದು. ಅದೆಂಗೆ ಪ್ರೂಫ್ ಆಯ್ತದೆ ಅಂತಾರೆ ಕೆಲವರು. ಈ ನಡುವೆ ದುಡ್ಡು ಕೊಟ್ಟು ಪಕ್ಷದ ಟಿಕೆಟ್ಟು ಪಡೆದಿದ್ರಲ್ಲ ಅವರಿಗೆ ಜೀವ ಪುಕಪುಕ ಅಂತಿದೆಯಂತೆ. ಅನ್ನಬೇಕಾದದ್ದೆ. ಕೋಟ್ಯಾಂತರ ರೂಪಾಯಿ ವ್ಯವಹಾರ ಚುನಾವಣೆ ರದ್ದು ಮಾಡಿದ್ರೆ ಕೊಟ್ಟಿರೋ ದುಡ್ಡ ವಾಪಸ್ಸು ಮಾಡಿ ಅಂತ ಕೇಳೋ ಹಂಗಿಲ್ಲ, ಕೇಳಿದ್ರೂ ಕೊಡ್ತಾರೆ ಅಂತ ಖಾತರಿ ಇಲ್ಲ. ದುಡ್ಡು ಇಸಕೊಂಡಿರೋರ್‍ದೂ ಪಾಪ ತಾಪತ್ರಯಾನೆ. ಚುನಾವಣೆ ರದ್ದಾಗದಲ್ಲ, ದುಡ್ಡು ಹಿಂತಿರುಗಿಸಿ ಅಂದ್ರೆ ಅಷ್ಟೊಂದು ರೂಪಾಯಿಗಳನ್ನು ಹಿಂತಿರುಗಿಸೋದು ಅಂದ್ರೆ ಎಂತಹವರ ಮನಸ್ಸಿಗಾದರೂ ನೋವಾಗೋದೆಯ ಅಲ್ವಾ....

'ಓಟಿಗಾಗಿ ನೋಟು ಪ್ರಜಾಪ್ರಭುತ್ವಕ್ಕೆ ಆದ ಅವಮಾನ' ಅಂತ ಎಲ್ಲಾ ಪಕ್ಷಗಳೂ ಸಾರುತ್ತಿವೆ. ಇದು ನಿಲ್ಲಬೇಕು ಅಂತಾನೂ ಹೇಳ್ತವೆ. ಅದೆ ಕಾರ್ಯರೂಪಕ್ಕೆ ಮಾತ್ರ ತರಲ್ಲ!

ಇದೇ ಮಾರುಕಟ್ಟೆಯ ಸಮಾಧಾನ! ■

ಬಿಜೆಪಿ ಬಲೆಗೆ ಬಿದ್ದಳೆ ಅನುಪಮಾ?



• ಪಿಟಿ ಪರಮೇಶ್ವರ ನಾಯ್ಕರೇ ನಾನು ರಾಜೀನಾಮೆ ನೀಡಿದ್ದೇನೆ. ನೀವು ಯಾವಾಗ ರಾಜೀನಾಮೆ ನೀಡುತ್ತೀರಾ?

CD ಬೇಕೇ, Audio ಬೇಕೆ; ಪರಮೇಶಿ ಪ್ರೇಮ ಪ್ರಸಂಗ ಭಾಗ 1

ವಾಷಿಂಗ್ Powder Nirma Part 2

ಪರಮೇಶ್ವರ್ ನಾಯ್ಕರು ರಾಜೀನಾಮೆ ನೀಡುವುದು ತಡವಾಗಿ ಜನರು ದಂಗೆ ಏಳುವ ಸಂಭವ ಇರುವುದರಿಂದ ಕಾನೂನು, ಸುವ್ಯವಸ್ಥೆ ಕಾಪಾಡಲು ಪ್ರತಿಬಂಧಕವಾಗಿ ನಾಯ್ಕರನ್ನು ಬಂಧಿಸಲಾಗಿದೆ. My sympathies to Shashidhar Venugopal arrest. ಬೃಹನ್ನಳೆಯರು

ಹೀಗೆ ಪ್ರಾರಂಭವಾಗುವ ಕೂಡ್ಲಿಗಿ ಡಿವೈಎಸ್‌ಪಿ ಅನುಪಮಾ ಮೇಡಂ ಫೇಸ್‌ಬುಕ್ ಸ್ಟೇಟಸ್‌ಗಳು ರಾಜ್ಯದ ಎಲ್ಲಾ ಪತ್ರಿಕೆ-ಟೀವಿಗಳ ತುಂಬ ಹರಿದಾಡಿದ್ದೇ ಹರಿದಾಡಿದ್ದು. ಇದೀ ಮಂಗಳವಾರ ಡಿವೈಎಸ್‌ಪಿ ಅನುಪಮಾ ಮತ್ತು ಕಾರ್ಮಿಕ ಸಚಿವ ಪರಮೇಶ್ವರ್ ನಾಯಕರ ಘರ್ಷಣೆಯ ಧಿನವಾಗಿ ಮಾರ್ಪಟ್ಟಿತ್ತು. ಅತ್ತ ರೆಸಾರ್ಟೊಂದರಿಂದ ಮಂತ್ರಿ ಪರಮೇಶ್ವರ್ ನಾಯಕ್ ಟೀವಿಗಳ ಕಣ್ ತಪ್ಪಿಸಲು ಹಿಂಬಾಗಿಲಿನಿಂದ ತಲೆಮರೆಸಿಕೊಂಡು ಪರಾರಿಯಾದ ಸುದ್ದಿಯೂ ಪ್ರಸಾರವಾಗಿತ್ತು. ಸಂಜೆ ಹೊತ್ತಿಗೆ ರಾಷ್ಟ್ರೀಯ ಚಾನಲ್ಲುಗಳು ಕರ್ನಾಟಕದ ಮಂತ್ರಿಯ ಸೆಕ್ಸ್ ಸೀಡಿಯನ್ನು ಬಿಡುಗಡೆ ಮಾಡುತ್ತೇನೆಂದು ಮಹಿಳಾ ಪೊಲೀಸ್ ಅಧಿಕಾರಿಣಿ ತನ್ನ ಫೇಸ್‌ಬುಕ್‌ನಲ್ಲಿ ಹಾಕಿದ್ದನ್ನೇ ದೇಶವ್ಯಾಪಿ ಸುದ್ದಿಯಾಗಿಸಿಬಿಟ್ಟವು.

ಅನುಪಮಾ ಶೆಣೈ ಕರ್ನಾಟಕದ ಲೇಡಿ ಸಿಂಗಂ! ಅನುಪಮಾ ಶೆಣೈ ಕರ್ನಾಟಕದ ಕಿರಣ್ ಬೇಡಿ! ಅನುಪಮಾ ಶೆಣೈ ಅಭಿನವ ಒನಕೆ ಓಬವ್ವ! ಅನುಪಮಾ ಶೆಣೈ ಜನಸಾಮಾನ್ಯರ ಪಾಲಿನ ಖಾಕಿ ದೇವತೆ!

ಹೀಗೆ ಫೇಸ್‌ಬುಕ್, ವಾಟ್ಸ್‌ಪ್ಪುಗಳಲ್ಲಿ ಹರಿದಾಡುತ್ತಿರುವ ಚೆಡ್ಡಿವೀರರ ಕಮೆಂಟು, ಪ್ರಶಂಸೆ, ಭೋಪರಾಕ್‌ಗಳ ಹಿಂದಿರುವ ಉದ್ದೇಶ, ಹುನ್ನಾರಗಳ ಅಬ್ಬರಕ್ಕೆ ಪಾಪ ಅನುಪಮಾ ಶೆಣೈಯಂಥ ಮುಗ್ಧ ಹೆಣ್ಣುಮಗಳ ತಲೆ ತಿರುಗದೇ ಮತ್ತೇನು?

ಸೆಕ್ಸ್ ಸೀಡಿ?

ಸೀಡಿ ಬೇಕೆ, ಆಡಿಯೋ ಬೇಕೆ ಎಂಬ ಪ್ರಾರಂಭದ ಅನುಪಮಾರ ಫೇಸ್‌ಬುಕ್ ಸ್ಟೇಟಸ್‌ಗಳು ಮಧ್ಯರಾತ್ರಿ ಹೊತ್ತಿಗೆ ನಾಟಿಕೋಳಿ ಸಾರು.... ನಗುವ ಹೆಣ್ಣಿನ ಕಷ್ಟ ತೆನೆ ಹೊತ್ತ ಮಹಿಳೆಗೆ ಅರ್ಥವಾಗಲ್ಲ ಎಂದುಕೊಂಡಿದ್ದೀರಾ ಕುಮಾರಸ್ವಾಮಿ......? ಎಂಬ ಮಾರ್ಮಿಕ ಸಾಲುಗಳ ತನಕ ಬಂದುನಿಂತಿವೆ. No doubt ಅದು ಅನುಪಮಾ ಶೆಣೈಯವರದ್ದೇ ಫೇಸ್‌ಬುಕ್ ಖಾತೆ. ಮಧ್ಯರಾತ್ರಿ ನಂತರ ಪರಮೇಶಿ ಪ್ರೇಮ ಪ್ರಸಂಗದ ಸೆಕ್ಸ್ ಸೀಡಿಯೋ ಆಡಿಯೋವೋ ಫೇಸ್‌ಬುಕ್‌ನಲ್ಲಿ ಬಿಡುಗಡೆಯಾಗುವುದೇ ಆಗಿದ್ದರೆ ಆಗಲಿಲ್ಲ ಏಕೆ? ಕನಿಷ್ಠ ಧ್ವನಿ ಮುದ್ರಿಕೆಯನ್ನಾದರೂ ಹಾಕಬೇಕಿತ್ತಲ್ಲವೇ? ಏನಿದು ವಾಷಿಂಗ್ ಪೌಡರ್ ನಿರ್ಮಾ ಭಾಗ ಎರಡು? ಪರಮೇಶಿ ಪ್ರೇಮ ಪ್ರಸಂಗ ಭಾಗ-ಒಂದು ಎಂದಾದರೆ ಎರಡನೇ ಭಾಗ ಯಾವುದು? ಅಂದರೆ ಮಂತ್ರಿ ಪರಮೇಶ್ವರ್ ನಾಯಕ್‌ರ ಎರಡನೇ ಪ್ರೇಮ ಪ್ರಸಂಗವೂ ಇದೆಯೇ? ಈ ಪೈಕಿ ವಾಷಿಂಗ್ ಪೌಡರ್ ನಿರ್ಮಾ ಭಾಗ ಎರಡು ಅಂದರೇನು? ನಾಟಿ ಕೋಳಿ ಸಾರಿನ ಮರ್ಮವೇನು? ತನ್ನ ಪರ ದನಿಯೆತ್ತಿದ ಜೆಡಿಎಸ್ ನಾಯಕ ಕುಮಾರಸ್ವಾಮಿಯನ್ನೇ ಡಿವೈಎಸ್‌ಪಿ ಅನುಪಮಾ ವೈಯಕ್ತಿಕವಾಗಿ ಹೀಯಾಳಿಸುತ್ತಿರುವುದೇಕೆ?

ಹಾಗೊಮ್ಮೆ ತನ್ನ ಫೇಸ್‌ಬುಕ್ ಖಾತೆಯನ್ನು ಬಳಸಿಕೊಂಡು ಇನ್ನಾರೋ ಇಂಥ ಕುಚೇಷ್ಟೆ ಮಾಡುತ್ತಿದ್ದಾರೆಂದರೆ ಅದರ ಮರುದಿನವಾದರೂ ಅನುಪಮಾ ತಾನು ಇಂಥ ಸ್ಟೇಟಸ್‌ಗಳನ್ನು ಹಾಕಿಲ್ಲ ಎಂದು ಹೇಳಿಕೆ ನೀಡಬಹುದಿತ್ತಲ್ಲವೇ? ಕನಿಷ್ಠ ತನ್ನದೇ ಫೇಸ್‌ಬುಕ್‌ನಲ್ಲೊಂದು ಸ್ಪಷ್ಟನೆಯನ್ನಾದರೂ ಹಾಕಬೇಕಿತ್ತಲ್ಲವೆ? ಇದರರ್ಥ ಅನುಪಮಾ ಶೆಣೈ ತನ್ನೆಲ್ಲಾ ವಿವೇಚನಾ ಪೂರ್ವಕವಾಗೇ ಮೇಲ್ಕಂಡ ಎಲ್ಲಾ ಸ್ಟೇಟಸ್‌ಗಳನ್ನೂ ಹಾಕಿದ್ದಾರೆ. ಅನುಪಮಾ ಯಾರೋ ಪಡ್ಡೆ ಹುಡುಗಿಯಲ್ಲ, ಹುಡುಗಾಟಿಕೆ, ತುಂಟಾಟಕ್ಕೆ ಸಿನಿಮಾ ನಟಿಯೋ ಮಾಡೆಲಿಂಗೋ ಆಗಿದ್ದರೆ ಆ ಮಾತು ಬೇರೆ. ಓರ್ವ ಪೊಲೀಸ್ ಅಧಿಕಾರಿಯಾಗಿ, ವಿದ್ಯಾವಂತೆಯಾಗಿ, ಪ್ರೌಢೆಯಾಗಿ ತಾನೇನು ಮಾಡುತ್ತಿದ್ದೇನೆಂಬ ಪ್ರಜ್ಞೆಯಿಲ್ಲದ ಚೇಷ್ಟೆಗಿಳಿದಿದ್ದಾರೆನ್ನಲು ಸಾಧ್ಯವೇ?

ಕುಮಾರಣ್ಣನೂ.......!

ಸರಿ, ಆಕೆ ಕಾರ್ಯನಿರ್ವಹಿಸುವ ವ್ಯಾಪ್ತಿಗೆ ಪರಮೇಶ್ವರ್ ನಾಯಕ್ ಜಿಲ್ಲಾ ಉಸ್ತುವಾರಿ ಮಂತ್ರಿಯಾದ್ದರಿಂದ ಸಹಜವಾಗೇ ಸರ್ಕಾರಿ ಹಸ್ತಕ್ಷೇಪದ ವಿರುದ್ಧ ಆಕ್ರೋಶವಿದೆ ಯೆಂದೇ ಒಪ್ಪಿಕೊಂಡರೂ ಇದ್ದಕ್ಕಿದ್ದಂತೆ ಜೆಡಿಎಸ್ ನಾಯಕ ಕುಮಾರಸ್ವಾಮಿಯ ವಿರುದ್ಧ ಕುಟುಕಿದ್ದಾದರೂ ಏಕೆ? ಕುಮಾರಸ್ವಾಮಿ ತನ್ನ ಪರವಾಗಿ ದನಿಯೆತ್ತಿದ್ದಾರೆಂಬುದನ್ನು ಅರಿಯಲಾರದಷ್ಟು ಸೂಕ್ಷ್ಮತೆಯ ಕೊರತೆಯೇ? ಮಂತ್ರಿಯ ಸೆಕ್ಸ್ ಸೀಡಿಯನ್ನೇ ಜಾಲಾಡುವಷ್ಟು ಉದ್ದದ ಕೈಯುಳ್ಳ ಪೊಲೀಸ್ ಅಧಿಕಾರಿಣಿಗೆ ಕುಮಾರಸ್ವಾಮಿ ತನ್ನ ಪರ ದನಿಯೆತ್ತಿದ್ದಾರೆಂಬುದನ್ನು ತಿಳಿದುಕೊಳ್ಳಲಾರದಷ್ಟು ದೌರ್ಬಲ್ಯವೇ?

ಇದರರ್ಥ ಅನುಪಮಾ ಉದ್ದೇಶಪೂರ್ವಕವಾಗಿಯೇ ಕುಮಾರಸ್ವಾಮಿಯನ್ನು ಹೀಯಾಳಿಸುತ್ತಿದ್ದಾರೆ. ಸರ್ಕಾರವನ್ನು 'ಬೃಹನ್ನಳೆಯರು' ಎಂದು ಗೇಲಿ ಮಾಡುವುದು ಗೊತ್ತಿದೆ. ಮಂತ್ರಿಯ 'ಪ್ರೇಮ ಪ್ರಸಂಗ'ವನ್ನು ಬಯಲಿಗೆಳೆಯುತ್ತೇನೆ ಎನ್ನುತ್ತಾರೆ. ವಾಷಿಂಗ್ ಪೌಡರ್ ನಿರ್ಮಾ, ನಾಟಿ ಕೋಳಿ ಸಾರು, ಪ್ರೇಮ ಪ್ರಸಂಗದ ಒಂದನೇ ಭಾಗ ಇತ್ಯಾದಿಗಳೆಲ್ಲವೂ ಅವರು ಬಯಲಿಗೆಳೆಯಲಿರುವ ಮಂತ್ರಿಯ ಲೈಂಗಿಕ ಹಗರಣಗಳ ಕೋಡ್‌ವರ್ಡ್‌ಗಳು. ಕಾರಣವೇ ಇಲ್ಲದೆ ಜೆಡಿಎಸ್‌ನ ತೆನೆ ಹೊತ್ತ ಮಹಿಳೆಯ ಪ್ರಸ್ತಾವ ಮಾಡುವುದಾದರೆ ಬಿಜೆಪಿಯ ಯಡ್ಡಿ, ಅನಂತ್‌ಕುಮಾರ್, ರೇಣುಕಾಚಾರ್ಯ, ನಿರಾಣಿ, ಹಾಲಪ್ಪ ಮುಂತಾದವರ ಇಂಥದ್ದೇ ಪ್ರಸಂಗಗಳಿತ್ತಲ್ಲವೆ? ಎಲ್ಲಾ ರಾಜಕಾರಣಿಗಳನ್ನು ಹೀಯಾಳಿಸುವುದೇ ಅವರ ಉದ್ದೇಶವಾಗಿದ್ದರೆ ಏಕೆ ಬಿಜೆಪಿಯ ಯಾರೊಬ್ಬರ ಬಗ್ಗೆಯೂ ಚಕಾರವೆತ್ತುತ್ತಿಲ್ಲ?

ಇದು ಕಳೆದೆರಡು ದಿನಗಳ ಅನುಪಮಾರ ಫೇಸ್‌ಬುಕ್ ಕಣ್ಣಾಮುಚ್ಚಾಲೆಯ ಕುರಿತಂತೆ ಎಂಥವರನ್ನೂ ಕಾಡಲೇಬೇಕಾದ ಪ್ರಶ್ನಾವಳಿ. ಅಲ್ಲಿಗೆ ಅನುಪಮಾ ಬಿಜೆಪಿ ಬಗ್ಗೆ ಮೆದುವಾಗಿದ್ದಾರೆ ಅಥವಾ ಮುಗುಮ್ಮಾಗುತ್ತಾರೆ. ಪ್ರೇಮ ಪ್ರಸಂಗದ ಸೀಡಿ ಬೇಕಾ ಎಂದು ಅದನ್ನು ಮಕ್ಕಳು

⇨12



ಪರಮೇಶ್ವರ್ ನಾಯಕ್



ನಟಿ ತಾರಾ



ಶೋಭಾ ಕರಂದ್ಲಾಜೆ

ಹಾನಗಲ್ ಐಬಿ ಮತ್ತು ನಾಟಿ ಕೋಳಿ ಸಾರು!


ಅನುಪಮಾ ಹುಡುಗಾಟಕೆಯೇನೇ ಇರಲಿ. ಆದರೆ ಈ ಎಲ್ಲದರ ಫಲವೆಂಬಂತೆ ಮಂತ್ರಿ ಪರಮೇಶ್ವರ್ ನಾಯಕರ ರಂಗೀನ್ ರಾತ್ರಿಗಳ ನಿಗೂಢ ವೃತ್ತಾಂತವಂತೂ ಬಯಲಾದಂತಾಗಿದೆ. ಮೊದಲು ಪರಮೇಶಿ ಪ್ರೇಮ ಪ್ರಸಂಗ ಭಾಗ-1 ಎಂಬ ಸ್ಟೇಟಸ್‌ನ ಜೊತೆಗೇ ವಾಷಿಂಗ್ ಪೌಡರ್ ನಿರ್ಮಾ ಎಂಬ ಕಿರು ಶೀರ್ಷಿಕೆಯಿದೆ. ಇದರರ್ಥ ಯಾರೋ ಮಹಿಳೆಯೊಬ್ಬರ ಜೊತೆ ಪರಮೇಶ್ವರ್ ಅಲ್ಲೆಗರೆದದ್ದರ ಮೊಬೈಲ್ ಸಂಭಾಷಣೆಯಿರಬಹುದೆ?

ಹಾಗಿದ್ದರೆ ಸೀಡಿ ಬೇಕೇ ಎಂದೇಕೆ ಕೇಳುತ್ತಿದ್ದಾರೆ? ಮತ್ತೊಂದು ಸೆಕ್ಸ್ ಸೀಡಿ ನಿಜಕ್ಕೂ ಇದೆಯೇ? ಅಥವಾ ಇದು ಅನುಪಮಾರ ಹೆದರಿಸುವ ತಂತ್ರವೇ?

ತದನಂತರ ಮತ್ತೊಂದು ಸ್ಟೇಟಸ್‌ನಲ್ಲಿ ಹಾನಗಲ್ ಐಬಿಯಲ್ಲಿ ನಾಟಿ ಕೋಳಿ ಎಂದಿದ್ದರ ಅರ್ಥ ಮಹಿಳೆಯೊಬ್ಬಳು ಹಾನಗಲ್ ಐಬಿಯಲ್ಲಿ ತಂಗಿದ್ದ ಮಂತ್ರಿವರ್ಯರಿಗೆ ನಾಟಿ ಕೋಳಿ ಸಾರು ಮಾಡಿಕೊಂಡು ತಂದು ಉಪಚರಿಸಿದ್ದೆ? ಆಕೆ ಕಾಂಗ್ರೆಸ್ ಕಾರ್ಯಕರ್ತೆಯೇ? ಹಾನಗಲ್ ಐಬಿಯನ್ನು ಮಂತ್ರಿ ಪರಮೇಶ್ವರ್ ನಾಯಕ್ ತನ್ನ ಶೃಂಗಾರಲೀಲೆಗೆಂದೇ ಆಗಾಗ ಬಳಸಿಕೊಂಡಿದ್ದುಂಟಾ?

ಹಾಗೊಮ್ಮೆ ಮಂತ್ರಿಯ ಸೆಕ್ಸ್ ಸೀಡಿಯಿದ್ದಿದ್ದೇ ಆಗಿದ್ದರೆ ಅದನ್ನು ಯಾರು ಎಲ್ಲಿ ಹೇಗೆ ಚಿತ್ರೀಕರಿಸಿದ್ದು? ಅನುಪಮಾ ತಮಾಷೆಗೋ ಅಥವಾ ಮನೋಕ್ಷೋಭೆಗೋ ಮಂತ್ರಿಯ ಸೆಕ್ಸ್ ಸೀಡಿಯ ಮಸ್ಕಿರಿ ಮಾಡಿದ್ದೇ ಆಗಿದ್ದರೆ ಅದನ್ನು ಬೆಂಬಲಿಸುವ ಫೇಸ್‌ಬುಕ್ ಅಭಿಮಾನಿಗಳನ್ನು ದಿಕ್ಕು ತಪ್ಪಿಸುತ್ತಿದ್ದಾರಾ? ಆಕೆಯ ಫೇಸ್‌ಬುಕ್ ಸ್ಟೇಟಸ್‌ಗಳೆಲ್ಲ ಎಷ್ಟು ನಂಬಿಕೆಗೆ ಅರ್ಹ?

ಇದೆಲ್ಲ ಒತ್ತಟ್ಟಿಗಿಟ್ಟು ಹೇಳುವುದಾದರೆ ಓರ್ವ ಜವಾಬ್ದಾರಿಯುತ ಪೊಲೀಸ್ ಅಧಿಕಾರಿಯಾಗಿ ಈ ರೀತಿ ತಲೆ ಮರೆಸಿಕೊಂಡು ನಾಪತ್ತೆಯಾಗಿರುವುದಾದರೂ ಏಕೆ? ಒಂದೋ ಅನುಪಮಾರದ್ದು ಬಾಲಿಶ ಮನಸ್ಥಿತಿ ಅಥವಾ ಬಿಜೆಪಿಯವರನ್ನು ಓಲೈಸಲು ಇಂಥದ್ದೊಂದು ದುಸ್ಸಾಹಸ. ಇವೆರಡೂ ಒಟ್ಟೊಟ್ಟಿಗೆ ಮೇಳೈಸಿರಲೂಬಹುದು. ಒಂದು ಮೂಲದ ಪ್ರಕಾರ ಅನುಪಮಾರ ತಂದೆ ಮತ್ತು ಕುಟುಂಬ ರಾಜಕೀಯವಾಗಿ ಬಿಜೆಪಿಯನ್ನು ಬೆಂಬಲಿಸುತ್ತಲೇ ಬಂದಿದೆ. ತಮ್ಮ ಫೇಸ್‌ಬುಕ್‌ನಲ್ಲಿ 'ಜೈ ಶ್ರೀರಾಮ್' ಎಂದು ಕಲ್ಲೊಂದರ ಮೇಲೆ ಬರೆದದ್ದರ ಪಕ್ಕ ನಿಂತು ಫೋಟೋ ತೆಗೆಸಿಕೊಂಡಿದ್ದು ತ್ರಿಶೂಲ, ಪೌರಾಣಿಕ ದೇವರುಗಳ ಬೇಕಾಬಿಟ್ಟಿ ಫೋಟೋಗಳು ಇದನ್ನೇ ಸಮರ್ಥಿಸುತ್ತವೆ. ಇದೆಲ್ಲಕ್ಕೂ ತೀರ ವ್ಯತಿರಿಕ್ತವೆಂಬಂತೆ ಸಾಮಾನ್ಯವಾಗಿ ನಕ್ಸಲೀಯರ ಘೋಷವಾಕ್ಯವಾದ When injustice becomes law rebellion becomes duty ಎಂಬ ಫೋಟೋ ಕೂಡ ಇದೆ. ಇದು ಅರ್ಥವಾಗದ ಅವರ ಮನಸ್ಥಿತಿಯ ಸಂಕೇತದಂತಿದೆ.



ಳ್ಳಾರಿ ರಿಪಬ್ಲಿಕ್‌ನ 'ಪರಮ' ಡಿಕ್ಟೇಟರ್!



ಪಿ.ಟಿ. ಪರಮೇಶ್ವರ್ ನಾಯಕ್

ಬಳ್ಳಾರಿ ರಿಪಬ್ಲಿಕ್‌ಗೆ ಹೊಸದೊಬ್ಬ ಡಿಕ್ಟೇಟರ್ ರಿಸಿದ್ದಾನೆ. ನೋ ಡೌಟ್, ಅದು ಕಾರ್ಮಿಕ ಮಂತ್ರಿ ಪರಮೇಶ್ವರ್ ನಾಯಕ್. ಒಂದು ಕಾಲಕ್ಕೆ ಗಣಿ ಯಾದ ರೆಡ್ಡಿ ಬ್ರದರ್ಸ್ ಅಬ್ಬರಿಸಿ ಬೊಬ್ಬಿರಿದಿದ್ದ ರಿಯಲ್ಲೀಗ ಪರಮೇಶ್ವರ್ ನಾಯ್ಕನದೇ ಸರ್ವಾಧಿಕಾರ. ಣಿಕ ಅಧಿಕಾರಿಗಳಿಗೆ ಉಳಿಗಾಲವಿಲ್ಲ, ಅಕ್ರಮ ಗಳಿಗೆ ಲಂಗುಲಗಾಮಿಲ್ಲ! ಡಿವೈಎಸ್ಪಿ ಅನುಪಮಾ ರಾಜೀನಾಮೆ ಪ್ರಕರಣ ನಾಯ್ಕನ ಅಂಧಾ ದರ್ಬಾರ್‌ನ ಸ ಎಪಿಸೋಡು ಅಷ್ಟೆ.

ಖಡಕ್ ಅಧಿಕಾರಿಣಿ ಅನುಪಮಾ ಶೆಣೈ ಮತ್ತು ಷ್ಟ ಪರಮ್ ನಡುವೆ ಟಗ್ ಆಫ್ ವಾರ್ ಸದೊಂದು ತಿರುವಿಗೆ ಬಂದು ನಿಂತಿದೆ. ಅನುಪಮಾ ಗ್ಲಿಗೆ ಕಾಲಿಟ್ಟ ದಿನದಿಂದಲೂ ಪರಮ್ ಕಿರಿಕಿರಿ ವಿಸುತ್ತಲೇ ಇದ್ದ. ಆದರೆ ಅದು ವಿಕೋಪಕ್ಕೆ ಹೋಗಿ ದ್ದು ಇದೇ ಜನವರಿಯಲ್ಲಿ, ತಾನು ಫೋನ್ ದಾಗ ಕಾಲ್ ರಿಸೀವ್ ಮಾಡಲಿಲ್ಲ ಅನ್ನೋ ಸಿಲ್ಲಿ ವನ್ನಿಟ್ಟುಕೊಂಡು ಅನುಪಮಾರನ್ನು ಕೂಡ್ಲಿಗಿಯಿಂದ ಪುರಕ್ಕೆ ಎತ್ತಂಗಡಿ ಮಾಡಿಸಿದ್ದ ಪರಮ್, ಜಿಲ್ಲಾ ಯ್ತಿ ಚುನಾವಣಾ ಪ್ರಚಾರ ಸಭೆಯೊಂದರಲ್ಲಿ "ನನ್ನ ಕೇಳದಿದ್ದರೆ ಡಿವೈಎಸ್ಪಿ ಅನುಪಮಾಗೆ ಆದ ಗತಿಯೇ ತ್ತೆ" ಅಂತ ಓಪನ್ನಾಗಿ ವದರಾಡಿದ್ದ. ಆ ವೀಡಿಯೋ ಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದೇ ತಡ ದ್ಯಂತ ದುಷ್ಟ ಪರಮ್‌ನ ವಿರುದ್ಧ ಜನ ಗಿಬಿದ್ದಿದ್ದರು. ಎಲೆಕ್ಷನ್ ಎದುರಿಗಿದ್ದಿದ್ದರಿಂದ ಭಿಪ್ರಾಯಕ್ಕೆ ಬೆದರಿದ ಸರ್ಕಾರ ಅನುಪಮಾ ವರ್ಗಾವಣೆ ಮಾಡಿ ಮೊದಲಿದ್ದ ಕೂಡ್ಲಿಗೇ ರೀಪೋಸ್ಟ್ ಮಾಡಿತ್ತು.


ಅವತ್ತಿನಿಂದಲೂ ಪರಮ್, ಅನುಪಮಾ ಮೇಲೆ ಸೇಡು ಸಿಕೊಳ್ಳಲು ಹವಣಿಸುತ್ತಲೇ ಇದ್ದ. ಮೊನ್ನೆ ಲಿಕ್ಕರ್ ಬಿ ಅಂತಹದ್ದೊಂದು ಅಸ್ತ್ರವನ್ನು ಆತನಿಗೆ ಗಿಸಿಕೊಟ್ಟಿದೆ. ಜನಪರವಾಗಿ ನಿಂತ ಅನುಪಮಾ ಮೇಲೆ ಮತ್ತು ಲಿಕ್ಕರ್ ಮಾಫಿಯಾವನ್ನು ಛೂಬಿಟ್ಟು ಆಕೆಯ ದ್ಧ ಪ್ರತಿಭಟನೆ ನಡೆಯುವಂತೆ ನೋಡಿಕೊಂಡಿದ್ದ. ರಿಂದ ಬೇಸತ್ತೋ ಅಥವಾ ದುಷ್ಟ ಪರಮ್ ಜೊತೆ ಘರ್ಷಣೆಗೆ ಇಳಿಯಬೇಕೆಂದೋ ಅನುಪಮಾ ಶೆಣೈ ಜೀನಾಮೆ ಗೀಚಿ ಫೇಸ್‌ಬುಕ್ ಕದನಕ್ಕಿಳಿದಿದ್ದಾರೆ.

ನಾಯ್ಕ ನಾಲಾಯಕ್ಕು!


ಅದ್ಯಾವ ಘಳಿಗೆಯಲ್ಲಿ ಪರಮೇಶ್ವರನೆಂಬ ಈ ನಾಯಕ್ ರಾಜಕಾರಣಿ ಹರಪನಹಳ್ಳಿಯಿಂದ ಹಡಗಲಿಗೆ ಬಿದ್ದನೋ ಅವತ್ತಿನಿಂದ ಹಡಗಲಿಯ ನಸೀಬೇ ಸೇರಿಕೊಂಡಿದೆ. ಈತ ಬರುವುದಕ್ಕೂ ಮುನ್ನ ಇದು ಎಂ.ಪಿ.ಪ್ರಕಾಶ್‌ರ ಕಾರ್ಯಸ್ಥಾನವಾಗಿತ್ತು, ಅವತ್ತು ಪ್ರಕಾಶ್ ಡಿಟ್ಟುಹೋಗಿದ್ದ ಕೆಲಸಗಳೇ ಇವತ್ತು ಹಡಗಲಿಯಲ್ಲಿ ಸುತ್ತವೆಯೇ ಹೊರತು ಹೊಸದಾದ ಯಾವ ಮಗಾರಿಯೂ ಪರಮೇಶ್ವರ್ ನಾಯ್ಕನ ಹೆಸರು ಳುತ್ತಿಲ್ಲ, ಹಡಗಲಿಯಂಥ ತಾಲ್ಲೂಕು ಮಟ್ಟಕ್ಕೆ ಸ್‌ಆರ್‌ಟಿಸಿ ಬಸ್ ಡಿಪೋ ತಂದದ್ದಾಗಲಿ, ಸಬ್ ಲ್ಲು ನಿರ್ಮಿಸಿದ್ದಾಗಲಿ, ಇಂಜಿನಿಯರಿಂಗ್ ಕಾಲೇಜ್ ಸಿದ್ದಾಗಲಿ ಎಲ್ಲವೂ ಎಂ.ಪಿ.ಪ್ರಕಾಶ್‌ರ ಕೊಡುಗೆಗಳೇ. ರಮೇಶ್ವರ ನಾಯಕ್ ಅದೆಷ್ಟು ನಾಲಾಯಕ್ ಯಿಂದರೆ ಅವುಗಳನ್ನು ಸೆಟ್ಟಗೆ ನಿಭಾಯಿಸಿಕೊಂಡು ಗುವ ಕಾಳಜಿಯೂ ಆತನಿಗಿದ್ದಂತಿಲ್ಲ, ಪ್ರಕಾಶ್‌ರ ಣಾಗಿ ಕೆಎಸ್‌ಆರ್‌ಟಿಸಿ ಡಿಪೋ ಇದೆಯಾದರೂ ಲ್ಲಿ ಓಡಾಡುತ್ತಿರುವ 73ಕ್ಕೆ 73 ಬಸ್ಸುಗಳೂ ಗಳು, ಅಗಲೋ ಗುಜರಿ ಸೇರಲು ಹಾತೊರೆಯು

ವಂತವು. ಇನ್ನು ಗದಗ, ಬಾಗಲಕೋಟೆ, ಹಗರಿಬೊಮ್ಮನಹಳ್ಳಿ, ರಾಣೇಬೆನ್ನೂರು ಭಾಗದ ವಿದ್ಯಾರ್ಥಿಗಳಲ್ಲಿ ಆಶಾಕಿರಣ ಮೂಡಿಸಿದ್ದ ಆ ಇಂಜಿನಿಯರಿಂಗ್ ಕಾಲೇಜಿಗೆ ಇವತ್ತಿಗೂ ಸ್ವಂತದ್ದೊಂದು ಕಟ್ಟಡವಿಲ್ಲ. ಹಳೇ ತಹಸೀಲ್ದಾರರ ಕಟ್ಟಡದಲ್ಲಿ ಅನಾಥವಾಗಿ ಸಾಗುತ್ತಿರುವ ಅದಕ್ಕೆ ಕಾಯಂ ಉಪನ್ಯಾಸಕರಿಲ್ಲ; ವಿದ್ಯಾರ್ಥಿಗಳಿಗೆ ಲ್ಯಾಬ್ ಇಲ್ಲ! ಇಲ್ಲಿ ಕಲಿಯುವ ವಿದ್ಯಾರ್ಥಿಗಳು ಲ್ಯಾಬ್‌ಗೋಸ್ಕರ ಪಕ್ಕದ ಗದಗ, ಬಳ್ಳಾರಿ, ಹೊಸಪೇಟೆಗಳನ್ನು ಅವಲಂಬಿಸಬೇಕಿದೆ.

ಅಲ್ಲದೆ, ಪ್ರಕಾಶರು ಮಂತ್ರಿಯಾಗಿದ್ದಾಗ ಹಡಗಲಿಗೆ ಪೊಲೀಸ್ ತರಬೇತಿ ಕೇಂದ್ರ ಮಂಜೂರಾಗುವಂತೆ ನೋಡಿಕೊಂಡಿದ್ದರು. ಅದಕ್ಕೆಂದೇ 110 ಎಕರೆ ಜಮೀನನ್ನೂ ಗೊತ್ತು ಮಾಡಿದ್ದರು. ಪರಮೇಶ್ವರ್ ನಾಯ್ಕ್ ಕಿಂಚಿತ್ತು ಕಾಳಜಿ ವಹಿಸಿದ್ದರೂ ಇಷ್ಟೊತ್ತಿಗಾಗಲೇ ಅಲ್ಲೊಂದು ತರಬೇತಿ ಶಾಲೆ ತಲೆ ಎತ್ತಿ ನಿಂತಿರುತ್ತಿತ್ತು. ಆದರೆ ಪರಮ್‌ನ ಹೊಣೆಗೇಡಿತನದಿಂದಾಗಿ ಪೊಲೀಸ್ ತರಬೇತಿ ಕೇಂದ್ರ ಹಡಗಲಿಯ ಕೈತಪ್ಪಿ ರಾಯಚೂರು ಪಾಲಾಗುವಂತಾಗಿದೆ. ಇನ್ನು ಪ್ರಕಾಶ್ ಮತ್ತು ಎಚ್.ಕೆ. ಪಾಟೀಲರ ಒತ್ತಾಸೆಯಿಂದ



ಹಲವು ವರ್ಷಗಳ ಹಿಂದೆಯೇ ಮಂಜೂರಾತಿ ದಕ್ಕಿಸಿಕೊಂಡಿದ್ದ ಹುಲಿಗುಡ್ಡ ನೀರಾವರಿ ಯೋಜನೆಯನ್ನು ಕೇಳುವುದೇ ಬೇಡ. ಹಡಗಲಿ ಮತ್ತು ಗದಗ ಜಿಲ್ಲೆಯ ಮುಂಡರಗಿ ತಾಲೂಕುಗಳ ಅಜಮಾಸು ಮೂರು ಲಕ್ಷ ಎಕರೆ ಭೂಮಿಗೆ ನೀರಾವರಿ ಭಾಗ್ಯ ಒದಗಿಸಬೇಕಿದ್ದ ಈ ಯೋಜನೆಗೆ ಹಿಂದಿನ ಶಾಸಕ ಚಂದ್ರಾನಾಯ್ಕ ತನ್ನ ಯಡ್ಡಿ ಸರ್ಕಾರದಿಂದ 126 ಕೋಟಿ ರೂಪಾಯಿ ಮಂಜೂರು ಮಾಡಿಸಿದ್ದ. ಅಷ್ಟರಲ್ಲೇ ಚುನಾವಣೆ ಎದುರಾಗಿ ಆತ ಪರಮೇಶ್ವರ ನಾಯ್ಕನೆದುರು 41 ಸಾವಿರ ಮತಗಳ ಲೀಡ್‌ನಿಂದ ಮಕಾಡೆ ಮಲಗಿದ ನಂತರ ಅಷ್ಟೂ ಹಣ ಏನಾಯಿತೆಂಬುದಕ್ಕೆ ಲೆಕ್ಕವೇ ಇಲ್ಲ! ನಡೆದ ಅಷ್ಟುಇಷ್ಟು ಕಾಲುವೆ ಕಾಮಗಾರಿಗಳೂ ಪರಮ್‌ನ ಭ್ರಷ್ಟತೆಗೆ ನೀಡಿದ ಸರ್ಟಿಫಿಕೇಟುಗಳಂತೆ ನರಳಾಡುತ್ತಿವೆ. ಹಡಗಲಿಯ 12 ಕೆರೆಗಳಿಗೆ ನೀರು ತುಂಬಿಸುವ ಭರವಸೆ ನೀಡಿ ಗೆದ್ದುಬಂದ ಪರಮ್, ಮಂತ್ರಿಯಾದದ್ದೇ ತಡ, ಅಂತಹದ್ದೊಂದು



ಆಶ್ವಾಸನೆಯನ್ನೇ ಮರೆತು ಕೂತ. ತನ್ನ ರಾಜಕೀಯ ಚೇಲಾಗಳೇ ಹೆಚ್ಚಾಗಿರುವ ಮತ್ತು ಆ ಮೂಲಕ ಆತನ ಗೆಲುವಿಗೆ ಪ್ರಮುಖ ಕಾಣ್ಕೆ ನೀಡುತ್ತಿರುವ ದೇವರ ಗೊಂಡನಹಳ್ಳಿ ಮತ್ತು ಹಿರೇಮಲ್ಲನಕೆರೆ ಎಂಬೆರಡು ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸಿದ್ದಷ್ಟೇ ಆತನ ಒಟ್ಟಾರೆ ಸಾಧನೆ!

ಸಮಾಧಿ 'ಪ್ರಕಾಶಿ'ಸಲೇ ಇಲ್ಲ

ಇದೆಲ್ಲ ಒತ್ತಟ್ಟಿಗಿರಲಿ, ಹೆಸರಿಗೆ ಕಾರ್ಮಿಕ ಮಂತ್ರಿಯಾಗಿದ್ದರೂ ತನ್ನದೇ ತಾಲೂಕಿನ ಕಾರ್ಮಿಕ ಇಲಾಖೆಯಲ್ಲಿ ಖಾಲಿಯಿರುವ ಕಾರ್ಮಿಕಾಧಿಕಾರಿಯನ್ನು ನೇಮಕ ಮಾಡಿಕೊಂಡಿಲ್ಲವೆಂದರೆ ಈತನ ಹೊಣೆಗೇಡಿತನ ಅದಿನ್ನೆಂತದ್ದಿರಬೇಡ. ಮಂತ್ರಿಯಾಗಿ ಮೂರು ವರ್ಷ ಕಳೆದರೂ ಹಡಗಲಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಕೃಷಿ ಇಲಾಖೆಗಳಿಗೆ ಅಧಿಕಾರಿಗಳೇ ಇಲ್ಲದೆ ಪಕ್ಕದ ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆಯ ಅಧಿಕಾರಿಗಳು ಉಸ್ತುವಾರಿ ನೋಡಿಕೊಳ್ಳು



ವಂತಾಗಿದೆ. ಹಡಗಲಿಯಲ್ಲಿ ಪರಮೇಶ್ವರ ನಾಯ್ಕನಿಗೆ ಪೊಲಿಟಿಕಲ್ ಬೇಸ್ ದಕ್ಕಿಸಿಕೊಟ್ಟಿರುವುದೇ ಪ್ರಕಾಶ್‌ರ ಕಾಂಗ್ರೆಸ್ ಛಾಯೆ. ಅಂತಹ ಪ್ರಕಾಶ್‌ರ ಸಮಾಧಿ ನಿರ್ಮಾಣದಲ್ಲೂ ತನ್ನ ಗೆಬರಾಟದಿಂದ ವಿನಾಯ್ತಿ ಕೊಟ್ಟಿಲ್ಲ. ಇದ್ದುದರಲ್ಲಿ ಸಭ್ಯ ರಾಜಕಾರಣಿ ಅಂತ ಹೆಸರು ಮಾಡಿದ್ದ ಪ್ರಕಾಶ್‌ರ ಸಮಾಧಿಯನ್ನು ಪ್ರವಾಸಿಸ್ಥಳವನ್ನಾಗಿ ಅಭಿವೃದ್ಧಿಪಡಿಸಿ ಅವರಿಗೆ ಗೌರವ ಸಲ್ಲಿಸಬೇಕೆಂಬ ಎಂ.ಪಿ. ಪ್ರಕಾಶ್ ಪ್ರತಿಷ್ಠಾನ ಮತ್ತು ರಂಗಭಾರತಿಯ ಒತ್ತಾಯಕ್ಕೆ ಜನರೂ ಧ್ವನಿಗೂಡಿಸಿದ್ದರಿಂದ ಸರ್ಕಾರ 20 ಲಕ್ಷ ಅನುದಾನ ಬಿಡುಗಡೆ ಮಾಡಿತ್ತು. ಹಾಗೆ ನೋಡಿದರೆ, ಹರಪನಹಳ್ಳಿ ಕ್ಷೇತ್ರಕ್ಕಿದ್ದ ಮೀಸಲಾತಿ ರದ್ದಾಗಿ ಅತಂತ್ರಕ್ಕೆ ಸಿಲುಕಿದ್ದ ಪರಮೇಶ್ವರ ನಾಯ್ಕನಿಗೆ ರಾಜಕೀಯ ಪುನರ್ವಸತಿ ಕಲ್ಪಿಸಿಕೊಟ್ಟ ಪ್ರಕಾಶ್‌ರ ಸಮಾಧಿ ನಿರ್ಮಾಣ ಕಾರ್ಯವನ್ನು ಈತನೇ ಮುತುವರ್ಜಿ ವಹಿಸಿ ಮಾಡಬೇಕಿತ್ತು. ಆದರೆ ಆ ಯೋಜನೆಗೆ ಕಲ್ಲು ಹಾಕಿದ ಪರಮ್ ಅತ್ತ ತಿರುಗಿಯೂ ನೋಡಿಲ್ಲ. ಹಣ ಏನಾಯ್ತು ಅಂತ ಬಲ್ಲವರಿಲ್ಲ. ವಿಪರ್ಯಾಸವೆಂದರೆ, ಹಡಗಲಿಯಲ್ಲಿರುವ ಅದೇ ಪ್ರಕಾಶ್‌ರ ಮನೆಯ ಮುಂದೆ ತನ್ನ ಭಾರೀ ಬಂಗಲೆಯನ್ನು ಎಬ್ಬಿಸಿ ನಿಲ್ಲಿಸಿದ್ದಾನೆ!

ಮಗನ ಪೊಲಿಟಿಕಲ್ 'ಪಲ್ಟಿ'


ಬಳ್ಳಾರಿಗೆ ತಾನು ವಕ್ಕರಿಸಿದ್ದು ಸಾಕಾಗದೆ ತನ್ನ ಮಗನನ್ನು ಉತ್ತರಾಧಿಕಾರಿಯಾಗಿ ಬೆಳೆಸುವ ಭಾರೀ ಅನಾಹುತಕ್ಕೆ ಕೈಯಿಟ್ಟಿದ್ದಾನೆ. ಇವನ ಮಗ ಭರತ್‌ನಾದರೂ ಅಪ್ಪನನ್ನೇ ಮೀರಿಸುವ ದರ್ಪಿಷ್ಠ; ಮರಳುದಂಧೆಯ ಕಸುಬಸ್ಥ! ಹರಪನಹಳ್ಳಿಯ ತನ್ನ ಹುಟ್ಟೂರು ಲಕ್ಷ್ಮೀಶ್ವರ ತಾಂಡಾ ಗ್ರಾಮ ಪಂಚಾಯ್ತಿ ಎಲೆಕ್ಷನ್ನಿಗೆ ಭರತನನ್ನು ನಿಲ್ಲಿಸಿದ್ದಾಗಲೇ ಆತನಿಗೊಂದು ರಾಜಕೀಯ ಅಸ್ತಿತ್ವವೇ ಇಲ್ಲವೆನ್ನುವುದು ಪರಮೇಶ್ವರ್ ನಾಯ್ಕನಿಗೆ ಖಾತ್ರಿಯಾಗಿತ್ತು. ಹಾಗಾಗಿ ತನ್ನ ಅಧಿಕಾರ ಮತ್ತು ಹಣದ ಚರ್ಬಿಯನ್ನು ಚಲಾವಣೆ ಮಾಡಿ ಎದುರಿಗಿದ್ದ ಕ್ಯಾಂಡಿಡೇಟುಗಳು ನಾಮಪತ್ರ ವಾಪಾಸ್ ಪಡೆಯುವಂತೆ ಮಾಡಿದ್ದ ಪರಮ್, ಮಗನನ್ನು ಅವಿರೋಧವಾಗಿ ಆಯ್ಕೆಯಾಗಿಸಿದ್ದ. ಅಲ್ಲದೇ ಬೇಕಾದ ಮೀಸಲಾತಿಯನ್ನೂ ಹಾಕಿಸಿಕೊಂಡು ಗ್ರಾಮ ಪಂಚಾಯ್ತಿ ಅಧ್ಯಕ್ಷನನ್ನಾಗೂ ಪ್ರತಿಷ್ಠಾಪಿಸಿದ್ದ.

ಆದರೆ ಜಿಲ್ಲಾ ಪಂಚಾಯತ್ ಚುನಾವಣೆ ವೇಳೆಗೆ ಪರಮ್‌ನ ಅಂತಹ ಯಾವ ಆಟಗಳೂ ನಡೆಯದಾಗಿದ್ದವು. ಮಗನನ್ನು ಕಂಚೀಕೆರೆ ಜಿಲ್ಲಾ ಪಂಚಾಯ್ತಿ ಕ್ಷೇತ್ರದಿಂದ ಕಣಕ್ಕಿಳಿಸಿದ್ದ ಪರಮೇಶ್ವರ ನಾಯ್ಕ ತನಗಿದ್ದ ಜಿಲ್ಲಾ ಉಸ್ತುವಾರಿ ಮಂತ್ರಿ ಹುದ್ದೆಯನ್ನೇ ಪಣಕ್ಕಿಟ್ಟು ಭರತ್‌ನನ್ನು ಗೆಲ್ಲಿಸಿಕೊಳ್ಳಲು ಹವಣಿಸಿದ್ದ. ಈಗಾಗಲೇ ಪರಮ್‌ನ ದರ್ಪ, ಭರತ್‌ನ ದಂಧೆಗಳನ್ನು ಕಂಡು ರೋಸಿಹೋಗಿದ್ದ ಕಂಚಿಕೆರೆಯ ಜನ ಅಪ್ಪ-ಮಗನಿಗೆ ಸರಿಯಾದ ಪಾಠ ಕಲಿಸಿದ್ದರು.

ಭರತ್ ಎದುರು ನಿಂತಿದ್ದ ಬಿಜೆಪಿಯ ದೊಂಬರ ಸಮುದಾಯಕ್ಕೆ ಸೇರಿದ (ಕಂಚೀಕೆರೆ ವ್ಯಾಪ್ತಿಯಲ್ಲಿ ದೊಂಬರ ಸಂಖ್ಯೆ ತೀರಾ ಕಮ್ಮಿ ಅನ್ನೋದು ಗಮನಾರ್ಹ ಸಂಗತಿ) ಸಿದ್ದಪ್ಪನನ್ನು ಗೆಲ್ಲಿಸಿದ್ದರು. ಆಮೇಲೆ ಇದೇ ಸಿದ್ದಪ್ಪ ದಾವಣಗೆರೆ ಜಿಲ್ಲಾ ಪಂಚಾಯ್ತಿಯ ಉಪಾಧ್ಯಕ್ಷನಾಗಿ ಆಯ್ಕೆಯಾದದ್ದು ಭರತ್‌ನ ಪೊಲಿಟಿಕಲ್ ಮೈಲೇಜಿಗೆ ಭಾರೀ ಪೆಟ್ಟನ್ನೇ ನೀಡಿದೆ. ತುಂಗಭದ್ರಾ ಒಡಲಿನಿಂದ ಮರಳು ಗೆಬರಿ ಬೆಂಗಳೂರಿಗೆ ಸಾಗಿಸುವ ಕಲ್ಯಾಟಕ್ಕೆ ನಿಂತಿರುವ ಭರತ್ ತಾನು ಅಧ್ಯಕ್ಷನಾದ ಗ್ರಾಮ ಪಂಚಾಯ್ತಿಯನ್ನೇ ಮರೆತುಬಿಟ್ಟಿದ್ದಾನೆ. ಕ್ಷೇತ್ರದ ಉದ್ಧಾರದ ಬಗ್ಗೆ ಎಳ್ಳರ್ಧಕಾಳಿನ ಕಾಳಜಿ ಮಾಡದೆ ಕಮೀಶನ್ ದಂಧೆಗೆ ಕೈಹಾಕಿರುವ ಪರಮೇಶ್ವರ ಮಗನನ್ನೂ ಅದೇ ವಸೂಲಿ ದಂಧೆಗಿಳಿಸಿದ್ದಾನೆ.

2018ರ ಚುನಾವಣೆಯಲ್ಲಿ ಪರಮೇಶ್ವರ ನಾಯ್ಕನಿಗೆ ಅಪ್ಪಳಿಸಲು ಭರ್ಜರಿ ಪಾಠವೊಂದು ಸಜ್ಜಾಗಿ ಕೂತಿದೆ. ಅನುಪಮಾ ಶೆಣೈ ಆ ಪಾಠದ ಮುನ್ನುಡಿಯಷ್ಟೆ...

–ಟಿ.ಎನ್. ಷಣ್ಮುಖ




ಆಯುರ್ವೇದ-ಮೂಲಿಕಾ ಜ್ಞಾನ ಕೇವಲ ಋಷಿಮುನಿಗಳ ಕಾಪಿರೈಟೇ

ವ್ಯಾಪಾರ ವ್ಯವಹಾರದಲ್ಲಿ ಜನರ ನಂಬಿಕೆ ಹಾಗು ಧರ್ಮವನ್ನು ಲಾಭದಾಯಕವಾಗಿ ಬಳಸಿಕೊಳ್ಳುವ ತಂತ್ರದಲ್ಲಿ ಭಾರತೀಯರನ್ನು ಮೀರಿಸುವವರಿಲ್ಲವೆಂದು ಇಲ್ಲಿನ ಖಾವಿಧಾರಿಗಳ ಆಯುರ್ವೇದ ಉತ್ಪನ್ನಗಳ ಭರಾಟೆಯ ಹಾಗು ಅವರ ಸಾವಿರಾರು ಕೋಟಿ ರೂ. ವ್ಯವಹಾರಗಳ ಬಗ್ಗೆ ಮಂಗಳೂರಿನ ಕ್ಷಿತಿಜ ಕೆ.ಹೆಗಡೆಯವರು ಸರಿಯಾಗಿಯೇ ಬರೆದಿದ್ದಾರೆ (ಜೂ. 8, 2016ರ ಸಂಚಿಕೆ).

ಇತ್ತೀಚಿನ ದಿನಗಳಲ್ಲಿ ಬಹಳಷ್ಟು ದೊಡ್ಡಮಟ್ಟ ದಲ್ಲಿಯೇ ದುರುಪಯೋಗ ಪಡಿಸಿಕೊಳ್ಳಲಾಗುತ್ತಿರುವ ಎರಡು ಪ್ರಮುಖ ಸಂಗತಿಗಳೆಂದರೆ ಅದು ಆಯುರ್ವೇದ ಮತ್ತು ಯೋಗ. ಹಿಮಾಲಯದಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದಂತಹ ಪ್ರಾಚೀನ ಭಾರತದ ಋಷಿಮುನಿಗಳು ಕಂಡುಕೊಂಡಂತಹ (ಆ ರೀತಿಯಾಗಿ ಜನರ ಮಧ್ಯೆ ಬಿಂಬಿಸಲ್ಪಟ್ಟ) ಭಾರತದ ಆಯುರ್ವೇದ ಶಾಸ್ತ್ರಕ್ಕೆ ದೈವಿಕತೆಯ ಲೇಪನ ನೀಡಿ ಜನರನ್ನು (ವಿದೇಶಿಯರನ್ನೂ ಸೇರಿ) ಹಿಂದಿನಿಂದಲೂ ವ್ಯವಸ್ಥಿತವಾಗಿ ಮೋಸಗೊಳಿಸಲಾಗುತ್ತಿದೆ. ಬಾಬಾ ರಾಮದೇವ್, ಶ್ರೀ ಶ್ರೀ ರವಿಶಂಕರ್ ಗುರೂಜಿ, ಕರ್ನಾಟಕದ ಸಂತೋಷ್ ಗುರೂಜಿಯಂತವರುಗಳು ಈ ಆಯುರ್ವೇದ ಗಿಡಮೂಲಿಕೆಗಳ ಹೆಸರಲ್ಲೇ ಸಾಕಷ್ಟು ಹಣ ಮತ್ತು ಹೆಸರು ಮಾಡಿಕೊಳ್ಳುತ್ತಿರುವ ವಿಚಾರ ಎಲ್ಲರಿಗೂ ತಿಳಿದಿರುವಂತಾದ್ದೇ ಆಗಿದೆ. ಇದು ಎಷ್ಟರಮಟ್ಟಿಗೆ ಎಂದರೆ 2-3 ದಶಕದ ಹಿಂದೆ ರಸ್ತೆಬದಿ ಕಡ್ಲೆಕಾಯಿ ತಿನ್ನುತ್ತಾ ಕಾಲಕಳೆಯುತ್ತಿದ್ದ ರವಿಶಂಕರನಂತವರು ಯಾವುದೇ ಪರಿಶ್ರಮಗಳಿಲ್ಲದೇ ಕೇವಲ ಯೋಗ ಆಯುರ್ವೇದದ 'ಭಂಡ'ವಾಳಗಳಿಂದಲೇ ಇಂದು ವ್ಯವಸ್ಥೆಯನ್ನೇ ಪ್ರಭಾವಿಸು ವಷ್ಟರ ಮಟ್ಟಿಗೆ ಬೆಳೆದಿದ್ದಾರೆ.


ಇಂದು ಟಿವಿ ಚಾನೆಲ್‌ಗಳಲ್ಲಿ ಭಂಡ ಜ್ಯೋತಿಷಿಗಳಿಗಿಂತಲೂ ಖೊಟ್ಟಿ ಆಯುರ್ವೇದ ಔಷಧಿಗಳ ವಂಚಕರೇ ಹೆಚ್ಚು ಪ್ರಚಾರದಲ್ಲಿದ್ದಾರೆ. ನೀವು ಟಿವಿ ಆನ್ ಮಾಡಿ ಚಾನೆಲ್‌ಗಳನ್ನು ನೋಡುತ್ತಾ ಬಂದರೆ ಸಂಧಿಸುಧಾ, ಅಸ್ಥಿ ಜೀವಕ್, ಕೇಶವರ್ಧಿನಿ, ಚರ್ಮ ಬೆಳ್ಳಗಾಗಿಸುವ, ಎತ್ತರ ಬೆಳವಣಿಗೆಗೆ, ಬೊಜ್ಜು ಕರಗಿಸುವ ಅಥವ ತೆಳ್ಳಗಿರುವವರಿಗೆ ದೇಹದಾರ್ಢ್ಯ ತರುವಂತವುಗಳೇ ಮೊದಲಾದ ಹತ್ತು ಹಲವು ತರಹದ ಢೋಂಗಿ ಆಯುರ್ವೇದ ಔಷಧಿಗಳ ಜಾಹೀರಾತುಗಳು ಕಾಣಸಿಗುತ್ತವೆ. ಎಲ್ಲಾ ಭಾಷೆಗಳಲ್ಲೂ ಕಂಡುಬರುವ ಈ ಆಯುರ್ವೇದ ಔಷಧಿ ಜಾಹೀರಾತು ದಿನವಿಡೀ ಹಲವಾರು ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಲೇ ಇರುತ್ತದೆಂದರೆ ಅದರ ವ್ಯಾಪಾರ ವಹಿವಾಟು ಎಷ್ಟಿರಬಹುದೆಂದು ನೀವೇ ಅಂದಾಜಿಸಬಹುದು. ಯಾವುದೋ ಪ್ರಸಿದ್ಧ ನಟ-ನಟಿಯನ್ನು ಹಿಡಿದುಕೊಂಡು ತಯಾರುಮಾಡಿದ ಇಂತಹ ಜಾಹೀರಾತುಗಳು ಜನರನ್ನು ಕೂಡಲೇ ಆಕರ್ಷಿಸುತ್ತವೆ, ಜಾಹೀರಾತಿನಲ್ಲಿ ಸಂಬಂಧಿತ ಆಯುರ್ವೇದದ ಔಷಧಿಯ ತಯಾರಿಕಾ ವಿಧಾನವನ್ನು ಒಬ್ಬ ವಿವರಿಸುತ್ತಾ ಹಿಮಾಲಯದ ಅಪರೂಪದ ಗಿಡಮೂಲಿಕೆಗಳಿಂದ ಇದು ಪ್ರಾಚೀನ ಆಯುರ್ವೇದ ಗ್ರಂಥಗಳ ಆಧಾರದಲ್ಲಿ ತಯಾರಿಸಲ್ಪಟ್ಟದ್ದು ಎಂದು ಭೋಂಗು ಬಿಡುತ್ತಾನೆ. ಇಂತಹ ಜಾಹೀರಾತು ವಹಿವಾಟುಗಳ ಹಿಂದಿರುವುದು ಪ್ರಾಚೀನ ಆಯುರ್ವೇದ ಹಾಗು ಗಿಡ ಮೂಲಿಕೆಗಳ ಮೇಲಿನ ಜನರ ನಂಬಿಕೆಯೇ ವಿನಃ ಬೇರೇನಲ್ಲ, ಅದನ್ನು ಈ ದುರುಳರು ಸರಿಯಾಗಿ ಇಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರಷ್ಟೆ. ಇತ್ತೀಚಿಗಿನ ದಿನಗಳಲ್ಲಿ ಟೀವಿಯನ್ನು ಆಕ್ರಮಿಸಿಕೊಂಡಿರುವ ರಾಮ್‌ದೇವ್ ಪ್ರಾಡಕ್ಟ್‌ಗಳೂ ಹಿಮಾಲಯ, ಪ್ರಾಕೃತಿಕ, ಆಯುರ್ವೇದ ಅಂದುಕೊಂಡೇ ಜನರನ್ನು ಹಾದಿತಪ್ಪಿಸುತ್ತಿವೆ.

ನಾನು ಆಯುರ್ವೇದ ಗಿಡಮೂಲಿಕೆಗಳ ವಿರೋಧಿ ಖಂಡಿತ ಅಲ್ಲ, ಆಸ್ಪಿರಿನ್ ಮೊದಲಾದ ಅನೇಕ ಆಧುನಿಕ ಔಷಧಿಗಳ ಹಿಂದಿರುವುದು ಇಂತಹದೇ ಗಿಡಮೂಲಿಕೆಗಳ ತತ್ವವೇ ಆಗಿದೆ. ಗ್ರೀಸ್ ಮೊದಲಾದೆಡೆ ಜ್ವರ ಹಾಗು ನೋವಿನ ಶಮನಕ್ಕಾಗಿ ಬಳಸುತ್ತಿದ್ದ ವಿಲ್ಲೋ ಮರದ ತೊಗಟೆಯಲ್ಲಿನ ಸ್ಯಾಲಿಸಿಲಿಕ್ ಆಮ್ಲವೇ ಆಸ್ಪಿರಿನ್ ಔಷಧಿಗೆ ಪ್ರೇರಣೆಯಾಗಿರುವಂತೆ ಅನೇಕ ಪಾರಂಪರಿಕ ಮೂಲಿಕಾ ಔಷಧಿಗಳು ಆಧುನಿಕ ವೈದ್ಯಕೀಯ ಜಗತ್ತಿಗೆ ತಮ್ಮದೇ



ಆದ ಅತ್ಯಮೂಲ್ಯ ಕೊಡುಗೆಯನ್ನು ನೀಡಿರುವುದು ಅಲ್ಲಗಳೆಯಲಾಗದಂತಹ ಸತ್ಯ. (ಲಂಕೇಶ್ ಬಳಗದ ಮಿತ್ರ ಇಸ್ಮತ್ ಫಜೀರ್ ಅವರ ಮದುವೆಗೆ ಹೋಗಿದ್ದಾಗ ನನ್ನ ಕೈಯಲ್ಲೊಂದು ಸ್ಥಳೀಯವಾಗಿ ದೊರೆಯುವ ಸಸ್ಯವೊಂದರ ಎಲೆಚಿಗುರಿನ ಕಟ್ಟಿತ್ತು, ಅದನ್ನು ವೈದ್ಯರೂ ಆಗಿರುವ, ಪತ್ರಿಕೆಯ ಅಂಕಣಕಾರರೂ ಆಗಿರುವ ಡಾ. ಎಚ್.ವಿ.ವಾಸು ರವರಿಗೆ ತೋರಿಸಿ ವಿವರಿಸಿದ್ದೆ. ಮಕ್ಕಳ ಹೊಟ್ಟೆಹುಳು ಕಷಾಯಕ್ಕೆಂದು ಕೊಂಡೊಯ್ಯುತ್ತಿದ್ದ ಒಳ್ಳೆ ಕುಡಿ ಹೆಸರಿನ ಆ ಚಿಗುರು ಸರ್ಪ ಸುತ್ತು -Herpes ಗೆ ಒಳ್ಳೆಯ ಔಷಧಿಯಂತೆ). ಆದರೆ ಆಯುರ್ವೇದದ ಉತ್ಪ್ರೇಕ್ಷಿತ ಪ್ರಚಾರ ಆ ವೈದ್ಯ ಪದ್ಧತಿಗೆ ಆರೋಪಿಸಲಾದ ದೈವಿಕಲೇಪನ ಮೊದಲಾದವುಗಳು ಮೇಲೆ ಹೇಳಲಾದಂತಹ ವಂಚಕರಿಗೆ ಲಾಭವನ್ನು ತಂದರೆ ಮುಗ್ಧರನ್ನು ಹಾದಿ ತಪ್ಪಿಸಬಹುದೆಂಬುದೇ ಈ ಲೇಖನದ ಮೂಲ ಉದ್ದೇಶ.

ನಾಯಿಬೆಕ್ಕುಗಳು ಹೊಟ್ಟೆನೋವೋ ಇಲ್ಲಾ



ಇನ್ಯಾವುದಕ್ಕೋ ಹುಲ್ಲನ್ನು ಆಗಾಗ ತಿನ್ನುವುದುಂಟು. ನಾವು ಸೇವಿಸುವ ಅಕ್ಕಿ, ಗೋಧಿ, ರಾಗಿ, ಜೋಳದಂತಹ ದಿನನಿತ್ಯದ ಆಹಾರ ನಮ್ಮ ಪೂರ್ವಜರ ಶೋಧನೆಯ ಫಲವೇ ಆಗಿದೆ. ಯಾವುದನ್ನು ಸೇವಿಸಬೇಕು ಯಾವುದನ್ನು ಸೇವಿಸಬಾರದು ಇವೆಲ್ಲ ನಮ್ಮ ಪೂರ್ವಜರು ಅನುಭವದ ಮೂಲಕ ಕಂಡುಕೊಂಡಿದ್ದನ್ನು ನಾವೀಗ ಮುಂದುವರೆಸುತ್ತಿದ್ದೇವಷ್ಟೆ. ಆದೇರೀತಿ ಈ ಆಸ್ಪತ್ರೆ, ರೆಡಿಮೇಡ್ ಔಷಧಿಗಳು ಬರುವ ಮೊದಲು ಮಾನವ ತನ್ನ ರೋಗರುಜಿನಗಳ ಶಮನಕ್ಕೆ ತನ್ನ ಹಾಗು ತನ್ನ ಸಮುದಾಯದ ದೀರ್ಘ ಅನುಭವದ ಆಧಾರದಲ್ಲಿ ಸ್ಥಳೀಯವಾಗಿ ದೊರೆಯುವ ಗಿಡ ಮೂಲಿಕೆಗಳನ್ನು 'ಅರ್ಥೈಸಿಕೊಂಡು' (ಯಾವುದಕ್ಕೆ ಯಾವುದು ಪ್ರಮಾಣವೆಷ್ಟು ಇತ್ಯಾದಿ) ಬದುಕಲು ಕಲಿತಿದ್ದ. ಇಂತಹ ಅನುಭವಜನ್ಯ ಜ್ಞಾನಕ್ಕೆ ಋಷಿಮುನಿಗಳು, ಹಿಮಾಲಯ ಎಂಬ ಭೇದಗಳು ಖಂಡಿತ ಇಲ್ಲ, ಜಗತ್ತಿನೆಲ್ಲೆಡೆ ಈ ಪಾರಂಪರಿಕ ಜ್ಞಾನ ಎಲ್ಲೆಂದರಲ್ಲಿ ವ್ಯಾಪಿಸಲ್ಪಟ್ಟಿದೆ. ಇದಕ್ಕೆ ಭಾರತೀಯ ಋಷಿಮುನಿಗಳು ಹಿಮಾಲಯ ತಪ್ಪಲು ಎಂಬ ಚೌಕಟ್ಟನ್ನು ವಿಧಿಸುವುದೇ ದೊಡ್ಡತಪ್ಪು. (6 ವರ್ಷಗಳ ಹಿಂದೆ ಹಿಮಾಲಯದ ಬುಡದಲ್ಲಿರುವ ಸಿಮ್ಲಾಕ್ಕೆ ಹೋಗಿದ್ದಾಗ ನನಗೆ ನನ್ನ ಪರಿಸರದ ಬಗ್ಗೆ ಹೆಮ್ಮೆಯೆನಿಸಿತ್ತು, ಬರೀ ಪೈನ್ ಜಾತಿಯ ಮರಗಳೇ ತುಂಬಿದ್ದ ಆ ಪರಿಸರಕ್ಕಿಂತ ಸಣ್ಣ ಹುಲ್ಲಿನಿಂದ ಹಿಡಿದು ದೈತ್ಯ ವೃಕ್ಷಗಳ ತನಕದ ಲಕ್ಷಾಂತರ ಸಸ್ಯ ಪ್ರಭೇದಗಳಿರುವ ನಮ್ಮ ಪಶ್ಚಿಮಘಟ್ಟ ಪರಿಸರವೇ ಎಷ್ಟೋ ಮೇಲೆನಿಸಿತ್ತು.)

ಆಯುರ್ವೇದ ಶಾಸ್ತ್ರದ ಪ್ರಕಾರ ಔಷಧೀಯ ಗುಣವಿರದ ಯಾವ ಸಸ್ಯವೂ ಜಗತ್ತಿನಲ್ಲಿಲ್ಲವಂತೆ (ಹಾಗಂತ ಒಂದು ಕಥೆಯೂ ಇದೆ). ಮೂಲಿಕಾ ಔಷಧಿಯ ಜ್ಞಾನಸಮುದ್ರ ಮಥನಕಾಲದಲ್ಲಿ ಅಮೃತಕಲಶ ಹಿಡಿದು ಬಂದ ನಮ್ಮ ಆಯುರ್ವೇದದ ದೇವರಾದ ಧನ್ವಂತರಿಯನ್ನು ನಂಬುವ ಭಾರತದಕ್ಕಷ್ಟೇ ಸೀಮಿತವಲ್ಲ; ಆಫ್ರಿಕಾ ಹಾಗು ದಕ್ಷಿಣ ಅಮೆರಿಕಾದ ಅಮೇಜಾನ್ ಪರಿಸರದ ಮೂಲನಿವಾಸಿಗಳಿಂದ ಹಿಡಿದು ಧನ್ವಂತರಿ ದೇವನ ಪರಿಚಯವೇ ಇಲ್ಲದ ಅಂಡಮಾನ್ ಮೂಲನಿವಾಸಿಗಳವರೆಗೂ ಆಯಾ ಪರಿಸರಕ್ಕೆ ತಕ್ಕಂತೆ ಪ್ರಚಲಿತದಲ್ಲಿದೆ. ನಾಗರಿಕ ಪರಿಸರದಿಂದ ದೂರವಿರಬಯಸುವ ಅರಣ್ಯವಾಸಿಗಳು, ಬುಡಕಟ್ಟು ಜನಾಂಗಗಳಲ್ಲಿ ಇಂತಹ ಗಿಡಮೂಲಿಕೆಗಳ ಜ್ಞಾನ ಅತ್ಯಧಿಕವಾಗಿತ್ತು.

ಡಿವಿಜಿಯವರ ಮಗ ಖ್ಯಾತ ಸಸ್ಯಶಾಸ್ತ್ರಜ್ಞ ಬಿಜಿಎಲ್ ಸ್ವಾಮಿಯವರ 'ಹಸಿರು ಹೊನ್ನು' ಪುಸ್ತಕದಲ್ಲಿ ವೆಳತ್ತಪಿಳ್ಳೆ ಹಾಗು ಮರಂದು ಎಂಬ ಇಂತಹ ಪಕ್ಕಾ ಅರಣ್ಯವಾಸಿ ಜ್ಞಾನಿಗಳ ಪಾತ್ರ ಬರುತ್ತದೆ. ಸಸ್ಯ ಸಂಗ್ರಹಣೆ ಹಾಗು ಅಧ್ಯಯನಕ್ಕೆಂದು ಕಾಡಿಗೆ ಬಂದ ವಿದ್ಯಾರ್ಥಿನಿಯೊಬ್ಬಳಿಗೆ ತಲೆನೋವು ಕಾಣಿಸಿಕೊಂಡಾಗ ಯಾವುದೋ ಕಾಡುಮರದ ಎಲೆಯ ಟೊಪ್ಪಿಯನ್ನು ಧರಿಸಲು ಆ ಕಾಡುವಾಸಿ ಸೂಚಿಸುತ್ತಾನೆ. ಇಂದಿಗೂ ಕೂಡ ಸೋಲಿಗರೇ ಮೊದಲಾದ ಅರಣ್ಯವಾಸಿ ಹಾಗು ಬುಡಕಟ್ಟು ಜನಾಂಗದಲ್ಲಿ ಇಂತಹ ಹಳೆಕಾಲದ ಜ್ಞಾನಿಗಳು ಸಿಗುತ್ತಾರೆ.


ಸ್ಥಳೀಯವಾಗಿ ಜನಬಳಕೆಯಲ್ಲಿದ್ದ ಇಂತಹ ಔಷಧಿ ಕ್ರಮಗಳನ್ನು ಚರಕ ಸುಶ್ರುತರಂತವರು ಆ ಕಾಲದಲ್ಲಿ ಶಾಸ್ತ್ರೀಯವಾಗಿ ಅಭ್ಯಸಿಸಿ ಬರೆದಿಟ್ಟು ಅದನ್ನು ಆಯು[illegible] ಎಂದು ಕರೆದರೇ ವಿನಃ ಇದು ನೂರಕ್ಕೆ ನೂರು ಯಾವು[illegible] ಗಟ್ಟಿಯಾಗಿ ಕುಂಡಿಯೂರಿ ತಪಸ್ಸಿಗೆ ಕುಳಿತ ಹಿಮಾಲ[illegible] ಋಷಿಮುನಿಯದ್ದೇ ಕೊಡುಗೆಯೆಂದರೆ ಅದು [illegible] ಅವಾಸ್ತವವಾದೀತು.

ಆಯುರ್ವೇದದ ಅತೀ ಉತ್ಪ್ರೇಕ್ಷಿತ ಪ್ರಚಾರ [illegible] ದೈವಿಕ ಲೇಪನ ರಾಮದೇವ್, ಸಂತೋ[illegible] ಗುರೂಜಿಯಂತವರನ್ನು ಕೋಟ್ಯಾಧೀಶರನ್ನಾಗಿಸಬಹ[illegible] ವಿನಃ ಟೀವಿಗಳಲ್ಲಿ ದಂಡಿಯಾಗಿ ಬರುವ ಇ[illegible] ಅತಿರಂಜಿತ ಅಥವ ಖೊಟ್ಟಿ ಜಾಹೀರಾತುಗ[illegible] ಆಯುರ್ವೇದದ ತಳಗಟ್ಟನ್ನು ಯಾವ ಕಾರಣ[illegible] ಗಟ್ಟಿಗೊಳಿಸಲಾರವು. (ಲಾಭದ ಹಿನ್ನೆಲೆಯಲ್ಲಿ ಬಿಡು[illegible] ಮಾಡಿ ವಿವಾದಕ್ಕೆಡೆಮಾಡಿದ ರಾಮದೇವರ ಪುತ್ರಜೀ[illegible] ಔಷಧಿ ಪ್ರಕರಣ ಗೊತ್ತಲ್ಲ?) ಇಂತಹ ಅತಿರಂಜಿತತೆ[illegible] ಆಯುರ್ವೇದದ ಋಣಾತ್ಮಕ ಅಂಶಗಳನ್ನು ಬೇಕಂ[illegible] ಮರೆಮಾಚುವುದರಿಂದ (ತಮ್ಮ ಔಷಧಿಗಳಲ್ಲಿ ಸ್ಟಿರಾ[illegible] ಬಳಸುವ ಆಯುರ್ವೈದ್ಯ ಪಂಡಿತರೂ ಸಾಕಷ್ಟಿದ್ದಾರೆ) [illegible] ಆ ಶಾಸ್ತ್ರಕ್ಕೆ ಹಿನ್ನೆಡೆಯೇ ವಿನಹ ಉಪಕಾರವನ್ನ[illegible] ಮಾಡದು. ಉದಾಹರಣೆಗೆ ಆಯುರ್ವೇದ ತಿಳಿದ[illegible] ಆಯುರ್ವೇದ ಔಷಧಿಗೂ ಕೂಡ Expiry D[illegible] ಇದೆ ಎನ್ನುವುದನ್ನು ಒಪ್ಪಿಕೊಳ್ಳಹೋಗರು, ವೈನ್ ಹ[illegible] ಕೆಲ ಸಾಂಬಾರು ಪದಾರ್ಥಗಳಂತೆ ಕೆಲ ಹಳೆಯ ವಸ್ತುಗ[illegible] ಅದರದ್ದೇ ಆದ ಬೆಲೆ ಬರುವುದೇನೋ ಹೌದಾದ[illegible] (ಕೆಲ ಮದ್ದಿಗೆ ಹಳೆಯ ಜೇನು ಇತ್ಯಾದಿಗ[illegible] ಬೇಕಾಗಬಹುದು) ಇದ್ದದ್ದನ್ನು ಒಪ್ಪಿಕೊಳ್ಳುವ ಬದ[illegible] ಸಾರಾಸಗಟಾಗಿ ಎಲ್ಲಾ ಆಯುರ್ ಔಷಧಿಗಳೂ ಎಕ್ಸ್[illegible] ಡೇಟ್‌ಗೆ ಅತೀತ ಎಂದರೆ ಅದು ಆ ಶಾಸ್ತ್ರಕ್ಕೇ ಪ[illegible] ತಾನೆ? ಆದೇರೀತಿ ಆಯುರ್ವೇದದಿಂದ ಕ್ಯಾನ್ಸ[illegible] ಏಡ್ಸ್‌ನಂತಹ ಎಲ್ಲಾ ರೋಗಕ್ಕೂ ಪರಿಹಾರವಿದೆಯೆಂ[illegible] ಅದರ ಮಿತಿಗಳನ್ನು ಬದಿಗಿಟ್ಟು ಘೋಷಿಸುವುದು ಕೂ[illegible] ಸರಿಯಾದ ಕ್ರಮವಾಗಲಾರದು. ಅದೇ ರೀತಿ ಯಾವುದೇ[illegible] ಉತ್ಪಾದನೆಗೆ ಯಾವುದೋ ಒಂದು ಸಸ್ಯದ ಅಂಶವ[illegible] ಸೇರಿಸಲಾಗಿದೆ ಎಂದ ತಕ್ಷಣ ಅದನ್ನು 'ಆಯುರ್ವೇ[illegible] ಎಂದು ಲೇಬಲ್ ಮಾಡುವ ಚಾಳಿ ಕೂಡಾ ತಪ್ಪು, ಉ[illegible] ಈ ರೀತಿಯ ಸಾಬೂನುಗಳು, ಶ್ಯಾಂಪು, ಮಾತ್ರೆಗ[illegible] ಇತ್ಯಾದಿ. ಇಂತವನ್ನೆಲ್ಲ ಒಂದುರೀತಿ ಹರ್ಬಲ್ ಪ್ರಾಡ[illegible] ಎನ್ನಬಹುದೇ ವಿನಃ ಏಕಾಏಕಿ ಆಯುರ್ವೇದ ಎನ್ನಲಾಗ[illegible] ಹಾಗೆ ನೋಡಹೋದರೆ ಹೋಮಿಯೋಪತಿ, ಯುನಾ[illegible] ಸಿದ್ಧದಂತಹ ವೈದ್ಯ ಪದ್ಧತಿಗಳೂ ಆಯುರ್ವೇದದಂತೆಯ[illegible] (ಆಯುರ್ವೇದದಲ್ಲಿ ಪ್ರಾಣಿಜನ್ಯ ವಸ್ತುಗಳ ಬಳಕೆಯ[illegible] ಇದೆ) ಬಹುತೇಕ ಸಸ್ಯಾಧಾರಿತವೇ ತಾನೇ?

ವಾತಪಿತ್ತಕಫಗಳ ತತ್ವಾಧಾರದಲ್ಲಿ ಗಿಡಮೂಲಿಕೆ[illegible] ಒಂದು ಬಗೆಯ ಪರಂಪರಾಗತ ವೈದ್ಯಕೀಯ ಪದ್ಧತಿಯ[illegible] ಆಯುರ್ವೇದಕ್ಕೆ ಅದಕ್ಕೇ ಆದ ಸಿದ್ಧಾಂತಗಳಿದೆ. ಕೆಲದಶಕ[illegible] ಹಿಂದೆ ಭಾರತದ ನೆಲದಲ್ಲಿ ಕಳೆಯಂತೆ ಹಬ್ಬಿ ಹಂಚಿಹೋ[illegible] ಕಮ್ಯುನಿಸ್ಟ್ (ಯುಫಟೋರಿಯಮ್) ಹಾಗು ಲಂಟಾ[illegible] ಗಿಡಗಳಿಂದಲೂ ಹಳ್ಳಿಯ ಮಂದಿ ತಮ್ಮದೇ [illegible] ಔಷಧಿಯನ್ನು ಕಂಡುಕೊಂಡಿದ್ದಾರೆ (ಗಾಯಕ್ಕೆ ಕಮ್ಯುನಿ[illegible] ಗಿಡದ ರಸವನ್ನು ಹಳ್ಳಿಗಳಲ್ಲಿ ಹಚ್ಚುತ್ತಾರೆ).

ನಮ್ಮ ದೇಶಕ್ಕೆ ಇತ್ತೀಚೆಗೆ ಕಾಲಿಟ್ಟ ಡೆಂಗ್ಯು ಕಾಯಿ[illegible] ಪಪ್ಪಾಯದ ಎಲೆ ರಸವನ್ನು (ಪಪ್ಪಾಯವೂ ನಮ್ಮ ದೇ[illegible] ಸಸ್ಯವಲ್ಲ; ಅದೊಂದು 'ಪರಂಗಿ' ಸಸ್ಯ) ಬಳಸಲಾಗುತ್ತಿ[illegible] ಯಾವ ಹಿಮಾಲಯನ್ ಋಷಿಯೂ ಹೇಳಿಲ್ಲದ ಇತ್ತೀಚಿ[illegible] ಈ ಹಳ್ಳಿ ಮದ್ದು ಅಥವ ಸಸ್ಯಜನ್ಯ ಔಷಧಿಯನ್ನೂ ಕೆಲವ[illegible] ಆಯುರ್ವೇದ ಎನ್ನುವುದುಂಟು. ಒಟ್ಟಾರೆ ಅನುಕೂಲ[illegible] ತಕ್ಕಂತೆ ಆಯುರ್ವೇದ. ಢೋಂಗಿಗಳಿಗೆ ಮಾತ್ರ ಕಾಸೋ ಕಾಸು.

■ ಆರ್.ಎಸ್.ಪಿ, ಮಂಗಳೂರ[illegible]




ಆಯುರ್ವೇದ ಖೊಟ್ಟಿ ಔಷಧಿಗಳ ವಂಚಕರು

ಅನುಪಸ್ಥಿತಿಯಲ್ಲೂ ಹಾಜರಿರುವ ಕವಯಿತ್ರಿ–ಸಾರಾ ಶಗುಫ್ತಾ

ಪುಸ್ತಕ ಪರಿಚಯ

'ಒಲೆ ನಮಗೆ ಉಣ್ಣಲು ಒಂದು ರೊಟ್ಟಿ ನೀಡುವ ...ಯಲ್ಲಿರಲಿಲ್ಲ. ನಮ್ಮ ಮನೆಯೊಳಗಿನ ಬೆಂಕಿಯ ತೀವ್ರತೆ ...ತ್ರ ಹೆಚ್ಚಾಗಿತ್ತು'... 'ತಂಗಳು ತುಣುಕುಗಳಿಗಾಗಿ ...ತರವಾಗಿ ಚಡಪಡಿಸುವ ಇಲಿಯಂತೆ ನಾನು ಅಡುಗೆ ...ಯ ಒಂದೊಂದು ದಬ್ಬಿಯನ್ನು ತಡಕಾಡಿದೆ'... ಹೀಗೆ ...ತ ಕಡುಬಡತನ ಮತ್ತು ಬದುಕಿನ ಕ್ರೌರ್ಯಗಳ ...ವೆ ಜರ್ಜರಿತಳಾಗಿಯೂ ಬೆಚ್ಚಗೆ ಎದೆಗಿಳಿಯುವ ...ಗಳನ್ನು ರಚಿಸಿದ ಪಾಕಿಸ್ತಾನಿ ಕವಯತ್ರಿ ಸಾರಾ ಶಗುಫ್ತಾರ ...ವನ ಮತ್ತು ಕಾವ್ಯವನ್ನು ಕುರಿತು ಪರಿಚಯಿಸಿಕೊಡುವಲ್ಲಿ ...ಅವರ ಜೀವದ ಗೆಳತಿ ಅಮೃತಾ ಪ್ರೀತಂ ಮೂಲ ...ಕಿಯಾಗಿ ಗೆದ್ದಿದ್ದರೆ, ಆ ಕೃತಿಯನ್ನು ಅತ್ಯಂತ ಎಚ್ಚರದಿಂದ ...ಡಕ್ಕೆ ತರುವಲ್ಲಿ ಅನುವಾದಕ ಹಸನ್ ನಯೀಂ ...ಕೋಡರು ಗೆದ್ದಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅನುವಾದ ...ಮೂಲ ಲೇಖಕರನ್ನು ಗ್ರಹಿಸುವಲ್ಲಿ ಗೊಂದಲಗಳನ್ನು ...ಸುವದೂ ಇದೆ. ಆಗ ಓದುಗನಿಗೆ ಇನ್ನಷ್ಟು ರೇಜಿಗೆಯಾ...ತ್ತದೆ. ಸಾರಾ ಶಗುಫ್ತಾರ ಅನುವಾದ ಮಾತ್ರ ಹಾಗಿಲ್ಲ, ...ಬಾ ಚೆನ್ನಾಗಿದೆ. ಹೆಣ್ಣಿನ ಕಷ್ಟಕೋಟಲೆಗಳನ್ನು ಈ ...ರಾ ಶಗುಫ್ತಾಳನ್ನು' ಇಟ್ಟುಕೊಂಡು ಗ್ರಹಿಸಬಹುದೇನೋ ...ವ ಹಾಗೆ ಈ ಕವಯಿತ್ರಿಯ ಬದುಕಿನ ಬವಣೆಗಳಿವೆ. ...ಯು ಮಾಯದಂತಹ ಪೆಟ್ಟುಗಳಿವೆ. (ದೈಹಿಕ ಪೆಟ್ಟೂ ...ಥವಾ ಮಾನಸಿಕ ಪೆಟ್ಟೂ ಹೌದು.)

1970-80 ರ ದಶಕದಲ್ಲಿ ಅದೂ ಪಾಕಿಸ್ತಾನದ ...ದಲ್ಲಿ ನಿಂತು ಓರ್ವ ಮಹಿಳೆ ಪ್ರಗತಿಪರಳಾಗಿ ಕಾವ್ಯ ...ಟ್ಟುವುದು ಸಾಮಾನ್ಯ ಸಾಹಸವಲ್ಲ. 'ಆಕೆ ಬರೆಯುವು...ದೆಲ್ಲವೂ ಅಶ್ಲೀಲ, ಹೀಗಾಗಿಯೇ ಆಕೆಯ ಬರವಣಿಗೆ ...ನಿಷ್ಕ್ರಿಯ' ಎಂದು ಮೂದಲಿಸುವವರ ನಡುವಿದ್ದು ...ಮಾಡುವ ಮೂದಲಿಕೆಯ ಮಾತು ಕೇಳಿಯೂಕೇಳದಂತೆ ...ರದು ಬದುಕಿದ ದಿಟ್ಟ ಮಹಿಳೆ ಸಾರಾ ಶಗುಫ್ತಾ ಕೇವಲ ...ನೇ ವಯಸ್ಸಿನಲ್ಲಿಯೇ ವೈವಾಹಿಕ ಜೀವನಕ್ಕೆ ಧುಮುಕಿದ ...ರಾ ಪಡಬಾರದ ಕಿರಿಕಿರಿಗಳನ್ನು ವೈವಾಹಿಕ ಜೀವನದಲ್ಲಿ ...ನುಭವಿಸಬೇಕಾಗಿ ಬಂತು. ಮೊದಲನೆಯ ಗಂಡನ ...ಕ್ಕಲುತನಕ್ಕೆ ರೋಸಿ ಅವನನ್ನು ಬಿಟ್ಟು ಇನ್ನೊಂದು ...ಮದುವೆಯಾದರೆ ಅವನು ಅವನಿಗಿಂತಲೂ ಹೆಚ್ಚು ತಿಕ್ಕಲು. ...ಮೂರನೆಯವನು ಕೂಡಾ ಹಾಗೆಯೇ. ಕಡೆಗೂ ಆಕೆ ಈ ...ಗಂಡಿನ ಜಾತಿಯೇ ಹೀಗೆ ಎನ್ನುವ ನಿರ್ಧಾರಕ್ಕೆ ಬರುವಷ್ಟರಲ್ಲಿ ...ಅನೇಕ ಬಗೆಯ ಹುಸಿ ಆಪಾದನೆಗಳನ್ನು ಹೊತ್ತು, ಹುಚ್ಚಿ ...ಎಂದು ಆಸ್ಪತ್ರೆಗೆ ಅಟ್ಟಿಸಿಕೊಂಡು, 21 ಬಾರಿ ಇಲೆಕ್ಟ್ರಿಕ್ ...ಶಾಕ್ ಕೊಟ್ಟು ಹಿಂಸಿಸಿದರೂ ಆಕೆ ಆ ಸಂದರ್ಭದಲ್ಲಿ ...ಆಸ್ಪತ್ರೆಯ ಒಳಗಿರುವ ಕೆಲವು ಹುಚ್ಚಿಯರ ಮಾತು ...ವರ್ತನೆಗಳನ್ನು ದಾಖಲೆ ಮಾಡುವತ್ತ ತೊಡಗುವ ಕ್ರಮ ...ಸಾಮಾನ್ಯವಲ್ಲ. ತನ್ನ ಒಡಲ ಕುಡಿಗಳಿಗಾಗಿ ಕಿರಾತಕ ಗಂಡನ ...ಅನುಮತಿಯಂತೆ ವಿಚ್ಛೇದನ ಪಡೆಯುವಾಗ ತಾನು ...ಅನೀತಿಗೆಟ್ಟವಳು ಎಂದು ನ್ಯಾಯಾಲಯದಲ್ಲಿ ಹೇಳಿರುವುದು ...ಮಾತ್ರವಲ್ಲ, ಈ ಮಕ್ಕಳು ಇವನ ಸಂತಾನವಲ್ಲ ಇನ್ನೊಬ್ಬನಿಗೆ



ಪಾಕಿಸ್ತಾನಿ ಕವಯಿತ್ರಿ

ಸಾರಾ ಶಗುಫ್ತಾ

ಜೀವನ ಮತ್ತು ಕಾವ್ಯ

ಮೂಲ- ಅಮೃತಾ ಪ್ರೀತಮ್

ಅನುವಾದ- ಹಸನ್ ನಯೀಂ ಸುರಕೋಡ

ಲಡಾಯಿ ಪ್ರಕಾಶನ ಗದಗ

ಪುಟ-230, ಬೆಲೆ: 150 ರೂ.

ಜನಿಸಿದವುಗಳು ಎಂದು ಹೇಳುವ ಮೂಲಕ ಮಕ್ಕಳನ್ನು ತನ್ನ ಬಳಿ ತೆಗೆದುಕೊಂಡಳಾದರೂ ಆ ಖುಷಿ ತಾತ್ಕಾಲಿಕವಾಗಿತ್ತು. ತನ್ನದೇ ಸಂತಾನವನ್ನು ಕೋಣೆಯೊಳಗೆ ಕರೆದೊಯ್ದು 'ಮಗು ನನ್ನನ್ನು ಒಂದೇ ಒಂದು ಬಾರಿ ಅಮ್ಮಾ ಎಂದು ಕೂಗು' ಎಂದಾಗ ಆ ಮಗು ಮೌನ ವಹಿಸಿದ್ದು ಶಗುಫ್ತಾಳ ಮನಸಿನ ಮೇಲೆ ಎಂಥಾ ಆಘಾತವನ್ನು ಉಂಟು ಮಾಡಿರಬಹುದು? ಮೂವರೂ ಗಂಡಂದಿರು ಸಂಶಯ ಪ್ರವೃತ್ತಿಯವರೇ. ನಿನಗೆ ಎಷ್ಟು ಪ್ರೇಮಪತ್ರಗಳು ಬರುತ್ತವೆ ಎಂದು ಕೇಳುವ ಮೂಲಕ ಅವಳನ್ನು ನೋಯಿಸಿದವರೇ. ಇದರಲ್ಲಿ ಒಂದು ಮದುವೆ ತನ್ನ ತಾಯಿಯ ಒತ್ತಾಯದ ಕಾರಣಕ್ಕೆ ಆದದ್ದು. ಆಕೆಯ ತಾಯಿ ರೋಗಗ್ರಸ್ತ ಸ್ಥಿತಿಯಲ್ಲಿರುವಾಗ 'ನೀನು ಮದುವೆಯಾದರೆ ಈ ರೋಗ ವಾಸಿಯಾಗುತ್ತದೆ' ಎಂದಾಗ ಅನಿವಾರ್ಯವಾಗಿ ಆಕೆ ಆ ಮದುವೆಗೆ ಸಮ್ಮತಿಸುತ್ತಾಳೆ. ಅವನೋ ಜಮೀನ್ದಾರ, ಸಾಕಷ್ಟು ಸ್ಥಿತಿವಂತ. ಆತನ ಸಹೋದರ ಒಮ್ಮೆ 'ಭಾಬಿ, ನೀನು ಬರೀ ಬರುವಾಗ ಹತ್ತು ಪುಸ್ತಕಗಳನ್ನು ತಂದೆ. ವರದಕ್ಷಿಣೆ ತರುವದು ಯಾವಾಗ?' ಎಂದು ಕೇಳುವ ರೀತಿಗೆ ಆಕೆ ಕುಗ್ಗಿ ಹೋಗುತ್ತಾಳೆ.

ಸಾರಾ ಶಗುಫ್ತಾಳ ಬರವಣಿಗೆಯನ್ನು ಆ ದಿನಗಳಲ್ಲಿ ಪಾಕಿಸ್ತಾನದ ಯಾವ ಪತ್ರಿಕೆಗಳೂ ಪ್ರಕಟಿಸದೇ ಇದ್ದಾಗ ಅಮೃತಾ ಪ್ರೀತಂ ಅವುಗಳನ್ನು ಭಾರತದ ಪತ್ರಿಕೆಗಳಲ್ಲಿ ಪ್ರಕಟಿಸಲು ನೆರವಾಗಲು ಸಾರಾ ಅವುಗಳ ಒಂದು ಪ್ರತಿಯನ್ನು ಕಳುಹಿಸುತ್ತಿದ್ದಳು. ಆಗ ಸಾರಾ ಅಪಾರ ಖುಷಿ ಪಡುವ ಜೊತೆಗೆ ಅಮೃತಾಳನ್ನು ಕೊಂಡಾಡಿ ಪತ್ರ ಬರೆಯುವುದಿತ್ತು. ಆಕೆಯ ಕುರಿತು ಪುಸ್ತಕ ಪ್ರಕಟಣೆಗೆ ಅಮೃತಾ ಮುಂದಾದಾಗ ತನ್ನ ಇಡೀ ಬದುಕಿನ ಸಾರ್ಥಕತೆಯೇ ಕೈಗೂಡಿದ ಸಂತಸ ಸಾರಾ ಪಟ್ಟಳು. ಸಾರಾ ತನ್ನ ಪುಸ್ತಕ ಪ್ರಕಟಣೆಗೆಂದು ನೀಡಿದ ಐದು ಸಾವಿರ ರೂಪಾಯಿ ಹಣವೂ ಮರಳಿ ಬರಲಿಲ್ಲ, ಪುಸ್ತಕವೂ ಮುದ್ರಣವಾಗಲಿಲ್ಲ, ಆಗ ಅಮೃತಾ ಆಕೆಯ ಕೃತಿ ಪ್ರಕಟಣೆಗೆ ಮುಂದಾದಳು. ಅದನ್ನು ಆಕೆಗೆ ತಲುಪಿಸಿದಳು. ತಾನೆಂದೂ ಬಂಧಿಯಾಗಿ ಬದುಕಲಾರೆ ಎನ್ನುತ್ತಿದ್ದ ಸಾರಾ ಆಸ್ಪತ್ರೆಯಲ್ಲಿ ಮತ್ತು ಜೈಲಿನಲ್ಲಿ ಬಂಧಿಯಾಗಿಯೇ ಉಳಿಯಬೇಕಾಯಿತು. ಈ ಎರಡೂ ಬಂಧನಗಳಿಗಿಂತಲೂ ಭೀಕರವಾದದ್ದು ಆಕೆಯ ಗಂಡ ಮತ್ತು ಸಂಬಂಧಿಗಳು ಆಕೆಯ ಮೇಲೆ ವಿಧಿಸಿದ ಬಂಧನ. ಸಾರಾ ಅನುಭವಿಸಿದ ಹಿಂಸೆ ಅಂತಿಂಥದ್ದಲ್ಲ, ಆಕೆಯ ಮೇಲೆ ಗುಂಡು ಹಾರಿಸಲಾಯಿತು. ಚಾಕುವಿನಿಂದ ಇರಿಯುವ ಯತ್ನ ಮಾಡಲಾಯಿತು. ರಕ್ತ ಹೆಪ್ಪುಗಟ್ಟುವಂತೆ ಹೊಡೆಯುವ, ಬಡಿಯುವ, ಕ್ರೂರಪ್ರಾಣಿಗಳಂತೆ ಮೇಲೆರಗಿ ಕಿತ್ತು ತಿನ್ನುವಂತೆ ಮಾಡಿದ ಘಟನೆಗಳು ಹತ್ತಾರು. ಈ ಎಲ್ಲ ಭೀಭತ್ಸ ಘಟನೆಗಳ ಜೊತೆಗೆ ಸಮಾಜದ ಮೂದಲಿಕೆಯ ಮಾತುಗಳು. ಸುಖಾಸುಮ್ಮನೇ ಆಕೆಗೆ ಹುಚ್ಚಿಯ ಪಟ್ಟವನ್ನು ಕಟ್ಟಿ ಆಸ್ಪತ್ರೆಗೆ ನೂಕಲಾಯಿತು. ಜೀವನ ನರಕಯಾತನೆಯಾದ ಸಂದರ್ಭದಲ್ಲಿ ಅನೇಕ ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿ ವಿಫಲಳಾಗಿ ಕೊನೆಗೊಮ್ಮೆ ಚಲಿಸುವ ರೈಲಿನ ಮುಂದೆ ಧುಮುಕಿ ಆತ್ಮಹತ್ಯೆ ಮಾಡಿಕೊಂಡಳು. ಆಗ ಅವಳಿಗಿನ್ನೂ ಮೂವತ್ತು ತುಂಬಿರಲಿಲ್ಲ. ಸಾರಾಳ ಬದುಕಿನ ಕೊನೆಯ ದಿನಗಳು ಹತ್ತಿರವಾಗುವಾಗ ಸೈಯದ್ ಎನ್ನುವ ಗೆಳೆಯನ ಬಗ್ಗೆ ಆಕೆ ಅಪಾರವಾದ ಪ್ರೀತಿಯನ್ನು ತೋರ್ಪಡಿಸಿರುವುದು ಆಕೆಯ ಪತ್ರಗಳಲ್ಲಿ ವ್ಯಕ್ತವಾಗುತ್ತದೆ. ಸೈಯದ್ ತೋರಿದ ಪ್ರೀತಿ ಮಾತ್ರ ನಿಜವಾದ ಪ್ರೀತಿ ಎನ್ನುವ ಹಾಗೆ ಸಾರಾ ಬರೆದುಕೊಂಡಿರುವುದಿದೆ. 'ನೀವು ನನ್ನ ಮೇಲೆ ಸುರಿಸಿರುವಷ್ಟು ಪ್ರೀತಿ, ಸಂತೋಷ ಮತ್ತು ಗೌರವವನ್ನು ನನ್ನ ಜೀವನದಲ್ಲಿ ಬೇರೆ ಯಾರೂ ಸುರಿಸಿಲ್ಲ, ಇಡೀ ಲೋಕದಲ್ಲಿ ಸಾರಾಳನ್ನು ಅರ್ಥಮಾಡಿಕೊಂಡ ಏಕೈಕ ವ್ಯಕ್ತಿ ನೀವೇ.. ನಿಮ್ಮ ಜತೆ ಕಳೆದ ಕೆಲವೇ ದಿನಗಳು ಕೋಟ್ಯಂತರ ದಿನಗಳಿಗೆ ಸಮ' ಎನ್ನುತ್ತಾಳೆ.

ಹೀಗೆ ಸಾರಾ ಸೈಯದ್‌ರಲ್ಲಿ ದೇವರನ್ನು ಕಾಣುತ್ತಾಳೆ. ಒಂದು ಪತ್ರದಲ್ಲಿ ತನ್ನ ಹೆಸರಿನೊಂದಿಗೆ 'ಸಾರಾ ಸೈಯದ್' ಎಂದು ಹಾಕಿಕೊಳ್ಳುವ ಮೂಲಕ ತನ್ನ ಮನದಾಳವನ್ನು ಹೊರಹಾಕಿದ್ದಾಳೆ. ಹೀಗೆ ಈ ಕೃತಿ ಸಾರಾ ಶಗುಫ್ತಾಳ ಜೀವನ ಮತ್ತು ಕಾವ್ಯವನ್ನು ಆಪ್ತವಾಗಿ ಪರಿಚಯಿಸುತ್ತದೆ. ಇದರಲ್ಲಿ ಆಕೆ ಗೆಳತಿ ಅಮೃತಾರಿಗೆ ಬರೆದ ಪತ್ರಗಳ ಜೊತೆಯಲ್ಲಿ ಇತರೆ ಕೆಲವು ಪತ್ರಗಳೂ ಇವೆ. ಸಾರಾ ಅಪಾರ ಪ್ರಮಾಣದ ನಿರ್ಬಂಧಗಳಿರುವ ಸಮುದಾಯದ ನಡುವೆ ಒಂದು ದಂತಕಥೆಯಾಗಿ ಬದುಕಿದಳು. ಕೇವಲ ತನ್ನ 30 ವರ್ಷದ ಜೀವಿತ ಅವಧಿಯಲ್ಲಿ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರವಾಗಿ ಉಳಿಯಬಹುದಾದ ಅರ್ಹತೆಯನ್ನು ಹೊಂದಿರುವ ಕವಯತ್ರಿ.

'ಇಡೀ ಹುಚ್ಚರ ಕುಲವೇ ಗರ್ಭಿಣಿಯಾಗಿಸಿದೆ ನನ್ನನ್ನು
ಹಿಡಿದಿಡಲಾರವು ನನ್ನನ್ನು ಸೆರೆಮನೆಯ ಸರಳು
ನಿಷೇಧಿತ ದ್ವಾರದ ಮೇಲೆ ತೆರೆದಿವೆ ಬೇಗದ ಕಣ್ಣು
ಸಂಕೋಲೆಗಳಲ್ಲಿ ಬಂಧಿಯಾದ ಒಂದು ಹೆಣ್ಣು
ಅಚ್ಚರಿಯಿಂದ ಕಣ್ಣೆತ್ತಿ ನೋಡುತ್ತಾಳೆ ನನ್ನನ್ನು
ಇನ್ನೊಬ್ಬಳು ಬಯಲಲ್ಲಿ ನೆಟ್ಟಿದ್ದಾಳೆ ತನ್ನ ಕಣ್ಣು
ಕಾಲ ಸರಿಯುತ್ತಿದೆ ಮೂರನೆಯವಳ ಕೈ ಗಡಿಯಾರದಲ್ಲಿ
ಏನಾಗಿದೆ ಇವರಿಗೆಲ್ಲ..?
ಮಾಂಸದಿಂದ ದೂರವಾಗಿದೆ ಗೌರವ
ಇಲ್ಲಿ ಕೇಳಿಬರುತಿದೆ ಕುಣಿತದ ಸದ್ದು
ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ'

ಹೀಗೆ ಸಾರಾಳ ಯಾವುದೇ ಕವನ ಕೇವಲ ಅವಳ ನೋವಿಗಷ್ಟೇ ಸೀಮಿತಗೊಳ್ಳುವುದಿಲ್ಲ. ಅದು ಜೀವ ಹಿಂಡುವ ಸಂಕೋಲೆಗಳನ್ನು ತೊಟ್ಟಿರುವ, ಈ ಲೋಕದಿಂದ ಭ್ರಮನಿರಸನಗೊಂಡಿರುವ ಬೇರೆ ಹೆಂಗಳೆಯರ ದುಃಖ, ನತದೃಷ್ಟರ ನೋವಿಗೆ ಸ್ಪಂದಿಸುತ್ತದೆ. ಸಾರಾಳ ನೋವು, ಸಂಕಟ ಇಡೀ ಮಹಿಳಾ ಸಂಕುಲಕ್ಕೆ ಸಾರ್ವತ್ರಿಕ. ಹೆತ್ತ ತಂದೆ, ಒಡಹುಟ್ಟಿದ ಸಹೋದರ, ಕೈಹಿಡಿದ ಗಂಡ, ಬದುಕಿರುವ ಸಮುದಾಯ ಇವರೇ ಅವಳನ್ನು ಶೋಷಿಸುವ, ಹಿಂಸಿಸುವ, ಹಿಯಾಳಿಸುವ ಕ್ರಿಯೆಗೆ ಇಳಿಯುವುದಿದೆ. ಲಿಯೊನಿಯರ್ ಮಿಲ್ಲರ್ ಎನ್ನುವವರು ಬರೆದ 'ಸ್ಟ್ರೀಟ್ ವುಮನ್' ಎನ್ನುವ ಕೃತಿ ಈ ಸಂದರ್ಭದಲ್ಲಿ ನೆನಪಾಗುತ್ತದೆ. 'ಸಾರಾ ಶಗುಫ್ತಾ' ಒಂದು ಒಳ್ಳೆಯ ಅನುವಾದ ಮತ್ತು ಒಳ್ಳೆಯ ಓದು. ಈ ಕೃತಿ ಸುರಕೋಡರನ್ನು ಉತ್ತಮ ಅನುವಾದಕ ಎಂದು ಮತ್ತೊಮ್ಮೆ ಸಾಬೀತುಮಾಡಿದೆ.

■ ಡಾ.ಎಸ್.ಬಿ.ಜೋಗುರ

ಪತ್ರಕರ್ತರನ್ನು ಕೊಲ್ಲಲಿರುವ...

13⇦

...ಜನರು ಗ್ರಾಮೀಣ ಪ್ರದೇಶದಿಂದ ಹೋಗಿ ಮೂರನೇ ...ಂದು ಭಾಗದಷ್ಟು ಪ್ರಮಾಣ ನಗರದಲ್ಲಿ ನೆಲೆಸಿದ ನಂತರ ...ಗ್ರಾಮೀಣ ಭಾರತದ ಜನರ ದೈತ್ಯಾಕಾರದ ಪರಿವರ್ತನೆಯ ...ಕುರಿತು ದಾಖಲಿಸಲು (ಪರಿ) ಆ ಕಡೆ ಭೇಟಿ ನೀಡುತ್ತಿದ್ದೆ. ...ನಾನು ಯಾವಾಗ ಹೋದರೂ ಜನರು ಕೇಳುತ್ತಿದ್ದದ್ದು "...ನಿಮ್ಮ ಆದಾಯದ ಮೂಲವೇನು?" ಎಂದು. ಆ ರೀತಿಯ ...ಆದಾಯದ ಮೂಲವೆಂದೇನೂ ಇಲ್ಲ ಆದರೆ ಈ ...ರೀತಿಯಾಗಿ ಆದಾಯದ ಮೂಲ ಇರಲೇಬೇಕಾಗಿದ್ದರೆ ...ಬರಹ ಅಥವಾ ಸಾಹಿತ್ಯದ ರಚನೆ ಸುಲಭವಿಲ್ಲ ಎಂದು ...ಅವರಿಗೆ ಹೇಳಿದೆ.

ಅಲ್ಲದೇ ಒಂದುವೇಳೆ ವಾಲ್ಮೀಕಿಯು ರಾಮಾಯಣ ...ರೆಯುವ ಮೊದಲು ಅಥವಾ ಶೇಕ್ಸ್‌ಪಿಯರ್ ...ನಾಟಕಗಳನ್ನು ಬರೆಯುವ ಮೊದಲು ಆದಾಯದ ಸ್ವರೂಪದ ...ಕುರಿತು ಒಪ್ಪಿಗೆ ಪಡೆಯಬೇಕಾಗಿದ್ದರೆ ಸನ್ನಿವೇಶ ಹೇಗಿರುತ್ತಿತ್ತು? ...ಜೊತೆಗೆ ನನ್ನ ಆದಾಯದ ಸ್ವರೂಪದ ಬಗ್ಗೆ ಕೇಳಿದವರಿಗೆ ...ನಾನು "ನನಗೊಬ್ಬ ಗೊತ್ತು, ಆತ ನಲವತ್ತು ವರ್ಷದಿಂದ ...ಆದಾಯ ಗಳಿಸುವ ಮಾರ್ಗ ಕಂಡುಕೊಂಡಿದ್ದಾನೆ. ಅವನು ...ಹೆಸರು ವೀರಪ್ಪನ್" ಎಂದು ಹೇಳಿ, ಅವನು ಸಾಕಷ್ಟು ...ತೊಂದರೆ ತೆಗೆದುಕೊಂಡು ಆದಾಯ ಗಳಿಸುತ್ತಿದ್ದ ಅಲ್ಲದೇ ...ದಿನ ಜಗತ್ತಿನಲ್ಲಿ ತೊಂದರೆಯಿಲ್ಲದೇ ಆದಾಯ ಗಳಿಸುವ ...ಸಾಧ್ಯತೆ ಯಾವುದಿದೆ ಹೇಳಿ ಎಂದು ಕೇಳುತ್ತಿದ್ದೆ.

ಈ ಜೊತೆಗೆ ಹೇಳಬಹುದಾದರೆ ಗೋಮಾಂಸ ಬಳಕೆ ...ನಿಷೇಧದ ಕುರಿತಾಗಿ ಟೈಮ್ಸ್ ಆಫ್ ಇಂಡಿಯಾ ಒಂದನ್ನು ...ಹೊರತುಪಡಿಸಿ ಯಾವ ದಿನ ಪತ್ರಿಕೆಗಳೂ ನಿರೀಕ್ಷಿತ ...ಮಟ್ಟಕ್ಕೆ ಪರಿಣಾಮಕಾರಿ ವರದಿಗಳನ್ನು ಮಾಡಲೇ ಇಲ್ಲ. ಈ ನಿಷೇಧ ಪ್ರಕ್ರಿಯೆಯು ಮುಸ್ಲಿಮರ ನಾಶ, ದಲಿತರ ಹಿತಾಸಕ್ತಿಯ ನಾಶ ಮತ್ತು ಕೊಲ್ಲಾಪುರದ ಚಪ್ಪಲಿ ಕೈಗಾರಿಕೆ ಮತ್ತು ಹಸುವಿನ ವ್ಯಾಪಾರವನ್ನು ನಡೆಸುತ್ತಿರುವ ಹಿಂದುಳಿದ ವರ್ಗಗಳ ಹಿತಾಸಕ್ತಿಯ ನಾಶದ ಗುರಿಯನ್ನು ಹೊಂದಿದ್ದು ಗ್ರಾಮೀಣ ವಿಭಾಗದ ಬದುಕನ್ನು ಆತಂಕಕ್ಕೆ ಒಳಪಡಿಸಿದೆ.

ನಮ್ಮಲ್ಲಿ ಕೃಷಿ ಮತ್ತು ಹಸುವಿನ ಪ್ರಾಮುಖ್ಯತೆ ಅರಿಯದೆ ಇದ್ದರೂ ಸಹ ನಮ್ಮ ನಗರಪ್ರದೇಶದ, ಮಾಧ್ಯಮ ತಳವರ್ಗ ಮತ್ತು ಉನ್ನತ ತಳವರ್ಗದ ಜನರು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ನಮ್ಮ ಮಾಧ್ಯಮದವರು ಗೋವಿಂದ ಪನ್ಸಾರೆ, ನರೇಂದ್ರ ದಾಬೋಲ್ಕರ್ ಮತ್ತು ಕಲ್ಬುರ್ಗಿ ಅವರ ಹತ್ಯೆಯ ಕುರಿತಾಗಿ ಎಂದಾದರೂ ಗಂಭೀರವಾದ ತನಿಖೆ ಮಾಡಿದ್ದಾರೆಯೇ? ಈ ಬಗ್ಗೆ ನ್ಯಾಯಾಲಯವು ಪೊಲೀಸ್ ಇಲಾಖೆ ಮತ್ತು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರೂ ಸಹ ಏನೂ ಮಾಡದೇ ನಿಷ್ಕ್ರಿಯರಂತೆ ಸುಮ್ಮನಿರುವ ಕಾರಣವೇನು?

ಈ ಮೂವರನ್ನು ಒಂದೇ ರೀತಿಯಲ್ಲಿ ಮೂವರು ಯುವಕರು ಮೋಟಾರ್ ಬೈಕ್‌ನಲ್ಲಿ ಬಂದು ಹತ್ಯೆಗೈದಿದ್ದಾರೆ. ಅಲ್ಲದೇ ಗುಜರಾತಿನಲ್ಲೂ ಹರೇನ್ ಪಾಂಡ್ಯ ಎಂಬುವರ ಹತ್ಯೆ ಇದೆ ಮಾದರಿಯಲ್ಲಿ ನಡೆದಿದೆ. ಹೀಗಿದ್ದಾಗ ಹಿಂದಿನ ಸರ್ಕಾರಗಳಿಗೂ ಈಗಿನ ಬಿಜೆಪಿ ಆಡಳಿತಕ್ಕೂ ಏನೂ ವ್ಯತ್ಯಾಸಗಳಿಲ್ಲ ಎಂದು ಹೇಳುವುದು ಹೇಗೆ? ನನ್ನ ಪ್ರಕಾರ ನಮ್ಮ ದೇಶದ ರಾಜಕೀಯ ಇತಿಹಾಸದಲ್ಲೇ ಇಂತಹದ್ದು ನಡೆದಿರುವುದು ಇದೇ ಮೊದಲಾಗಿದ್ದು, ಈ ದುಷ್ಟ ಕೃತ್ಯವು ಮೊಟ್ಟ ಮೊದಲಬಾರಿಗೆ ಬಹುಮತ ಪಡೆದ ಆರ್‌ಎಸ್‌ಎಸ್ ಪ್ರಚಾರಕ ಪ್ರಧಾನಿಯು ಅವಧಿಯಲ್ಲಿ ಜರುಗಿದ



ಘಟನೆಯಾಗಿದೆ.

ಈ ಮೊದಲೂ ಆರ್‌ಎಸ್‌ಎಸ್‌ನ ಒಬ್ಬ ಪ್ರಚಾರಕ ಪ್ರಧಾನಿಯಿದ್ದರೂ ಕೂಡಾ ಆತ ಬಹುಮತವಿಲ್ಲದ ಮತ್ತು 40 ವರ್ಷಗಳ ರಾಜಕೀಯ ಜೀವನದಿಂದ ಮೆತ್ತಗಾಗಿದ್ದ. ಆದರೆ ಈಗ ಬಹುಮತ ಪಡೆದ ಆರ್‌ಎಸ್‌ಎಸ್‌ನ ಪ್ರಚಾರಕ ಪ್ರಧಾನಿ ಆದ ಸಂದರ್ಭದಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ದುರದೃಷ್ಟಕ್ಕೆ ಈ ಬದಲಾವಣೆ ಯಾವುದೇ ರೀತಿಯಲ್ಲಿಯೂ ಸಾಮಾನ್ಯ ಜನಪರವಾಗಿ ಜೀವಪರವಾಗಿ ಖಂಡಿತಾ ಇಲ್ಲ. ಇದರಲ್ಲಿ ಮಾಧ್ಯಮದ ಪಾತ್ರವೂ ಬಹಳಷ್ಟಿದೆ. ನನಗೆ ಇನ್ನಷ್ಟು ಬಲವಾಗಿ ಅನ್ನಿಸುವುದು ನಮ್ಮ ದೇಶವು ಇಂದು ಸಾಮಾಜಿಕ-ಧಾರ್ಮಿಕ ಮೂಲಭೂತವಾದಿಗಳು ಮತ್ತು ಆರ್ಥಿಕ ಮೂಲಭೂತವಾದಿಗಳಿಂದ ಆಳಲ್ಪಡುತ್ತಿದ್ದು ಇವರಿಬ್ಬರಿಗೂ ಅನ್ಯೋನ್ಯವಾದ ನಂಟು ಇದೆ ಎಂಬುದು.

ಈ ಕುರಿತು ನಾವು ಏನು ಮಾಡಬಹುದು? ಕಾನೂನು, ಶಾಸಕಾಂಗ ಮತ್ತು ಜನಪ್ರಿಯ ಚಳವಳಿಗಳ ಮುಖಾಂತರ ಮಾಧ್ಯಮವನ್ನು ಪ್ರಜಾಪ್ರಭುತ್ವೀಕರಣಗೊಳಿಸಲು ಅತ್ಯಂತ ಗಂಭೀರವಾಗಿ ಹೋರಾಟ ನಡೆಸುವುದು. ಅಲ್ಲದೇ ಸಾಹಿತ್ಯ ಪತ್ರಿಕೋದ್ಯಮ, ಕಥೆಹೇಳುವಿಕೆಯು ಕಾರ್ಪೋರೇಟ್ ವ್ಯವಸ್ಥೆಯ ಹೂಡಿಕೆಯಿಂದಲ್ಲ, ಅವು ಸಮುದಾಯ, ಜನತೆ ಮತ್ತು ಸಮಾಜದ ಕಾರಣಕ್ಕಾಗಿ ರೂಪುಗೊಂಡಿವೆ ಎನ್ನುವುದನ್ನು ಸಾಧಿಸುವುದು.

ಇದನ್ನು ಸಾಧಿಸಲು ಇನ್ನಾದರೂ ಪ್ರಯತ್ನಿಸೋಣ. ಬಾಲಗಂಗಾಧರರನ್ನು ರಾಜದ್ರೋಹದ ಆರೋಪದ ಮೇಲೆ ಬಂಧಿಸಿದಾಗ ಅವರ ಸ್ವಾತಂತ್ರ್ಯವನ್ನು ರಕ್ಷಿಸಲು ಬೀದಿಗಿಳಿದಿದ್ದ ಪತ್ರಕರ್ತರು ಪ್ರಾಣ ತ್ಯಾಗವನ್ನೂ ಮಾಡಿದ್ದರು. ಅವರೊಂದಿಗೆ ಮುಂಬೈನ ಕಾರ್ಮಿಕ ವರ್ಗದ ಸದಸ್ಯರೂ ಭಾಗಿಯಾಗಿದ್ದರು. ಅದರಲ್ಲಿ ಬಹುತೇಕರಿಗೆ ಅಕ್ಷರ ಜ್ಞಾನವಿರಲಿಲ್ಲ. ಆದರೂ ಕೂಡ ಅವರು ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಾಗಿ ಸಾಕಷ್ಟು ಹೋರಾಟ ನಡೆಸಿದ್ದರು. ಆ ಸಮಯದಲ್ಲಿನ ಮಾಧ್ಯಮ ಮತ್ತು ಜನಸಾಮಾನ್ಯರ ನಡುವಿನ ಒಗ್ಗಟ್ಟಿನಿಂದಲೇ ಇಷ್ಟೆಲ್ಲಾ ಸಾಧ್ಯವಾಯಿತು.

ಇಂದು ನಾವೆಲ್ಲರೂ ಸಾರ್ವಜನಿಕ ಪ್ರಸರಣಾ ಮಾಧ್ಯಮದ ಮೇಲಿನ ಏಕಸ್ವಾಮ್ಯ ಒಡೆತನವನ್ನು ತಪ್ಪಿಸಿ ಮಾಧ್ಯಮಗಳನ್ನು ಸ್ವತಂತ್ರಗೊಳಿಸಬೇಕಿದೆ. ಒಡೆತನವು ವೈವಿಧ್ಯಮಯವಾಗಿರಬೇಕಾದ ಅಗತ್ಯವಿದ್ದು ಸಾರ್ವಜನಿಕರಿಗೆ ಮಾಧ್ಯಮದ ಮೂಲಕ ಸೂಕ್ತವಾದ ಖಾಸಗೀ ವೇದಿಕೆಯನ್ನು ಸೃಷ್ಟಿಸಿ ಆ ಮೂಲಕ ಸಮಾಜಕ್ಕೆ ನೆರವಾಗಲು ಹೋರಾಟ ಮಾಡುವುದು ಅನಿವಾರ್ಯವಾಗಿದೆ. "ಇದು ಅಷ್ಟು ಸುಲಭವಾಗಿಲ್ಲವಾದರೂ ಅಸಾಧ್ಯವಂತೂ ಅಲ್ಲ" ಎಂಬುದು ನನ್ನ ದೃಢವಾದ ನಂಬಿಕೆ.

ಕನ್ನಡಕ್ಕೆ: ರಮೇಶ ಸಜ್ಜಾದಿ, ಶಿವಮೊಗ್ಗ

ಭಾರತ-ಇರಾನ್ ಒಪ್ಪಂದ: ಕಡ್ಡಿಯನ್ನು ಗುಡ್ಡ ಮಾಡಿದ ಪ

ಕಳೆದೆರಡು ವರ್ಷಗಳ ಅವಧಿಯಲ್ಲಿ ನಾವೆಲ್ಲ ನೋಡಿರುವ ಹಾಗೆ ಮೋದಿ ಸರ್ಕಾರದಲ್ಲಿ ನಿಜವಾದ ಕೆಲಸಕ್ಕಿಂತ ಪೊಳ್ಳು ಘೋಷಣೆಗಳು, ಹಳಸಲು ಭಾಷಣಗಳು ಮತ್ತು ಹುಸಿ ಜಾಹೀರಾತುಗಳೇ ಜಾಸ್ತಿ ಎಂದಾಗಿದೆ! ಗುಡ್ಡವನ್ನು ಬೆಟ್ಟ ಮಾಡುವುದು, ಇಲ್ಲದ ಬಣ್ಣ ಕಟ್ಟಿ ಹೇಳುವುದು ಇವರ ಸಹಜಗುಣವೆ ಆಗಿರುವುದರಿಂದ ಈ ಹೊತ್ತು ಇಂತಹ ಪ್ರಸಂಗಗಳು ಮುಸಲಧಾರೆಯ ಥರ ಎಡೆಬಿಡದೆ ಸುರಿಯುತ್ತಿರುವುದರಲ್ಲಿ ಅಸಾಮಾನ್ಯವಾದುದೇನೂ ಇಲ್ಲ. ಇದೀಗ ಜಾಹೀರಾತಿನ ಖರ್ಚಿಗೆಂದೇ ಜನರಿಂದ ಹೆಚ್ಚುವರಿ ತೆರಿಗೆ ವಸೂಲು ಮಾಡಿ ಬಡವರ ಉದ್ಧಾರ ಮಾಡುತ್ತಿದ್ದೇವೆ, ದೇಶದ ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ಮುಂತಾದ ಸುಳ್ಳು, ಅರೆಸತ್ಯಗಳನ್ನು ದೊಡ್ಡ ದೊಡ್ಡ ಜಾಹೀರಾತುಗಳ ಮೂಲಕ ಪ್ರಚಾರ ಮಾಡುವ ವಿಕೃತಿಯೂ ಕಾಣಿಸಿಕೊಂಡಿದೆ! ಮಾಧ್ಯಮಗಳಲ್ಲಿ ಕೂಡ ಸರ್ಕಾರದ ಪ್ರಸಾರಾಂಗ ಉಣಬಡಿಸಿದುದನ್ನೇ ಗಿಳಿಪಾಠ ಒಪ್ಪಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಹಾಗೆ ನೋಡಿದರೆ ಪೊಳ್ಳು ಘೋಷಣೆಗಳು, ಸುಳ್ಳಿನ ಸರಮಾಲೆಗಳು, ಬಡಜನರ ದಮನ, ಅಲ್ಪಸಂಖ್ಯಾತರ ಮರ್ದನ, ಭಿನ್ನಮತಕ್ಕೆ ಅಸಹಿಷ್ಣುತೆ, ಹಿಂಸಾ ಪ್ರವೃತ್ತಿ, ಏಕವ್ಯಕ್ತಿ ಆರಾಧನೆ ಇವೇ ಮೊದಲಾದ ಅಂಶಗಳಲ್ಲಿ ಅಪ್ಪಟ ಫ್ಯಾಸಿಸ್ಟ್ ಪ್ರಭುತ್ವವನ್ನು ಹೋಲುವ ಸರ್ಕಾರವೊಂದರಲ್ಲಿ ಮಂತ್ರಕ್ಕಿಂತ ಉಗುಳೇ ಹೆಚ್ಚಾಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಮೋದಿ ಸರ್ಕಾರದ 24x7 ಪ್ರಚಾರಯಂತ್ರ ಕಡ್ಡಿಯಷ್ಟು ಇದ್ದುದನ್ನು ಗುಡ್ಡದಷ್ಟು ಮಾಡುತ್ತಿರುವುದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಇತ್ತೀಚಿನ ಭಾರತ-ಇರಾನ್ ಒಪ್ಪಂದ.

ಇತ್ತೀಚೆಗೆ ಮೋದಿಯ ಇರಾನ್ ಭೇಟಿಯ ವೇಳೆ ಚೌಬಹಾರ್ ಬಂದರು ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಉಭಯ ದೇಶಗಳು ಒಂದು ಒಪ್ಪಂದಕ್ಕೆ ಸಹಿಹಾಕಿದವು. ಮೋದಿ ಸರ್ಕಾರದ ಪ್ರಚಾರಪಂಡಿತರು ಎಂದಿನಂತೆ ಟಾಪ್ ಗಿಯರ್‌ಗೆ ಏರಿ ಮೋದಿಯನ್ನು ಇಂದ್ರ ಚಂದ್ರ ಎಂದು ಹೊಗಳುತ್ತಾ ಒಪ್ಪಂದದ ಕುರಿತು ಉತ್ಪ್ರೇಕ್ಷಿತ ವರದಿಗಳನ್ನು ಹರಿಯಬಿಟ್ಟಿದ್ದಾರೆ. ಇದೊಂದು "ಮೈಲುಗಲ್ಲು" ಒಪ್ಪಂದವಂತೆ. ಬಂದರು ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ಭಾರತಕ್ಕೆ ವಹಿಸಲಾಗಿದೆಯಂತೆ. ಚೌಬಹಾರ್‌ನ ಅಭಿವೃದ್ಧಿಗೆ ಪಾಕಿಸ್ತಾನವನ್ನು ಕೈಬಿಟ್ಟು ಭಾರತವನ್ನು ಆಯ್ಕೆ ಮಾಡಲಾಗಿದೆಯಂತೆ. ಚೀನಾ ಅಭಿವೃದ್ಧಿಪಡಿಸುತ್ತಿರುವ ಪಾಕಿಸ್ತಾನದ ಗ್ವದರ್ ಬಂದರಿಗೆ ಚೌಬಹಾರ್ ನಮ್ಮ ಉತ್ತರವಂತೆ. ಇನ್ನು ಭಾರತ, ಇರಾನ್ ಸಂಬಂಧಗಳು ಥಟ್ಟನೆ ಮೇಲ್ಮುಖವಾಗಿ ಚಲಿಸಲಾರಂಭಿಸಿವೆಯಂತೆ. ಭಾರತ ತನ್ನ ಆರ್ಥಿಕ, ರಾಜಕೀಯ ಪ್ರಭಾವವನ್ನು ಅಫಘಾನಿಸ್ತಾನಕ್ಕೆ ವಿಸ್ತರಿಸಲು ಇರಾನ್ ಸಹಕಾರ ನೀಡುತ್ತಿದೆಯಂತೆ. ಸದ್ಯದಲ್ಲೆ ಭಾರತ, ಅಫಘಾನಿಸ್ತಾನ ಮತ್ತು ಇರಾನ್ ವ್ಯೂಹಾತ್ಮಕವಾಗಿ ಒಂದುಗೂಡಿ ಪಾಕಿಸ್ತಾನ ಮತ್ತು ಚೀನಾ ವಿರುದ್ಧ ಸೆಟೆದು ನಿಲ್ಲಲಿವೆಯಂತೆ!!!

ಅಂದಹಾಗೆ ಪಾಕಿಸ್ತಾನಿ ಭದ್ರತಾಪಡೆಗಳ ಕೈಗೆ ಸಿಕ್ಕಿಬಿದ್ದು ಸೆರೆಮನೆ ಸೇರಿರುವ ನಮ್ಮ 'ರಾ' ಗೂಢಚಾರ ಕುಲಭೂಷಣ್ ಜಾಧವ್ ಪಾಕಿಸ್ತಾನದಲ್ಲಿ ತನ್ನ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದುದು ಇದೇ ಚೌಬಹಾರ್‌ನಿಂದ. ಜಾಧವ್ ಪ್ರಕರಣದಲ್ಲಿ ಕಳೆದುಕೊಂಡ ಮಾನವನ್ನು ಸರಿದೂಗಿಸಲೆತ್ನಿಸುವ ಇಂತಹ ಸ್ವಲ್ಪವೂ ನಯನಾಜೂಕಿಲ್ಲದ ವರದಿಗಳಿಂದ ಇರಾನ್‌ಗೆ ಖಂಡಿತ ಮುಜುಗರ ಆಗಿರಬೇಕು. ಚೌಬಹಾರ್ ಒಪ್ಪಂದದ ಬಗ್ಗೆ ಭಾರತದಲ್ಲಿ ಎಷ್ಟು ದೊಡ್ಡ ತುತ್ತೂರಿ ಊದಲಾಯಿತೆಂದರೆ ಈ ಭ್ರಮಾಲೋಕದ ವಿಹಾರಗಳು ನಿಜವಿರಬಹುದೇನೊ ಎಂದು ಜನ ಭಾವಿಸುವಷ್ಟು. ಬಹುತೇಕ ಮಾಧ್ಯಮಗಳು ವಿಶ್ಲೇಷಣೆಯ ಗೊಡವೆಗೆ ಹೋಗದೆ ಉದ್ದುದ್ದ ಬರೆದು ಮೋದಿ ಸರ್ಕಾರವನ್ನು ಹೊಗಳಿದ್ದೇ ಹೊಗಳಿದ್ದು. ಹೀಗೆ ತಾರಕಕ್ಕೇರಿದ ಸಂಭ್ರಮಾಚರಣೆಗಳ ಸದ್ದು ನಿಧಾನಕ್ಕೆ ಅಡಗುತ್ತಿದ್ದಂತೆ ಮೋದಿ ಸರ್ಕಾರದ ತಥಾಕಥಿತ 'ಯಶಸ್ವಿ ಒಪ್ಪಂದ'ದ ಸುತ್ತ ಹೆಣೆಯಲಾಗಿರುವ ಅಪಾರದರ್ಶಕ ಪರದೆಯನ್ನು ಒಂದಷ್ಟು ಆಚೆ ಸರಿಸಿ ಇರಾನ್ ಭೇಟಿಯನ್ನು ವಸ್ತುನಿಷ್ಠ ವಿಶ್ಲೇಷಣೆಗೆ ಒಳಪಡಿಸುವ ಸಮಯ ಬಂದಿದೆ.

ಚೌಬಹಾರ್ ಬಂದರಿನ ಪ್ರಾಮುಖ್ಯತೆ

ಚೌಬಹಾರ್, ಇರಾನ್‌ನ ಪೂರ್ವಭಾಗದ ಸಿಸ್ತಾನ್-ಬಲೂಚಿಸ್ತಾನ್ ಪ್ರಾಂತದಲ್ಲಿರುವ ಒಂದು ಬಂದರು ನಗರ. ತನ್ನದೇ ಹೆಸರಿನ ಜಿಲ್ಲೆಯ ಕೇಂದ್ರವೂ ಆಗಿರುವ ಚೌಬಹಾರ್ ಪಾಕಿಸ್ತಾನದ ಗ್ವದರ್ ಬಂದರಿನಿಂದ ಕೇವಲ 70 ಕಿಮೀ ದೂರದಲ್ಲಿದೆ. ಆರ್ಥಿಕವಾಗಿ ಹಿಂದುಳಿದಿರುವ ಸಿಸ್ತಾನ್-ಬಲೂಚಿಸ್ತಾನ್ ಪ್ರಾಂತದಲ್ಲಿ ಸುನ್ನಿ ಪಂಥೀಯರದೆ ಮೇಲುಗೈ. ಪಾಕಿಸ್ತಾನದೊಳಗಿರುವ ಪಠಾಣ ಉಗ್ರರ ಗುಂಪುಗಳು ಸೌದಿ ಅರೇಬಿಯದ ನೆರವಿನೊಂದಿಗೆ ಇಲ್ಲಿ ಕಾರ್ಯಾಚರಿಸುತ್ತಿವೆ. ಇವರ ಗಡಿಯಾಚೆಯ ಕಾರ್ಯಾಚರಣೆಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಸಹಕಾರ ಇರಾನ್‌ಗೆ ಬಹಳ ಮುಖ್ಯವಾಗಿದೆ. ಯೆಮೆನ್, ಸಿರಿಯಾಗಳಲ್ಲಿ ಪರೋಕ್ಷ ಯುದ್ಧ ನಡೆಸುತ್ತಿರುವ ಸೌದಿ ಅರೇಬಿಯದಿಂದ ಪಾಕಿಸ್ತಾನ ಇತ್ತೀಚಿನ ವರ್ಷಗಳಲ್ಲಿ ದೂರಸರಿದ ನಂತರ ಇರಾನ್, ಪಾಕಿಸ್ತಾನ ಸಂಬಂಧಗಳು ಸುಧಾರಿಸತೊಡಗಿವೆ. ಉಗ್ರಗಾಮಿಗಳನ್ನು ಮಟ್ಟಹಾಕುವುದರೊಂದಿಗೆ ಸಿಸ್ತಾನ್-ಬಲೂಚಿಸ್ತಾನ್ ಪ್ರಾಂತವನ್ನು ಆರ್ಥಿಕವಾಗಿ ಮೇಲಕ್ಕೆತ್ತುವ ಕಾರ್ಯಕ್ರಮವನ್ನೂ ಇರಾನ್ ಹಮ್ಮಿಕೊಂಡಿದೆ.

ತಾಲಿಬಾನ್ ಕೇಂದ್ರಿತ ನೀತಿಗಳನ್ನು ಅನುಸರಿಸಿರದ ಇರಾನ್ ತನ್ನ ನೆರೆಕರೆಯ ದೇಶವಾಗಿರುವ ಅಫಘಾನಿಸ್ತಾನವನ್ನು ಸುಭದ್ರಗೊಳಿಸಿ ಅದರ ಜೊತೆ ಉತ್ತಮ ಬಾಂಧವ್ಯ ಬೆಳೆಸಲು ಇಷ್ಟಪಡುತ್ತಿದೆ. ಉಭಯ ದೇಶಗಳಿಗೂ ಚೌಬಹಾರ್ ಬಂದರಿನಿಂದ ಬಹಳಷ್ಟು ಉಪಯೋಗಗಳಿವೆ.

ಇರಾನ್ ಮಟ್ಟಿಗೆ ಇನ್ನೊಂದು ಪ್ರಮುಖ ವಿಷಯವೆಂದರೆ ಚೀನಾ ವತಿಯಿಂದ ಕಾರ್ಯಗತಗೊಳ್ಳುತ್ತಿರುವ ಪಾಕಿಸ್ತಾನದ ಸಿಲ್ಕ್ ರಸ್ತೆ ಯೋಜನೆ. ಇದರ ಪ್ರಯೋಜನಗಳನ್ನು ಮನಗಂಡಿರುವ ಇರಾನ್ ಆ ಕುರಿತಂತೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇರಾನ್‌ನಿಂದ ಪಾಕಿಸ್ತಾನಕ್ಕೆ ಅನಿಲ ಸಾಗಿಸುವ ಕೊಳವೆಯನ್ನು ಇದೇ ಸಿಲ್ಕ್ ರಸ್ತೆ ಮೂಲಕ ಚೀನಾದ ಷಿಂಜಿಯಾಂಗ್ ಪ್ರಾಂತ್ಯಕ್ಕೆ



ವಿಸ್ತರಿಸುವ ಯೋಜನೆ ಅವುಗಳಲ್ಲೊಂದು.


ಇರಾನ್‌ನ ದಕ್ಷಿಣಪೂರ್ವ ಮಕ್ರಾನ್ ಕರಾವಳಿಯಲ್ಲಿರುವ ಚೌಬಹಾರ್ ಬಂದರು ಭಾರತದ ಕಾಂಡ್ಲಾ ಮತ್ತು ಮುಂಬಯಿ ಬಂದರುಗಳಿಗೆ ಸಮೀಪದಲ್ಲಿದೆ. ಇದು ಭಾರತ, ಇರಾನ್ ನಡುವಿನ ವಾಣಿಜ್ಯ ವಹಿವಾಟುಗಳ ಅಭಿವೃದ್ಧಿಗೆ ತುಂಬಾ ಪೂರಕ. ಮೊದಲನೆಯದಾಗಿ, ಇರಾನ್‌ನಿಂದ ನೈಸರ್ಗಿಕ ಅನಿಲವನ್ನು ಕಂಟೇನರ್ ಮೂಲಕ ಆಮದು ಮಾಡಿಕೊಳ್ಳುವುದು ಸುಲಭವಾಗಲಿದೆ. ಎರಡನೆಯದಾಗಿ ಅಫಘಾನಿಸ್ತಾನದ ಉತ್ತರ ಗಡಿ ಕೂಡ ಭಾರತಕ್ಕೆ ಸನಿಹವಾಗಲಿದೆ; ಹೀಗಾಗಿ ಅಲ್ಲಿಗೆ ಹೋಗಲು ಪಾಕಿಸ್ತಾನವನ್ನು ಹಾದುಹೋಗಬೇಕಾದ ಪ್ರಮೇಯ ಇರುವುದಿಲ್ಲ.

ನೆಲದ ವಾಸ್ತವಗಳು

ವಿದೇಶಗಳಲ್ಲಿ ಕೈಗೆತ್ತಿಕೊಂಡ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಭಾರತದ ಕಳಪೆ ದಾಖಲೆಯ ವಿಚಾರ ಮಿಕ್ಕೆಲ್ಲಾ ದೇಶಗಳ ಹಾಗೆ ಇರಾನ್‌ಗೂ ಗೊತ್ತು. ಹೀಗಾಗಿಯೆ ಮೋದಿ ಇರಾನ್‌ನಿಂದ ವಾಪಸ್ಸಾದ ಕೆಲವೇ ದಿನಗಳೊಳಗಾಗಿ ಇಸ್ಲಾಮಾಬಾದಿನಲ್ಲಿ ಪಾಕಿಸ್ತಾನದ ಚಿಂತಕರು ಮತ್ತು ಯೋಜನಾತಜ್ಞರ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದ ಇರಾನ್ ರಾಯಭಾರಿ ಮೆಹದಿ ಹೊನರ್‌ದೂಸ್ತ್ ಕೆಲವೊಂದು ಪ್ರಮುಖ ಮಾಹಿತಿಗಳನ್ನು ಹೊರಗೆಡವಿದರು. ಅವರ ಮಾತುಗಳು ಚಿಂತನಾಯೋಗ್ಯವಾಗಿವೆ: 'ಪ್ರಧಾನಿ ಮೋದಿಯ ಭೇಟಿಗೂ ಮುಂಚೆ ಚೀನಾ, ಪಾಕಿಸ್ತಾನಗಳನ್ನು ಸಂಪರ್ಕಿಸಿ ಚೌಬಹಾರ್ ಯೋಜನೆಯಲ್ಲಿ ಭಾಗವಹಿಸುವಂತೆ ಕೋರಲಾಗಿತ್ತು, ಆದರೆ ಅವೆರಡೂ ಅಷ್ಟೊಂದು ಉತ್ಸಾಹ ತೋರಿಸಿರಲಿಲ್ಲ, ಆದರೂ ಆ ಕೊಡುಗೆಯನ್ನು ವಾಪಸ್ಸು ಪಡೆಯಲಾಗಿಲ್ಲ, ಅದಿನ್ನೂ ಹಾಗೇ ಇದೆ.... ಚೌಬಹಾರ್ ಒಪ್ಪಂದ ಇನ್ನೂ ಮುಕ್ತಾಯಗೊಂಡಿಲ್ಲ, ಹೊಸ ಸದಸ್ಯರಿಗಾಗಿ ಕಾಯುತ್ತಿದ್ದೇವೆ. ಪಾಕಿಸ್ತಾನ, ಚೀನಾಗಳಿಗೆ ನಮ್ಮ ಸ್ವಾಗತವಿದೆ. ದಿಗ್ಬಂಧನದ ಕಾಲದಲ್ಲಿ ನಮ್ಮಿಂದ ತೈಲ ಖರೀದಿಸಿದ ಭಾರತವೂ ಒಳ್ಳೆಯ ಮಿತ್ರ... ಚೌಬಹಾರ್ ಬಂದರು ಪಾಕಿಸ್ತಾನದ ಗ್ವದರ್ ಬಂದರಿಗೆ ಪ್ರತಿಸ್ಪರ್ಧಿಯಲ್ಲ... ಪ್ರಾದೇಶಿಕ ರಾಷ್ಟ್ರಗಳ ಪ್ರಜಾಹಿತಾಸಕ್ತಿ ಮೇಲೆ ನೇರ ಪರಿಣಾಮ ಬೀರುವಂತಹ ಯಾವುದೇ ಪುನರ್‌ಮೈತ್ರಿಗೆ ನಾವು ಸಿದ್ಧರಿದ್ದೇವೆ. ವ್ಯಾಪಾರ ಬೇರೆ, ರಾಜಕಾರಣ ಬೇರೆ. ಅವೆರಡನ್ನು ಪ್ರತ್ಯೇಕಿಸಬೇಕಾಗುತ್ತದೆ.' ಈ ರೀತಿ ಅಂತಾರಾಷ್ಟ್ರೀಯ ರಾಜತಾಂತ್ರಿಕ ವ್ಯವಹಾರಗಳಲ್ಲಿ ವ್ಯಾವಹಾರಿಕ ದೃಷ್ಟಿಯನ್ನು ಇಟ್ಟುಕೊಳ್ಳುವುದರ ಪ್ರಯೋಜನಗಳ ಬಗ್ಗೆ ಬೇರೊಬ್ಬರು ನಮಗೆ ನೆನಪಿಸಬೇಕಾಗಿ ಬಂದಿರುವುದು ಶೋಚನೀಯ ಸಂಗತಿ.

ಭಾರತ, ಇರಾನ್ ಸಂಬಂಧಗಳ ಹಿನ್ನೆಲೆ

ಇತ್ತೀಚಿನ ವರ್ಷಗಳಲ್ಲಿ ಕೇವಲ ತೈಲ ವ್ಯಾಪಾರಕ್ಕೆ ಸೀಮಿತವಾಗಿದ್ದ ಭಾರತ, ಇರಾನ್ ಸಂಬಂಧ ಅಷ್ಟೇನೂ ಗಟ್ಟಿಯಾಗಿ ಇರಲಿಲ್ಲ. ಉಭಯ ದೇಶಗಳೂ ಪಾಕಿಸ್ತಾನಿ ಸರಕಾರದ ನೀತಿಗಳನ್ನು ವಿರೋಧಿಸುತ್ತಿದ್ದವು. ಆದರೆ ಅಮೆರಿಕ ಅಫಘಾನಿಸ್ತಾನದಲ್ಲಿ ಹಸ್ತಕ್ಷೇಪ ಮಾಡಿದ ಬಳಿಕ ಭಾರತ, ಅಮೆರಿಕ ಹಿತಾಸಕ್ತಿಗಳು ಇನ್ನಷ್ಟು ಹತ್ತಿರವಾದುದರ ಪರಿಣಾಮವಾಗಿ ಭಾರತ, ಇರಾನ್ ಸಂಬಂಧಗಳು ಕೆಡಲಾರಂಭಿಸಿದವು. ಆದರೂ ತೈಲ ಆಮದು ಮತ್ತು ಕೆಲವೊಂದು ಯೋಜನೆಗಳ ವಿಷಯದಲ್ಲಿ ಸಹಕಾರ ಮುಂದುವರಿದಿತ್ತು. ಚೌಬಹಾರ್ ಬಂದರು ಮತ್ತು ಸಂಪರ್ಕ ಯೋಜನೆ ಇದ್ದಕ್ಕಿದ್ದಂತೆ ಹುಟ್ಟಿಕೊಂಡಿರುವುದಲ್ಲ, ಅದರ ಬಗ್ಗೆ ಉಭಯ ದೇಶಗಳ ನಡುವೆ ಕಳೆದ ಒಂದು ದಶಕದಿಂದಲೂ ಮಾತುಕತೆ ನಡೆಯುತ್ತ ಬಂದಿದೆ. 2003ರಲ್ಲಿ ಭಾರತ, ಇರಾನ್, ಅಫಘಾನಿಸ್ತಾನಗಳು ತ್ರಿಪಕ್ಷೀಯ ಒಪ್ಪಂದವೊಂದಕ್ಕೆ ಸಹಿಹಾಕಿದ್ದವು. 2012ರಲ್ಲಿ ಇಂತಹದೇ ಇನ್ನೊಂದು ಒಪ್ಪಂದ ಆಗಿದೆ. ಅಫಘಾನಿಸ್ತಾನದ ಜಾರಂಜ್-ದೆಲಾರಾಂ ಹೆದ್ದಾರಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡ ಭಾರತ ಅದನ್ನು 2009ರಲ್ಲಿ ಮಾಡಿಮುಗಿಸಿದೆ. ಇದನ್ನೆ ಚೌಬಹಾರ್ ಬಂದರಿನತನಕ ವಿಸ್ತರಿಸುವ ಯೋಜನೆ ಮಾತ್ರ ಇನ್ನೂ ಪೂರ್ತಿಯಾಗದೆ ಬಾಕಿ ಉಳಿದಿದೆ. ಈಗ ವಿಶ್ವಸಂಸ್ಥೆ ಇರಾನ್ ಮೇಲಿನ ನಿಷೇಧಾಜ್ಞೆಯನ್ನು ಹಿಂದೆಗೆದುಕೊಂಡ ಬಳಿಕ ಅಮೆರಿಕ, ಇರಾನ್ ಸಂಬಂಧಗಳು ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ



ಸ್ವಾಭಾವಿಕವಾಗಿ ಭಾರತ, ಇರಾನ್ ಮೈತ್ರಿಯೂ ಇ… ಸದೃಢಗೊಳ್ಳುತ್ತಿದೆ.

ಅಪಪ್ರಚಾರ ಮತ್ತು ಅಸಲಿಯತ್ತು

ಮೋದಿ ಭೇಟಿಯ ವೇಳೆ ಚೌಬಹಾರ್ ಅಭಿ… ಸಂಬಂಧಿಸಿದ ದಾಖಲೆಪತ್ರಗಳಿಗೆ ಸಹಿ ಹಾಕಲಾಗಿದ್ದು ಭಾ… 500 ಮಿಲಿಯ ಡಾಲರು ಹೂಡಿಕೆ ಮಾಡು… ಎನ್ನಲಾಗಿದೆ. ಆದರೆ ಭಾರತೀಯ ಮಾಧ್ಯಮಗಳಾ… ವಿಷಯತಜ್ಞರಾಗಲಿ ಚೌಬಹಾರ್‌ನಲ್ಲಿ ಭಾರ… ಪಾಲ್ಗೊಳ್ಳುವಿಕೆಯ ನೈಜ ಪ್ರಮಾಣ ಎಷ್ಟೆಂದು … ಲೆಕ್ಕಹಾಕಿಲ್ಲ. ಅಸಲಿ ವಿಷಯ ಏನೆಂದರೆ ಭಾರತ … ಎರಡು ಕಂಟೇನರ್ ತಂಗುದಾಣಗಳ ಅಭಿವೃದ್ಧಿ ಮಾಡು… ಇಡೀ ಬಂದರಿನ ಕಾಮಗಾರಿಯ ಒಂದು ಪುಟ್ಟ ಭಾಗ… ಅಷ್ಟಕ್ಕೂ ಈ ಅಭಿವೃದ್ಧಿಯ ಕಾಂಟ್ರಾಕ್ಟ್ ಯ… ಕಾರ್ಪೊರೇಟ್ ಕುಳದ ಪಾಲಾಗಲಿದೆ ಎಂಬುದನ್ನು … ನೋಡಬೇಕಷ್ಟೆ. ಇಡೀ ಬಂದರಿನ ಕೆಲಸ ಪೂರ್ತಿಗೊ… ಪೂರ್ಣ ಮಟ್ಟದ ಕಾರ್ಯಾಚರಣೆ ಪ್ರಾರಂಭವಾ… ಹಲವಾರು ವರ್ಷಗಳೆ ಬೇಕಾಗಬಹುದು. ಚೌಬಹಾ… ಬಂದರು ನಿರ್ಮಾಣ ಕಾರ್ಯಕ್ಕೆ ಇರಾನ್ … ದೇಶಗಳನ್ನೂ ಬಳಸಿಕೊಳ್ಳಲಿರುವುದು ಹೆಚ್ಚುಕಮ್ಮಿ ಖ… ಪ್ರಸಕ್ತ ಸನ್ನಿವೇಶದಲ್ಲಿ ಯೋಜನೆಯ ಸಿಂಹಪಾಲು ಚೀ… ದೊರೆಯುವ ಸಾಧ್ಯತೆಗಳೇ ಹೆಚ್ಚು. ಚೀನಾ ತು… ಉತ್ಸುಕವೂ ಆಗಿದೆ ಏಕೆಂದರೆ ಚೌಬಹಾರ್ ಮೂ… ಅದರ ಉತ್ಪನ್ನಗಳನ್ನು ಭಾರತಕ್ಕೆ ತೀರ ಕಮ್ಮಿ ಖರ್ಚಿ… ಸಾಗಿಸಬಹುದಾಗಿದೆ. ಚೀನಾದ ಪಾಕ್ಷಿಕ ಮುಖಪ… *ಗ್ಲೋಬಲ್ ಟೈಮ್ಸ್*‌ನ ಲೇಖನವೊಂದರಲ್ಲಿ ಇ… ಸುಳಿವುಗಳನ್ನು ಕಾಣಬಹುದಾಗಿದೆ. ಆದುದರಿ… ಅಂತಿಮವಾಗಿ ಚೌಬಹಾರ್ ಬಂದರು ಯಾರ ಪಾ… ಭಾರಿ ಹೆಮ್ಮೆಯ ಯೋಜನೆ? ಅಸಲಿಯತ್ತು ಮ… ಅಪಪ್ರಚಾರದ ನಡುವೆ ಅಜ, ಗಜಗಳಷ್ಟು ಅಂ… ಇದೆಯಲ್ಲವೆ?

(ಆಧಾರ: scroll.in ನಲ್ಲಿ ಎಂ.ಕೆ.ಭದ್ರಕುಮಾರ್ ಲೇ…



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ನರಕದ ಬೆಚ್ಚಪ್ಪ

ನಾವು ಪದೇಪದೇ ನೆನಪಿನಲ್ಲಿಟ್ಟುಕೊಳ್ಳಬೇಕಾಗಿರುದೇನೆಂದರೆ, ಭಾರತದ ಹಾಗೂ ವಿಶ್ವದ ಯಾವುದೇ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಥನ ಕೃತಿಗಳಾಗಲಿ, ಸೈದ್ಧಾಂತಿಕ ಕೃತಿಗಳಾಗಲಿ ಮೂಲಸ್ಥಿತಿಯಲ್ಲಿ ಉಳಿದುಕೊಂಡಿಲ್ಲ ಮತ್ತು ಪರಿಷ್ಕೃತಗೊಳ್ಳುತ್ತಾ ಯಾವುದೋ ಒಂದು ಹಂತದಲ್ಲಿ ಸಮಗ್ರವೇ ಸಂಪೂರ್ಣವೆಂಬಂತೆ ಬಿಂಬಿಸಲಾಯಿತು. ಅದೂ ಕೂಡ, ಹೊಸ ಕೃತಿಗಳ ನಿರ್ಮಾಣವು ಮತ್ತು ಹೆಚ್ಚು ಬಳಕೆಯಲ್ಲಿರದ ಇತರ ಕೃತಿಗಳ ಪ್ರಕಾಶನಗಳು ಸ್ಥಗಿತವಾಗುತ್ತಿದ್ದಂತೆ ಅವುಗಳ ಬೆಳವಣಿಗೆ ಸ್ಥಗಿತವಾಗತೊಡಗಿದವು. ಹಾಗೆಯೇ ಅವುಗಳು ಅವುಗಳದೇ ಆದ ಒಂದು ಮೌಲಿಕ ಸ್ಥಾನದಲ್ಲಿ ಶಾಶ್ವತವಾಗಿ ನಿಂತುಬಿಟ್ಟವು. ಇದಕ್ಕೆ ಬೈಬಲ್, ರಾಮಾಯಣ, ಮಹಾಭಾರತ, ಭಗವದ್ಗೀತೆ, ಜಾತಕ ಕತೆಗಳು, ಪುರಾಣದ ಕತೆಗಳು, ಅಷ್ಟೇಕೆ ಋಗ್ವೇದವೂ ಕೂಡ ಹೊರತಲ್ಲ. ಪುರಾಣಗಳೆಲ್ಲವೂ ಸ್ಥಳೀಯವಾದಂತಹ ಪ್ರಭಾವಗಳಿಂದಲೇ ರೂಪುಗೊಂಡಿರುವವು. ಅವುಗಳನ್ನು ಹೊತ್ತುಕೊಂಡು ಓಡಾಡಿದವರೆಲ್ಲಾ ತಾವು ಹೋದ ಕಡೆಗಳಲ್ಲಿ ಅವುಗಳನ್ನು ಮರುಪ್ರತಿಷ್ಠಾಪಿಸಿದ್ದಾರೆ. ಅಲ್ಲಿನ ಸ್ಥಳೀಯ ಕೇಳುಗರು, ಮೆಚ್ಚಿದವರು ಹಾಗೂ ಒಪ್ಪಿದವರು ತಮ್ಮ ಸ್ಥಳೀಯ ಸಂಸ್ಕೃತಿಯ ಛಾಪುಗಳನ್ನು ಒತ್ತಿದ್ದಾರೆ.

ಹಾಗೆಯೇ ಜನಪದದಲ್ಲಿ ಸ್ಥಳೀಯ ನಾಯಕರ, ಸಂಸ್ಕೃತಿಗಳನ್ನು ಕಥನ ರೂಪದಲ್ಲಿ ತರುವ ಪ್ರಭಾವ ಪುರಾಣಗಳ ಮೇಲೂ ಆಗಿದೆ. ಉಪನಿಷತ್ತುಗಳು ವೇದಗಳ ದೈವೀ ಪರಿಕಲ್ಪನೆಗಳನ್ನು ನೇರವಾಗಿ ನಿರಾಕರಿಸಿದವು. ಅನೇಕ ಉಪನಿಷತ್ತುಗಳು ಪ್ರಕೃತಿಯ ಪ್ರತಿಮೂರ್ತಿಗಳಾಗಿ ಮಾನವರಂತಾಡುತ್ತಿದ್ದ ವೇದಗಳ ಕಾಲದ ದೇವರ ಪರಿಕಲ್ಪನೆಗಳನ್ನು, ಇರುವಿಕೆಯನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಲೇವಡಿ ಮಾಡಿದವು ಮತ್ತು ಖಂಡಿಸಿದವು. ಉದಾರವಾದದ ಬ್ರಾಹ್ಮಣ್ಯದ ಪ್ರಭಾವಗಳು ಉಪನಿಷತ್ತಿನಲ್ಲಿದ್ದರೂ (ಎಲ್ಲಾ ಉಪನಿಷತ್ತುಗಳಲ್ಲಿ ಅಲ್ಲ) ಕೂಡ ವೇದಗಳ ಪ್ರಕೃತಿಯ ಪ್ರತಿನಿಧಿಗಳ ದೈವೀ ಪ್ರತಿಮೆಗಳ ಆಚೆಗೆ ನಿರಾಕಾರ ಮತ್ತು ಅಸ್ತಿತ್ವದ ಚೈತನ್ಯದ ಮೂಲವನ್ನು ಹುಡುಕಿಕೊಂಡು ಹೋದವು. ಆ ಪ್ರಯತ್ನದವರನ್ನು ಜಿಜ್ಞಾಸುಗಳೆನ್ನಲಾಯಿತು. ಉಪನಿಷತ್ತಿನ ಋಷಿಗಳು ಸತ್ಯಾನ್ವೇಷಿಗಳಾದರು. ಯಾವ ಅರಿಸ್ಟಾಟಲ್, ಸಾಕ್ರಟೀಸ್, ಪ್ಲೇಟೋಗಳಿಗೂ ಕಡಿಮೆಯಿಲ್ಲದಂತೆ ಹೊಸ ಹೊಸ ತತ್ವಜ್ಞಾನಿಗಳು ಹುಟ್ಟಿದರು. ದೇವರು ನಿರ್ಗುಣ, ಸಾಕ್ಷೀ ಸ್ವರೂಪ ಎಂದೆಲ್ಲಾ ಪ್ರಶ್ನೋಪನಿಷತ್ತಿನ ಬಗೆಯ ಅನೇಕ ಉಪನಿಷತ್ತುಗಳು ಹೇಳಿದರೂ, ಕಾಲಕ್ರಮೇಣ ಪುರಾಣಿಕರು ದೇವರನ್ನು ಜನಪದದ ಪ್ರಭಾವದಿಂದ ಮಾನವ ಗುಣಗಳನ್ನು ಆರೋಪಿಸುತ್ತಾ ಬಂದರು. ಮುಂದೆ ಅದೇ ಜನಪದ ದೊಳಕ್ಕೂ ಸಾಗಿತು. ಒಟ್ಟಾರೆ ಪುರಾಣ ಕಥನಗಳ ತಾಯಿಯೂ ಜನಪದವೇ.

ಮೌಢ್ಯೋತ್ಪಾದಕರ ಉಗಮ

ಉಪನಿಷತ್ತಿನ ಋಷಿಗಳು ಮತ್ತು ಪುರಾಣಗಳ ಜನಕರು ಒಟ್ಟಿಗೇ ಇದ್ದ ಕಾಲದಲ್ಲಿಯೂ ಕೂಡ ಪುರಾಣಿಕರ ಪ್ರಭಾವವೇ ಜನರ ಮೇಲಾಗಿತ್ತು. ಉದಾರವಾದದ ಮತ್ತು ಮುಕ್ತ ಚಿಂತನೆಯ ಋಷಿಗಳು ಸಾಮಾನ್ಯ ಜನರನ್ನು ತಲುಪಿರಲಿಲ್ಲ. ಅದು ಹೇಗೆಂದು ನಮ್ಮ ಸಮಕಾಲೀನ ಉದಾಹರಣೆಯನ್ನು ಗಮನಿಸಿದರೆ ತಿಳಿಯುತ್ತದೆ. ಪ್ರಗತಿಪರ ಚಿಂತಕರನ್ನು, ವಿಚಾರವಾದಿಗಳನ್ನು, ಬುದ್ಧಿಜೀವಿಗಳೆಂದು ಹೆಸರಿಸಿ ಅವರು ಸಮಾಜದಲ್ಲಿ ಸಾಮಾನ್ಯ ಜನರಂತಲ್ಲ ಎಂದು ವರ್ಗಮಾಡಿ ಇಟ್ಟಿರುವಂತೆ ಅಂದೂ ಆಗಿತ್ತು. ಪುರಾಣದ ಮತ್ತು ಧಾರ್ಮಿಕ ವಿಚಾರಗಳ ಎಷ್ಟೆಷ್ಟೋ ವಿಮರ್ಶೆಗಳು, ವಿಶ್ಲೇಷಣೆಗಳು ಯಾವಾಗಿನಿಂದಲೋ ಆಗಿದ್ದರೂ ಅವು ಜನಸಾಮಾನ್ಯರನ್ನು ತಲುಪುತ್ತಿರಲಿಲ್ಲ. ಬರಿಯ ಪಂಡಿತರು, ಅಧ್ಯಯನಶೀಲರು, ವಿಚಾರವಾದಿಗಳು ಮಾತ್ರ ತಮ್ಮತಮ್ಮಲ್ಲಿ ಚರ್ಚಿಸುತ್ತಿದ್ದರು. ಜನಸಾಮಾನ್ಯರ



ಬಳಿಗೆ ಒಯ್ಯುವ ಪ್ರಯತ್ನವನ್ನು ಮಾಡಲಿಲ್ಲ, ಬದಲಾಗಿ ಅವರಿಗೆ ಗೊತ್ತಾಗುವುದಿಲ್ಲ ಎಂಬ ಧೋರಣೆ ಬೇರೆ. ಇಲ್ಲಿ ಯಾರ ಧೋರಣೆ, ಒಲವು, ನಿಲುವುಗಳು ಕಾರಣವಾಗುತ್ತದೆ ಎಂಬುದಕ್ಕಿಂತಲೂ ಬುದ್ಧಿಜೀವಿ ಎನಿಸಿಕೊಂಡವರಿಗೂ ಮತ್ತು ಸಾಮಾನ್ಯರೆನಿಸಿಕೊಂಡವರಿಗೂ ನಿರ್ಮಾಣವಾಗಿದ್ದ ಕಂದಕ ಮಾತ್ರ ಆಳವಾಗುತ್ತಾ ಬಂದಿತು ಅಥವಾ ಗೋಡೆ ಪದರಪದರಗಳಲ್ಲಿ ಬೆಳೆಯುತ್ತಾ ಬಂದಿತು. ಅದನ್ನು ಚೆನ್ನಾಗಿ ಉಪಯೋಗಿಸಿಕೊಂಡವರು ವೈದಿಕರೂ ಸೇರಿದಂತೆ ಇತರ ಧರ್ಮೀಯ ಮೌಢ್ಯೋತ್ಪಾದಕರು. ಯಾವಾಗ ವಿಚಾರವಾದಿಗಳು ತಮ್ಮಂತೆಯೇ ಇರುವ ಇತರರನ್ನೂ ವಿಚಾರವಾದಿಗಳನ್ನಾಗಿಸಲು ವಿಫಲರಾದರೋ ಆಗ ಮೌಢ್ಯೋತ್ಪಾದಕರು ಜನಗಳ ಮಧ್ಯೆಯೇ ಇದ್ದು ತಮ್ಮ ಕಾರ್ಯಾಚರಣೆಯಲ್ಲಿ ಯಶಸ್ವಿಯಾದರು.

ಪಾಪ, ಅವರು ಏನೂ ಅರಿಯದ ಸಾಮಾನ್ಯ ಜನರು, ನಾವು ಅಧ್ಯಯನ ಮಾಡಿರುವ ಅಥವಾ ತಿಳಿವಳಿಕೆ ಇರುವ ಬುದ್ಧಿವಂತರು ಎಂಬ ಧೋರಣೆಯಲ್ಲಿ ಇರುವ ಅಹಂಕಾರವಾಗಲಿ ಅಥವಾ ಕನಿಕರವಾಗಲಿ ವಿನಾಶಕಾರಿಯೇ ಸರಿ. ಅದೇ ಅಂದಿನಿಂದಲೂ ಇಂದಿನವರೆಗೂ ಪ್ರಗತಿಪರ ವಿಚಾರಗಳು, ಮುಕ್ತ ಚಿಂತನೆಗಳು ಜನರನ್ನು ಮುಟ್ಟದಿರುವ ಹಲವು ಕಾರಣಗಳಲ್ಲಿ ಒಂದು ಮುಖ್ಯ ಕಾರಣ.

ಮಹಾಭಾರತಕ್ಕೆ ಒಂದು ನಿರ್ದಿಷ್ಟ ರಚನೆಯಾದಂತಹ ಕಾಲವಿಲ್ಲ. ನೂರಾರು ವರ್ಷಗಳಿಂದ ಪದೇ ಪದೇ ಮರುಕಥನಕ್ಕೆ ಒಳಗಾಗುತ್ತಾ, ಪುನರ್ರಚಿತವಾಗುತ್ತಾ, ಸ್ಥಳೀಯ ಸಂಸ್ಕೃತಿ ಪ್ರಭಾವಗಳನ್ನು ಒಳಗೊಳ್ಳುತ್ತಾ ವಿಸ್ತಾರಕ್ಕೊಳಗಾಯ್ತು ಎಂಬುದು ನಿಜ. ಆದರೆ ಹಾಗೆ ವಿವಿಧ ಕಾಲಾವಧಿಯಲ್ಲಿನ ಮರು ಕಥನಗಳು ನಮಗೆ ಬಹಳ ಅಮೂಲ್ಯವಾದ ವಿಷಯ



ಗಳನ್ನು ತಿಳಿಸುತ್ತವೆ. ಪ್ರಸ್ತುತ ಸ್ಥಿತಿಗತಿಗಳ ಮೂಲದ ತಿಳಿವಳಿಕೆಗೆ ನೆರವಾಗುತ್ತವೆ ಎಂಬುದೂ ನಿಜ. ಗರುಡ ಪುರಾಣಕ್ಕೆ ಮತ್ತು ಮಹಾಭಾರತಕ್ಕೆ ಸಂಬಂಧವೇನು ಎಂದು ನೋಡಿದರೆ ಮಹಾಭಾರತ ಕಥನದ ಹಲವು ವಿಚಾರಗಳು ಎದುರು ನಿಲ್ಲುವವು. ಅವುಗಳಲ್ಲಿ ಮುಖ್ಯವಾದದ್ದು ಚಾರ್ವಾಕ ಪ್ರಭಾವ.

ಚಾರ್ವಾಕ ಯಾರು?

ಕೆಲವು ಜೈನಗ್ರಂಥಗಳಲ್ಲಿರುವ ಉಲ್ಲೇಖಗಳ ಪ್ರಕಾರ ಚಾರ್ವಾಕ ಅವಂತಿ ದೇಶದವನು. ಶಿಪ್ರಾ ಮತ್ತು ಚಾಮಲಾ ನದಿಗಳ ಸಂಗಮ ಕ್ಷೇತ್ರದಲ್ಲಿ ಶಂಖದ್ವಾರವೆಂಬ ನಗರವಿತ್ತು. ಅವನ ತಂದೆಯ ಹೆಸರು ಇಂದುಕಾಂತ, ತಾಯಿ ಸ್ವಗ್ವಿಣೀ. ಧಾರ್ಮಿಕ ಗ್ರಂಥಗಳು ಅಥವಾ ಸ್ಥಳೀಯ ಸಂಸ್ಕೃತಿಯ ಪ್ರಭಾವಗಳು ಬದಲಾದಂತೆ ಒಂದೇ ವ್ಯಕ್ತಿಯ ಮತ್ತು ಅವನ ಕುಟುಂಬದವರ ಹೆಸರುಗಳೂ ಕೂಡ ಕೆಲವು ಬಾರಿ ಬದಲಾಗುತ್ತವೆ. ಇದು ಒಂದು ಕಥೆ ವಿವಿಧ ನೆಲೆಗಳಲ್ಲಿ ಮರುಕಥನಕ್ಕೆ ಒಳಗಾದಾಗ ಸಾಮಾನ್ಯ. ಇರಲಿ, ಇಲ್ಲಿ ಜೈನ ಗ್ರಂಥದಲ್ಲಾದರೂ ಚಾರ್ವಾಕನ ಬಗ್ಗೆ ಒಂದಿಷ್ಟು ಮಾಹಿತಿ ಇರುವುದು ಸಮಾಧಾನ.

ಅವನು ಹುಟ್ಟಿದ್ದು ಯುಧಿಷ್ಠಿರ ಶಕೆ 662ರಲ್ಲಿ, ಪ್ರಭವನಾಮ ಸಂವತ್ಸರದ ವಿಶಾಖ ಶುದ್ಧ ಪೂರ್ಣಿಮೆಗೆ, ಗೌತಮ ಬುದ್ಧನ ಜನ್ಮದಿನವೂ ಅದೇ ಪೌರ್ಣಿಮೆ. ಆದರೆ ಶಕೆ ಯಾವುದೆಂದು ಗೊತ್ತಿಲ್ಲವೆಂದು ಗೌರೀಶ್ ಕಾಯ್ಕಿಣಿ ತಮ್ಮ ಲೋಕಾಯತ ಪುಸ್ತಕದಲ್ಲಿ ಉಲ್ಲೇಖಿಸುತ್ತಾರೆ. ಚಾರ್ವಾಕ ಸತ್ತಿದ್ದು ಅದೇ ಶಕ 727ರಲ್ಲಿ, ಬದುಕಿದ್ದು ಒಟ್ಟು 65 ವರ್ಷಗಳು ಎನ್ನುತ್ತಾರೆ.


ಮಹಾಭಾರತದ ಉಲ್ಲೇಖದ ಪ್ರಕಾರ ಮೊದಲನೆಯದಾಗಿ ಚಾರ್ವಾಕನೊಬ್ಬ ರಾಕ್ಷಸ. ರಾಕ್ಷಸನೆಂದ ಮಾತ್ರಕ್ಕೆ ವೈದಿಕ ಪುರಾಣಿಕರು ಸೃಷ್ಟಿಸಿರುವ ಹಾತ ಪ್ರಕಾರ ವಿಕೃತಾಕೃತಿಯನ್ನು ಕಣ್ಣ ಮುಂದೆ ತಂದುಕೊಳ್ಳಬೇಕಿಲ್ಲ, ಮಹಾನ್ ದರ್ಶನವನ್ನು ಇತ್ತ ಈ ಚಾರ್ವಾಕನನ್ನು ರಾಕ್ಷಸನೆಂದು ಕರೆದರೂ ಪೌರಾಣಿಕವಾಗಿ ರಾಕ್ಷಸರ ಗುರು ಶುಕ್ರಾಚಾರ್ಯನೊಡನೆಯೋ ಅಥವಾ ಇತರ ಯಾವುದೇ ಪೌರಾಣಿಕ ರಾಕ್ಷಸ ಪಾತ್ರಗಳ ಜೊತೆಯೋ ತಗುಲಿಹಾಕಿಲ್ಲ, ಹಾಗೆಯೇ ಬಹಳ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಆತ ವೈದಿಕ ವಿರೋಧಿ. ಸಹಜವಾಗಿ ವೈದಿಕತೆಯನ್ನು ವಿರೋಧಿಸಿದವರೆಲ್ಲಾ ಬ್ರಾಹ್ಮಣರ ವಿರೋಧವನ್ನು ಕಟ್ಟಿಕೊಳ್ಳುತ್ತಾರೆ. ಅವೈದಿಕ ನಿಲುವನ್ನು ತಾಳುವ ಬ್ರಾಹ್ಮಣರೂ ಕೂಡ ಇತರ ಬ್ರಾಹ್ಮಣರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ಇದಕ್ಕೆ ಇತಿಹಾಸದಲ್ಲಿ ಮತ್ತು ಪುರಾಣಗಳಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಹಾಗೆಯೇ ಮುಂದುವರಿದು ಮಹಾಭಾರತದಲ್ಲಿ ಸಂನ್ಯಾಸಿಯ ವೇಷಧಾರಿಯಾದ ಚಾರ್ವಾಕ ದುರ್ಯೋಧನನ ಸ್ನೇಹಿತನಾಗಿ ಮತ್ತು ಸಲಹೆಗಾರನಾಗಿ ಗುರುತಿಸಲ್ಪಡುತ್ತಾನೆ. ಸಂನ್ಯಾಸಿಯ ವೇಷ ಎಂದು ಏಕೆ ಹೇಳುತ್ತಾರೆ ಎಂದರೆ ಆತನು ಸ್ಥಾಪಿತ ಧಾರ್ಮಿಕತೆಗೆ ಹೊರತಾಗಿ ತನ್ನ ಅಧ್ಯಾತ್ಮ ಸಾಧನೆ ಮಾಡುವವನು ಅವನಾದ್ದರಿಂದ. ಬ್ರಹ್ಮನೂ ಕೂಡ ಚಾರ್ವಾಕನ ತಪಸ್ಸಿಗೆ ಫಲವಾಗಿ ಅಮರತ್ವವನ್ನು ಕೊಟ್ಟು ನಂತರ ನೀಡುವ ಎಚ್ಚರಿಕೆ ಏನೆಂದರೆ, "ಬ್ರಾಹ್ಮಣರನ್ನು ಮಾತ್ರ ಅಪಮಾನಿಸಬೇಡ". ಅದರ ಹಿಂದೆ ಬಹುದೊಡ್ಡ ಎಚ್ಚರಿಕೆಯ ದನಿಯನ್ನು ಗಮನಿಸಿ. "ನೀನು ಯಾರನ್ನಾದರೂ ಅಪಮಾನಿಸಿ ಉಳಿದುಕೊಂಡು ಬಿಡಬಹುದು. ಆದರೆ, ಬ್ರಾಹ್ಮಣರನ್ನು ಅಪಮಾನಿಸಿದರೆ ಮಾತ್ರ ಉಳಿಯಲಾರೆ." ಅದಕ್ಕೆ ಮುಂದೆ ನಿದರ್ಶನವೂ ದೊರಕುತ್ತದೆ. ಅದೇನೆಂದರೆ, ಧರ್ಮರಾಯನ ಸಭೆಯಲ್ಲಿ ಬ್ರಾಹ್ಮಣರ ವಿರುದ್ಧವಾಗಿ, ವೈದಿಕತೆಯನ್ನು ಖಂಡಿಸಿ ಚಾರ್ವಾಕ ಮಾತಾಡುತ್ತಾನೆ.

ಇದರಿಂದ ಸಭೆಯಲ್ಲಿ ನೆರೆದಿದ್ದ ಬ್ರಾಹ್ಮಣರು ಹೂಂಕರಿಸುತ್ತಾರೆ. ಆ ಬ್ರಾಹ್ಮಣರ ಹೂಂಕಾರ ಮಾತ್ರದಿಂದಲೇ ಚಾರ್ವಾಕನು ಸುಟ್ಟು ಭಸ್ಮವಾದನು ಎಂದು ಹೇಳುತ್ತಾರೆ.

ಹೂಂ ಎಂದು ಕೋಪದಿಂದ ಹೂಂಕರಿಸುತ್ತಾ ಶತ್ರುವನ್ನು ಸುಡುವಂತಹ ಉಲ್ಲೇಖಗಳು ಮಹಾಭಾರತದಂತಹ ಕಾವ್ಯಗಳಲ್ಲೂ, ದೇವಿ ಭಾಗವತಗಳಂತಹ ಪೌರಾಣಿಕ ಕಥೆಗಳಲ್ಲೂ ಧಾರಾಳವಾಗಿ ಸಿಗುತ್ತವೆ. ಹೂಂ ಎಂದರೆ, ಕೋಪದಿಂದ ಅಪ್ಪಣೆ ನೀಡಿ ಸುಡಿಸಿದರು ಎಂದೇ ಅರ್ಥ. ಅಂದರೆ ಧರ್ಮರಾಯನ ಸಭೆಯಲ್ಲಿ ತಮ್ಮನ್ನು ವಿರೋಧಿಸಿದ ಚಾರ್ವಾಕನನ್ನು ಸುಡಿಸಿಕೊಂದಿದ್ದಾರೆ ಈ ಬ್ರಾಹ್ಮಣರು. ಅಷ್ಟೇ ಅಲ್ಲದೇ ಮುಂದೆ ಬ್ರಾಹ್ಮಣರನ್ನು ವಿರೋಧಿಸುವವರಿಗೆ ನೇರ ಎಚ್ಚರಿಕೆ ನೀಡುವುದರ ಜೊತೆಗೆ ನರಕದಲ್ಲಿ ಅನುಭವಿಸುವ ಶಿಕ್ಷೆ ಮತ್ತು ಯಾತನೆಗಳ ಭಯವನ್ನೂ ಕೂಡ ನೀಡಿ, ಬ್ರಾಹ್ಮಣ ವಿರೋಧಿ ಆಲೋಚನೆಯೇ ಅನೈತಿಕ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿದರು ಅಥವಾ ಆ ಬಗೆಯ ಪ್ರಯತ್ನಗಳು ನರಕ ಶಿಕ್ಷೆಯ ಕಾರಣಗಳನ್ನು ರೂಪಿಸುವ ದಿಕ್ಕಿನಲ್ಲಿ ನಡೆದವು. ನರಕದ ಬೆಚ್ಚಪ್ಪನನ್ನು ನಿಲ್ಲಿಸಿ ನೈತಿಕ ಭೀತಿಯನ್ನು ಉಂಟುಮಾಡಿದರು.

ವೈದಿಕರಿಗೇಕೆ ಕೋಪ?

ಬ್ರಾಹ್ಮಣರು ಅಷ್ಟೊಂದು ಆಗ್ರಹಕ್ಕೆ ಒಳಗಾಗುತ್ತಿದ್ದದ್ದು ಅದೂ ಚಾರ್ವಾಕನ ವಿಷಯದಲ್ಲಿ ಏಕೆಂದರೆ, ಚಾರ್ವಾಕರ ಮಾತುಗಳು ಸಂಪೂರ್ಣ ತಾರ್ಕಿಕವಾಗಿರುತ್ತಿದ್ದವು. ತರ್ಕಬದ್ಧವಾಗಿರುವ ಅವರ ಮಾತುಗಳನ್ನು ಕೇಳಿದರೆ ಯಾರಿಗೂ ಸುಳ್ಳು ಎಂದು ಎನಿಸುತ್ತಿರಲಿಲ್ಲ, ಭೌತಿಕವಾದವೂ ಆಗಿದ್ದರಿಂದ ನೇರ ಅನುಭವಕ್ಕೆ ಅವಕಾಶವಾಗುತ್ತಿದ್ದವು. ಆತ್ಮ ಪರಮಾತ್ಮ ಅಂತ ಕಾಗಕ್ಕಗುಬ್ಬಕ್ಕನ ಕಥೆಗಳನ್ನು ಹೊಸೆಯುತ್ತಿರಲಿಲ್ಲ, ಸಂಪೂರ್ಣ ನಾಸ್ತಿಕರೇ ಆಗಿದ್ದ ಚಾರ್ವಾಕನಿಗೆ ಯಾವ ಭಯವೂ ಇರಲಿಲ್ಲ, ಚಾರುವಾಕ, ಅಂದರೆ ಮನೋಹರವಾಗಿ ಅಥವಾ ಆಕರ್ಷಣೀಯವಾಗಿ




ಮಾತಾಡಬಲ್ಲವರಾಗಿದ್ದರು. ಇನ್ನು ಅವರ ಪ್ರಭಾವಕ್ಕೆ ಜನಸಾಮಾನ್ಯರು ಒಳಗಾಗಿಬಿಟ್ಟರೆ ವೈದಿಕ ಬ್ರಾಹ್ಮಣರ ಗೊಡ್ಡು ಮತ್ತು ಅವೈಚಾರಿಕ ವಿಷಯಗಳು ಸಹಜವಾಗಿಯೇ ನಗೆಪಾಟಲಿಗೆ ಈಡಾಗುತ್ತಿದ್ದವು ಹಾಗೂ ತಿರಸ್ಕಾರಕ್ಕೆ ಒಳಗಾಗುತ್ತಿದ್ದವು. ಆದ್ದರಿಂದಲೇ ಇಂಥಾ ಅರಿವನ್ನು ಹಂಚುವ ಮನುಷ್ಯನನ್ನು ಭೌತಿಕವಾಗಿ ನಾಶಪಡಿಸುವ ಆಗ್ರಹ ಅವರಲ್ಲಿ ಉಂಟಾಗಿತ್ತು. ವ್ಯಕ್ತಿಯು ಸತ್ತುಹೋದರೆ ಆತನ ಅರಿವನ್ನು, ವಿಚಾರವನ್ನು, ಆಲೋಚನೆಯನ್ನು ಭೌತಿಕವಾಗಿ ವಿಸ್ತರಿಸುತ್ತಾ ಮುಂದುವರಿಯಲಾಗುವುದಿಲ್ಲ ಎಂಬ ಆಕ್ರಮಣಕಾರಿ ಯೋಚನೆ ಮತ್ತು ಯೋಜನೆ ಅವರದಾಗಿತ್ತು.

ರಾಜಕೀಯಪ್ರೇರಿತ ಧರ್ಮ

ಇದರಲ್ಲಿ ಆರ್ಯರ ರಾಜಕೀಯವೂ ಇದೆ. ಅರಣ್ಯಕರು, ಮೂಲನಿವಾಸಿಗಳು ನೆಮ್ಮದಿಯಿಂದ ನೆಲಸಿರುತ್ತಿದ್ದ ಅರಣ್ಯ ಪ್ರದೇಶದೊಳಗೆ ವೈದಿಕ ಋಷಿಗಳು ಹೋಗುತ್ತಿದ್ದರು. ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ನಂತರ ಸಹಜವಾಗಿ ಆ ಅರಣ್ಯಕರ ಮತ್ತು ವೈದಿಕರ ನಡುವೆ ಸಾಂಸ್ಕೃತಿಕ ಸಂಘರ್ಷ ಉಂಟಾಗುತ್ತಿತ್ತು. ಸಾಮಾಜಿಕ ಬದುಕಿನ ವ್ಯತ್ಯಾಸ ಕಾಣುತ್ತಿತ್ತು. ಆಗಲೇ ವೈದಿಕರ ರಕ್ಷಣೆಗೆ ಕ್ಷತ್ರಿಯರ ದಂಡು ಬರುತ್ತಿತ್ತು. ಬುಡಕಟ್ಟಿನ ಅಥವಾ ಅಲ್ಲಿನ ಮೂಲನಿವಾಸಿಗಳನ್ನು ಓಡಿಸುತ್ತಿತ್ತು. ನಂತರ ಕ್ಷತ್ರಿಯರ ಪ್ರಭುತ್ವವೂ ಮತ್ತು ಬ್ರಾಹ್ಮಣರ ಪ್ರಭಾವವೂ ಅಲ್ಲಿ ನೆಲೆಗೊಳ್ಳುತ್ತಿತ್ತು. ಮೂಲನಿವಾಸಿಗಳು ನೆಲೆಗೆಡುತ್ತಿದ್ದರು ಅಥವಾ ಅವರ ಅಡಿಯಾಳಾಗುವ ಸನ್ನಿವೇಶ ಸೃಷ್ಟಿ ಮಾಡಲಾಗುತ್ತಿತ್ತು.

ಇದೇ ಮಾದರಿಯಲ್ಲಿ ಬ್ರಿಟಿಷ್ ಕೂಡ ನಡೆದುಕೊಳ್ಳುತ್ತಿದ್ದರು. ಆಫ್ರಿಕಾವೇ ಮೂಲನಿವಾಸಿಗಳ ತಾಣಕ್ಕೆ ಮೊದಲು ಬೈಬಲ್ ಹಿಡಿದ ಮಧುರ ಮಾತುಗಳ ಧರ್ಮಪ್ರಚಾರಕರು ಹೋಗುತ್ತಿದ್ದರು. ಅದರ ಹಿಂದೆ ಮದ್ಯವೂ ಹಿಂಬಾಲಿಸುತ್ತಿತ್ತು, ನಂತರ ದೊಡ್ಡ ದೊಡ್ಡ ಗನ್‌ಗಳು ಮತ್ತು ಅದರ ಹಿಂದೆ ಹಿಂದೆಯೇ ಯೂನಿಯನ್ ಜಾಕ್ ಧ್ವಜವೂ ಹೋಗಿ ನೆಲೆಗೊಳ್ಳುತ್ತಿದ್ದವು. ಅಲ್ಲಿಗೆ ಮೂಲನಿವಾಸಿಗಳು ತಮ್ಮದೇ ಸಾಂಸ್ಕೃತಿಕ ಸ್ಥಾನಮಾನದಿಂದ ಪತನಗೊಳ್ಳುತ್ತಿದ್ದರು. ತಾವು ಒಡೆಯರಂತೆ ಬಾಳುತ್ತಿದ್ದ ಭೂಮಿಯಲ್ಲಿ ಆಳುಗಳಾಗಿ ಪರಿವರ್ತನೆಗೊಳ್ಳುತ್ತಿದ್ದರು. ವಿಶ್ವದ ಅನೇಕ ಸಂಸ್ಕೃತಿಯ ಮೂಲಗಳನ್ನು ಕಲುಷಿತಗೊಳಿಸಿದ, ನಾಶ ಮಾಡಿದ ಕೀರ್ತಿ ಕ್ರೈಸ್ತ ಧರ್ಮ ಪ್ರಚಾರಕರಿಗಿದೆ. ವೈದಿಕರಂತೆ ಅವರೂ ಕೂಡ ಪ್ರಭುತ್ವದ ಜೊತೆಗೆ ಕೈಜೋಡಿಸಿರುವವರೇ. ವಿಶ್ವ ಮಟ್ಟದಲ್ಲಿ ಕ್ರೈಸ್ತಧರ್ಮದ ದುರಹಂಕಾರದ ಕಾಣಿಗೆಗಳೂ ಏನೇನೂ ಕಡಿಮೆ ಇಲ್ಲ. ಆದರೆ ಅಮೇರಿಕಾ, ಆಫ್ರಿಕಾ, ಇಂಗ್ಲೆಂಡ್‌ನಂತಹ ಐರೋಪ್ಯ ದೇಶಗಳಲ್ಲಿ ಜನಾಂಗೀಯ ಭೇದಗಳು, ಭಾರತದಂತಹ ರಾಷ್ಟ್ರಗಳಲ್ಲಿ ಜಾತಿಭೇದಗಳಿಗೆ ಒಳಗಾಗಿ ತುಳಿತಕ್ಕೆ ಒಳಗಾಗಿದ್ದ ಜನಸಮುದಾಯಗಳು ಸಾಮಾಜಿಕ ಸ್ಥಾನಮಾನ ಮತ್ತು ಶಿಕ್ಷಣ ಇವುಗಳನ್ನು ಪಡೆದಿದ್ದು ಕ್ರೈಸ್ತ ಧರ್ಮಪ್ರಚಾರಕರಿಂದಲೇ ಎಂಬುವ ಮಾತೂ ನಿಜ. ಆದರೆ ಧರ್ಮದ ಅಫೀಮನ್ನು ಉಣಬಡಿಸದೇ ಅದನ್ನು ಮಾಡಲು ಅಷ್ಟೇ ಪ್ರಭಾವವುಳ್ಳ ಬೇರೆ ಯಾವ ಪರ್ಯಾಯ ಕ್ಷೇತ್ರವಿದೆ ಎಂದು ಆ ಕಾಲದಮಟ್ಟಿಗೆ ಯೋಚಿಸಲು ಹೋದರೆ ಸದ್ಯಕ್ಕೆ ಹೊಳೆಯಲಾರದು. ಜಾತಿಯ ದೌರ್ಜನ್ಯಕ್ಕೆ ಸಿಕ್ಕು ನರಳುತ್ತಿದ್ದ ಕಾಲದಲ್ಲಿ ಲೌಕಿಕ ಮತ್ತು ಸಾಮಾಜಿಕ ತೃಪ್ತಿಗೆ ಕ್ರೈಸ್ತರ ಧರ್ಮಪ್ರಚಾರಕರು ತೆರೆದ ಬಾಗಿಲುಗಳು ಸಾಮಾನ್ಯ ಶೋಷಿತರಿಗೆ ಒಂದು ವರದಾನವೇ ಆಗಿಹೋಯ್ತು.

ಚಾರ್ವಾಕರ ಬೆಚ್ಚನೆಯ ಲೌಕಿಕ ಮತ್ತು ಭೌತಿಕ ತರ್ಕಗಳು ಜನರಿಗೆ ಮುದ ಕೊಡುತ್ತಿದೆ ಎಂದು ತಿಳಿದಾಗ ವೈದಿಕರು ನರಕದ ಬೆಚ್ಚಪ್ಪನನ್ನು ಅನೇಕ ಕಡೆಗಳಲ್ಲಿ ನಿಲ್ಲಿಸಿರುತ್ತಿದ್ದರು. ಅವುಗಳಲ್ಲಿ ಗರುಡ ಪುರಾಣವೂ ಒಂದು. ಹಾಗೆಂದಕೂಡಲೇ ಹಿಂದೂಗಳಲ್ಲಿ ಗುರುತಿಸಿಕೊಳ್ಳದವರಲ್ಲಿ ನರಕದ ಭೀತಿ ತಪ್ಪಿತು ಎಂದೇನಿಲ್ಲ, ಕ್ರೈಸ್ತ ಇಸ್ಲಾಂ ಮೊದಲ್ಗೊಂಡು ಇತರ ಧಾರ್ಮಿಕತೆಗಳಲ್ಲೂ ನರಕದ ಬೆಚ್ಚಪ್ಪಗಳಿದ್ದಾರೆ. ■



ಕರಾವಳಿಯ ವೈದಿಕರಿಗಿಂತ ಟಿಪ್ಪು ಸುಲ್ತಾನನೇ ವಾಸಿ



"ಟಿಪ್ಪುವಿನ ನಿಜಸ್ವರೂಪ ಅರಿಯಲು ಸ್ಥಳನಾಮಗಳ ಅಧ್ಯಯನ ಮಾಡಿದರೆ ಸಾಕು ಆತ ಬಹಳಷ್ಟು ಕನ್ನಡ ಊರುಗಳ ಹೆಸರುಗಳನ್ನು ಬದಲಿಸಿದ ರೀತಿಯಿಂದ ಆವನ ಮತಾಂಧತೆ ಗೊತ್ತಾಗುತ್ತದೆ" ಎಂದು ಎಸ್.ಎಲ್. ಭೈರಪ್ಪನವರು ಹೇಳಿದ್ದಾರೆ. ಟಿಪ್ಪು ಕೆಲವು ದೊಡ್ಡ ನಗರಗಳ ಮೂಲ ಕನ್ನಡ ಹೆಸರು ಬದಲಿಸಿ ಪರ್ಶಿಯನ್ ಹೆಸರು ಇಡಲು ಬಯಸಿದ್ದು ನಿಜ. ಆದರೆ ವೈದಿಕರ ನಿಜಸ್ವರೂಪ ಅರಿಯಲು ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಪ್ರತಿ ಹಳ್ಳಿ ಪ್ರತಿ ಪಟ್ಟಣದ ತುಳು/ಕನ್ನಡ ಹೆಸರು ಬದಲಿಸಿ ವೈದಿಕರು ಇಟ್ಟಿರುವ ವಿಕಾರ ಸಂಸ್ಕೃತ ಹೆಸರನ್ನು ಅಧ್ಯಯನ ಮಾಡಿದರೆ ಸಾಕು; ವೈದಿಕರ ಸಂಕುಚಿತ ಬುದ್ಧಿ ಹಾಗೂ ಕುತಂತ್ರ ಗೊತ್ತಾಗುತ್ತದೆ.

ಉಡುಪಿ-ಮಂಗಳೂರು ಜಿಲ್ಲೆಯಲ್ಲಿ ಎಲ್ಲಾ ಹಳ್ಳಿ ಮತ್ತು ನಗರಗಳಿಗೂ ಎರಡೆರಡು ಹೆಸರುಗಳಿವೆ. ಒಂದು ಮೂಲ ತುಳು-ಕನ್ನಡ ಹೆಸರು ಹಾಗೂ ಇನ್ನೊಂದು ಮೇಲ್ಜಾತಿಯವರು ಇಟ್ಟ ಸಂಸ್ಕೃತ ಹೆಸರು. ಮಂಗಳೂರು ನಗರಕ್ಕೆ ಒಂದಲ್ಲ ಎರಡಲ್ಲ ಐದೈದು ಹೆಸರುಗಳು ಇರುವುದು ವಿಶ್ವ ರಿಕಾರ್ಡ್. ಇದಕ್ಕೆ ಕಾರಣ ಸ್ಥಳೀಯರ ತುಳು-ಕನ್ನಡ ಭಾಷೆಗಿಂತ ತಮ್ಮ ಸಂಸ್ಕೃತ ಭಾಷೆ ಶ್ರೇಷ್ಠ ಎಂಬ ವೈದಿಕರ ಹೀನ ಮನೋಭೂಮಿಕೆ.

ಕರಾವಳಿಯ ಶೂದ್ರರು ಭೂತಾರಾಧನೆ ಮತ್ತು ನಾಗಾರಾಧನೆ ಮಾಡುವವರಾಗಿದ್ದು ಅವರು ಶತಮಾನಗಳಿಂದ ಆರಾಧಿಸುವ ಭೂತ-ದೈವಗಳ ತುಳು/ಕನ್ನಡ ಹೆಸರುಗಳನ್ನು ಬದಲಿಸಿ ಸಂಸ್ಕೃತ ಹೆಸರು ಇಟ್ಟು ತುಳುವ ಶೂದ್ರರನ್ನು ಘೋರವಾಗಿ ಅವಮಾನಿಸಿರುವುದೂ ಇದೇ ವೈದಿಕರು. ಎಲ್ಲಾ ಭೂತ ದೈವಗಳ ಹೆಸರನ್ನು ತಪ್ಪುತಪ್ಪಾಗಿ ಸಂಸ್ಕೃತಿಕರಣ ಮಾಡಿರುವುದಲ್ಲದೇ ಕೆಲವು ಭೂತ-ದೈವಗಳ ಲಿಂಗಪರಿವರ್ತನೆ ಸಹ ವೈದಿಕರು ಮಾಡಿಬಿಟ್ಟಿದ್ದಾರೆ. ಹೀಗೆ ದೇವರ ಲಿಂಗ ಪರಿವರ್ತನೆಯಂತಹ ಘೋರಪಾಪ ಜಗತ್ತಿನಲ್ಲಿ ಬೇರೆ ಎಲ್ಲಿಯೂ ಆಗಿಲ್ಲ. ಗಂಡು ದೈವಗಳಾದ ಲೆಕ್ಕೆಸಿರಿ, ಕೊಡಮಂದಾಯ, ಜುಮಾದಿ ಮತ್ತು ಉಲ್ಲಾಯ ಇವುಗಳ ಹೆಸರು ರಕ್ತೇಶ್ವರಿ, ಕುಂಭಕಂಠಿಣಿ, ಧೂಮಾವತಿ, ಖಡ್ಗೇಶ್ವರಿ ಎಂದು ಹೆಣ್ಣು ದೈವವಾಗಿ ಲಿಂಗ ಪರಿವರ್ತನೆ ಮಾಡಿದವರು ವೈದಿಕರು.

ಮೊದಲೆಲ್ಲಾ ಹೆಂಗಸರು ಯಾವುದೇ ಕಾಲದಲ್ಲೂ ಭೂತ-ದೈವಗಳ ಗುಡಿಗೆ ಹೋಗಬಹುದಿತ್ತು. ಆದರೆ ಭೂತಾರಾಧನೆಯಲ್ಲಿ ವೈದಿಕರ ಪ್ರವೇಶವಾದ ಮೇಲೆ ಹಲವು ಭೂತ-ದೈವಗಳ ಗುಡಿಯೊಳಗೆ ಹೆಂಗಸರು ಹೋಗಬಾರದೆಂಬ ತುಚ್ಛ ನಿಯಮ ವೈದಿಕರು ಶೂದ್ರರ ಮೇಲೆ ಹೇರಿ ತುಳುನಾಡಿನ ಮಾತೃ ಸಂಸ್ಕೃತಿಗೆ ಘೋರ ಅವಮಾನ ಮಾಡಿದ್ದಾರೆ. ಇವರಿಗೆ ಬೆಂಗಾವಲಾಗಿ ನಿಂತಿರುವವರು ಅರೆ-ವೈದಿಕರೆನಿಸಿರುವ ಬಂಟರ ಜಾತಿಯವರು. ಈ ನೀಚ ಕೆಲಸ ಮಾಡಲು ವೈದಿಕರು ಮತ್ತು ಬಂಟರು ಶೂದ್ರರನ್ನು ಕೇಳದೇ ತಮಗೆ ತಾವೇ ಅಧಿಕಾರ ಕೊಟ್ಟುಕೊಂಡಿದ್ದಾರೆ. ಇದನ್ನೆಲ್ಲಾ ಭೈರಪ್ಪನವರು ಅಧ್ಯಯನ ಮಾಡಿದರೆ ಕರಾವಳಿಯ ವೈದಿಕರಿಗಿಂತ ಟಿಪ್ಪು ಸುಲ್ತಾನನೇ ಎಷ್ಟೋ ವಾಸಿ ಎಂದು ಹೇಳುವುದು ಖಂಡಿತ!

-ಜಿ. ರವಿಕಿರಣ್ ರೈ, ಮಂಗಳೂರು



ಮೋದಿ ಹೆಸರಲ್ಲಿ ಇದ್ದ ಉಮೇದು ಈಗ 'ಕುಮೇದು' ಆಗಿದೆ

ಓಮಾನ್ ದೇಶದಿಂದ ಕರ್ನಾಟಕದ ಕರಾವಳಿಗೆ ಆಮದು ಆಗುತ್ತಿರುವ ಭೂತಾಯಿ ಮೀನಿಗೆ ಮೋದಿ-ಬೂತಾಯಿ ಎಂದು ನಾಮಕರಣ ಮಾಡಲಾಗಿದೆ.



ಇದಕ್ಕೆ ಕಾರಣ ಈ ಮೀನು ಕಳೆದ ವರ್ಷ ಭಾರತದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಗುಜರಾತಿನಲ್ಲಿ ಆಮದು ಮಾಡಲಾಯಿತು. ಆದಕ್ಕೆ ಮೊದಲು ಭಾರತ ಮೀನು ರಫ್ತು ಮಾಡುತ್ತಿತ್ತೇ ವಿನಃ ಎಂದೂ ಮೀನು



ಆಮದು ಮಾಡಿರಲಿಲ್ಲ. ಕಳೆದ ವರ್ಷದಿಂದ ಓಮಾನಿಗೆ ಗುಜರಾತಿನಿಂದ ದನದ ಮಾಂಸ ರಫ್ತು ಮಾಡಿ ಆದಕ್ಕೆ ಬದಲಾಗಿ ಮೀನು ಆಮದು ಮಾಡಿಕೊಳ್ಳಲಾಗುತ್ತಿದೆ. ಮೀನು ಆಮದು ಸಹ ಅದಣಿ-ವಿಲ್ಮರ್ ಎಂಬ ಮೋದಿ ಆಪ್ತ ಜೈನ ಅದಣಿ ಕಂಪನಿಯ ಮುಖಾಂತರ ಆಗುತ್ತಿದೆ ಎಂಬ ವರದಿಯಿದೆ. ಆದೇನೇ ಇರಲಿ ಮೋದಿ ಸಸ್ಯಾಹಾರಿ ಆಗಿದ್ದರೂ ಅವರ ಹೆಸರನ್ನು ಮೀನಿಗೆ ಇಟ್ಟಿರುವುದು ಸಮಂಜಸವಾಗಿದೆ. ಯಾಕೆಂದರೆ ಈಗಲೂ ಈ ಮೀನು ಗುಜರಾತಿನ ಬಂದರಿಗೆ ಆಮದಾಗಿ ಅಲ್ಲಿಂದ ಮುಂಬೈ, ಗೋವಾ ಮತ್ತು ನಮ್ಮ ಕರಾವಳಿಗೆ ಪೂರೈಕೆ ಆಗುತ್ತಿದೆ. ಹೀಗಾಗಿ ಆದರ ಸಾಗಾಣಿಕೆಗೆ ಕೆಲವು ದಿನಗಳು ತಗಲುತ್ತವೆ. ಎಷ್ಟೇ ಉತ್ತಮ ಫ್ರೀಜರ್‌ನಲ್ಲಿ ಮೀನು ಇಟ್ಟು ಸಾಗಾಣಿಕೆ ಮಾಡಿದರೂ ಸ್ವಲ್ಪ ದಿನಗಳ ನಂತರ ಅದರ ತಾಜಾತನ ನಾಶವಾಗಿ ಮಾರುಕಟ್ಟೆಗೆ ಬಂದಾಗ ಸ್ವಲ್ಪ ಸಮಯಕ್ಕೇ ಕುಮೇದು (ಕೊಳೆತ) ವಾಸನೆ ಬರಲು ಶುರುವಾಗುತ್ತದೆ. ಎರಡು ವರ್ಷಗಳ ಹಿಂದೆ ಮೋದಿಯ ಹೆಸರಲ್ಲಿ ಓಟು ಕೊಡುವಾಗ ಜನರಲ್ಲಿ ಭಾರಿ ಉಮೇದು ಇತ್ತು, ಜನರ ಆ ಉಮೇದು ಈಗ ಕುಮೇದು (ಕೊಳೆತು) ಹೋಗಿದೆ. ಮತದಾರರ ನಿರೀಕ್ಷೆಗಳೆಲ್ಲಾ ತಲೆಕೆಳಗಾಗಿವೆ. ದಿನನಿತ್ಯದ ಅಗತ್ಯ ವಸ್ತುಗಳ ಬೆಲೆಗಳೆಲ್ಲಾ ಮೋದಿ ಬಂದ ಮೇಲೆ ವಿಪರೀತ ಏರಿವೆ. ಆದಕ್ಕಾಗಿ ಓಮಾನಿನ ಕೊಳೆತ ಬೂತಾಯಿಗೆ ಮೋದಿಯ ಹೆಸರು ಇಟ್ಟಿರುವುದು ಸರಿಯಾಗಿದೆ ಬಿಡಿ.


ನಿಜವಾಗಿ ತೊಗರಿ ಬೇಳೆ ಮತ್ತು ಉದ್ದಿನ ಬೇಳೆಗೆ "ಮೋದಿ-ಬೇಳೆ" ಎಂಬ ಹೆಸರು ಸರಿಯಾಗಿರುತ್ತಿತ್ತು, ಯಾಕೆಂದರೆ ಮನಮೋಹನ್ ಸಿಂಗ್ ಸರಕಾರವಿದ್ದಾಗ ಉದ್ದಿನ ಬೇಳೆ ಮತ್ತು ತೊಗರಿ ಬೇಳೆ ಇವುಗಳ ಕ್ರಯ ಕೆ.ಜಿ.ಗೆ ಕೇವಲ ರೂ.75/- ರ ಒಳಗೆಯೇ ಇರುತ್ತಿತ್ತು, ಆದರೆ ಮೋದಿ ಅಧಿಕಾರಕ್ಕೆ ಬಂದು ಆರು ತಿಂಗಳೊಳಗೇ ಬೇಳೆಕಾಳುಗಳ ಕ್ರಯ ಮೂರು ಪಟ್ಟು ಏರಿ ರೂ. 230ರ ಗಡಿ ದಾಟಿದೆ. ಆಫ್ರಿಕಾದಲ್ಲಿ ತೊಗರಿ ಬೇಳೆ ಈಗಲೂ ಕೆ.ಜಿ.ಗೆ ಕೇವಲ 40 ರೂಪಾಯಿ ಇದ್ದರೆ, ನಮ್ಮಲ್ಲಿ ಮಾತ್ರ ಕೆ.ಜಿ.ಗೆ ರೂ. 240 ಇದೆ. ಬೂತಾಯಿ ಮೀನು ಓಮನಿನಿಂದ ಆಮದು ಮಾಡುವ ಬದಲು ಆಫ್ರಿಕಾದಿಂದ ತೊಗರಿಬೇಳೆ ಯಾಕೆ ಆಮದು ಮಾಡಿ ಅದಕ್ಕೆ ಮೋದಿ-ಬೇಳೆ ಎಂದು ಹೆಸರಿಡಬಾರದು?

ಜತೆಗೆ ಪೆಟ್ರೋಲಿಗೂ 'ಮೋದಿ ಪೆಟ್ರೋಲ್' ಎಂಬ ಹೆಸರಿಡಬೇಕು. ಕಾರಣ ಯುಪಿಎ ಸರಕಾರದ ಸಮಯದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಬ್ಯಾರಲ್‌ಗೆ ರೂ. 130 ಇದ್ದಾಗ ಭಾರತದಲ್ಲಿ ಪೆಟ್ರೋಲ್ ಬೆಲೆ ಲೀಟರಿಗೆ ಕೇವಲ 78 ರೂಪಾಯಿ ಮಾತ್ರ ಇತ್ತು, ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರಲ್ಲಿಗೆ ಕೇವಲ 40 ಡಾಲರಿಗೆ ಇಳಿದಿರುವಾಗ ಭಾರತದಲ್ಲಿ ಪೆಟ್ರೋಲ್ ಬೆಲೆ ಸಹ ಲೀಟರಿಗೆ 35 ರೂಪಾಯಿಗೆ ಇಳಿಯಬೇಕಿತ್ತು. ಆದರೆ ಮೋದಿಯ ಕೃಪೆಯಿಂದ ಈಗಲೂ ಪೆಟ್ರೋಲ್ ಬೆಲೆ ಲೀಟರಿಗೆ 72 ರೂಪಾಯಿ ಇದೆ. ಹಾಗಾಗಿ ಪೆಟ್ರೋಲಿಗೂ 'ಮೋದಿ ಪೆಟ್ರೋಲ್' ಎಂಬ ಹೆಸರೇ ಸರಿ. ಜತೆಗೆ ಮೋದಿ ಬಂದಮೇಲೆ ವಿಪರೀತ ದುಬಾರಿಯಾಗಿರುವ ಎಲ್ಲಾ ನಿತ್ಯಬಳಕೆಯ ವಸ್ತುಗಳಿಗೂ ಮೋದಿಯ ಹೆಸರೇ ಕೊಟ್ಟರೆ ಅವರ ಹೆಸರು ಅಜರಾಮರವಾಗುತ್ತದೆ!

-ಅಭಿಷೇಕ್ ಪಡಿವಾಲ್, ಸುಳ್ಯ

ಮನುವಾದಿಗಳೇ ಹೊಸ ಸಂವಿಧಾನಕರ್ತರಾಗಬಹುದು

ಭಾರತದಲ್ಲಿ ಪ್ರಜಾಪ್ರಭುತ್ವ ನಾಶವಾಗಿ ಸರ್ವಾಧಿಕಾರಿಯ



ಆಡಳಿತ ಬಂದರೂ ಪರವಾಗಿಲ್ಲ ಆವನು ಮೋದಿಯಂತೆ ಧರ್ಮದ ಹಾದಿಯಲ್ಲಿ ನಡೆಯುವವನಾಗಿದ್ದರೆ ಸರ್ವಾಧಿಕಾರವೂ ತನಗೆ ಪ್ರಜಾಪ್ರಭುತ್ವಕ್ಕಿಂತ ಹೆಚ್ಚುಪ್ರಿಯ ಎಂದು ಒಂದು ಕನ್ನಡ ಪತ್ರಿಕೆಯ (ವಿಜಯವಾಣಿ, 31-5-2016) ಅಂಕಣಕಾರ ಕೆ.ಎಸ್.ನಾರಾಯಣಾಚಾರ್ಯ ಎಂಬವನು ಬರೆದಿದ್ದಾನೆ (ವಾಲ್ಮೀಕಿ ಋಷಿಯೂ ಹುಟ್ಟಿನಿಂದ ಬ್ರಾಹ್ಮಣ ಎಂದಿದ್ದು ಈತನೇ!). ಮೋದಿಯವರ ಸರ್ವಾಧಿಕಾರಿ ಮನೋಭಾವದ ಬಗ್ಗೆ ಕೇಳಿದ ಪ್ರಶ್ನೆಗೆ ಈ ವೈದಿಕ ಅಂಕಣಕಾರ ಈ ಮೇಲಿನಂತೆ ಉತ್ತರ ಕೊಟ್ಟಿದ್ದು, ಈ ಲೇಖಕನಿಗೆ ಮೋದಿ ಧರ್ಮದ ಹಾದಿಯಲ್ಲಿ ನಡೆಯುವ ರಾಜರ್ಷಿಯಂತೆ ಕಂಡಿದ್ದು ಈ ಕೆಳಗಿನ ಕಾರಣಗಳಿಗಾಗಿ ಇರಬಹುದೇ?

ತನ್ನದೇ ಬಿಜೆಪಿ ಪಕ್ಷದ ಹಿರಿಯ ಹಿರೇನ್ ಪ[...] ತನ್ನ ಮುಖ್ಯಮಂತ್ರಿ ಪದದ ಹಾದಿಗೆ ಮುಳ್ಳಾಗಿದ್ದಾ[...] ಅವರನ್ನು ಭೀಕರವಾಗಿ ಗುಂಡಿಟ್ಟು ಕೊಲ್ಲಿ[...] ಗೋಧ್ರೋತ್ತರ ಕೋಮುಗಲಭೆ ಹುಟ್ಟುಹಾಕಿ ಸಾವಿ[...] ಜನರ ಮರಣಕ್ಕೆ ಕಾರಣವಾಗಿದ್ದು; ನಕಲಿ ಎನ್‌ಕೌಂಟ[...] ಅಮಾಯಕರನ್ನು ಕೊಂದಿದ್ದು; ತನ್ನ ಪತ್ನಿಯನ್ನು ವಿನಾ[...] ದೂರ ಮಾಡಿ ಅವಳ ಜೀವನ ಹಾಳುಮಾ[...] ಹದಿನೇಳನೇ ವರ್ಷಕ್ಕೇ ತನ್ನ ತಂದೆ-ತಾಯಿ[...] ದೂರಮಾಡಿ ಅವರಿಗೆ ವಿಪರೀತ ಮಾನಸಿಕ [...] ಕೊಟ್ಟಿದ್ದು; ತನ್ನ ರಾಜ್ಯದ ಸಿಐಡಿ ಮೂಲಕ [...] ಹೆಣ್ಣುಗಳ ಬದುಕಿನಲ್ಲಿ ಇಣುಕಿ ಅವರ ಕುಟುಂಬದ[...] ಹಿಂಬಾಲಿಸುವುದು; ಮೋಸದಿಂದ ನಕಲಿ ಬಿಎ/ಎ[...] ಪದವಿ ಪಡೆದದ್ದು; ಮಾಲೆಗಾಂವ್‌ನಲ್ಲಿ ಬಾಂಬ್ [...] ಮಾಡಿ ನೂರಾರು ಅಮಾಯಕರನ್ನು ಕೊಂದ ನರ[...] ಹಿಂದೂ ಉಗ್ರವಾದಿಗಳನ್ನು ಶಿಕ್ಷೆಯಿಂದ ಪಾರುಮಾ[...] ಗೋಮಾತೆಯ ಹೆಸರಲ್ಲಿ ಹಲವರನ್ನು ಹೊ[...] ಕೊಲ್ಲುವುದಕ್ಕೆ ದುಷ್ಟ ಸಂಘಟನೆಗಳಿಗೆ ಅನುವು [...] ಕೊಟ್ಟಿದ್ದು; ದೊಡ್ಡ ಉದ್ಯಮಿಗಳಿಗೆ ಬಡ ರೈತರ ಭೂ[...] ಕವಡೆ ಬೆಲೆಗೆ ಧಾರೆ ಎರೆದಿದ್ದು; ಗುಜರಾತ್ [...] ಹೆಸರಲ್ಲಿ ಬ್ಯಾಂಕುಗಳಿಗೆ ಇಪ್ಪತ್ತು ಸಾವಿರ ಕೋಟಿ ಪ[...] ಮಾಡಿದ್ದು... ಹೀಗೆ ಮೋದಿ ಮಾಡಿರುವುದೆಲ್ಲಾ ಧ[...] ಹಾದಿಯಲ್ಲಿ ಮಾಡಿರುವ ಘನ ಕೆಲಸಗಳೇ ಧೃ[...] ಅಂಕಣಾಚಾರ್ಯರೇ?


ಭಾರತದ ಹಿಂದಿನ ಯಾವುದೇ ಪ್ರಧಾನಮಂತ್ರಿ[...] ಇಷ್ಟೊಂದು ಘೋರ ಆರೋಪಗಳನ್ನು ಹೊತ್ತಿ[...] ಹೀಗಿದ್ದರೂ ಇಂತಹ ವ್ಯಕ್ತಿಯ ಸರ್ವಾಧಿಕಾರ [...] ಸಂಪೂರ್ಣ ಸಮ್ಮತ ಎಂದು ಆ ಅಂಕಣಕಾರ ಬರೆ[...] ಎಂತೆಂತಹ ಸಂಕುಚಿತ ಬುದ್ಧಿಯವರ ಕೈಯಲ್ಲಿ ಮೀಡಿ[...] ಸಿಕ್ಕಿ ಬಿದ್ದಿದೆ ಎಂಬುದಕ್ಕೆ ಸಾಕ್ಷಿ. ಇಂದಿರಾ ಗಾ[...] ಎಮರ್ಜನ್ಸಿ (1975-78) ಕಾಲದಲ್ಲಿ ಭಾರತದ ಸಂವಿ[...] ಬದಿಗಿಟ್ಟು ಸರ್ವಾಧಿಕಾರಿಯಾಗಿ ವರ್ತಿಸಿದ್ದು ನಿಜ. [...] ಆಗ ಅವರಿಗೆ ಕಾಂಗ್ರೆಸ್ ಪಕ್ಷ ಸಹ ಪೂರ್ಣ[...] ಬೆಂಬಲಿಸಿರಲಿಲ್ಲ. ಅವರದೇ ಪಕ್ಷದ ಜಗಜೀವನರಾ[...] ಇಂದಿರಾರನ್ನು ಬಹಿರಂಗವಾಗಿ ವಿರೋಧಿಸಿ[...] ಮೀಡಿಯಾವೂ ಇಂದಿರಾ ವಿರುದ್ಧ ಸೆಟೆದುನಿಂತಿತ್ತು. [...] ಈಗ ಮೋದಿ ಸರ್ವಾಧಿಕಾರಿಯಾದರೆ ಅವರ [...] ಇಡೀ ಸಂಘ ಪರಿವಾರ, ಬಿಜೆಪಿ ಹಾಗೂ ಹೆ[...] ಮೀಡಿಯಾ ನಿಲ್ಲಲಿದೆ. ಧರ್ಮದ ಹೆಸರಲ್ಲಿ ನಮ್ಮ ದೇ[...] ಭಯಂಕರ ಉತ್ಪಾತ ನಡೆಸಿ ಸಂಘ ಪರಿವಾರವೇ ಸಂಪೂ[...] ಆಡಳಿತ ತಮ್ಮ ಕೈಗೆ ತೆಗೆದುಕೊಂಡು ಸಂವಿಧಾನ[...] ಗಾಳಿಗೆ ತೂರಿ ತಮ್ಮ ಧಾರ್ಮಿಕ ಗ್ರಂಥಗಳನ್ನೇ ಸಂವಿ[...] ಮಾಡುವುದು ಖಂಡಿತಾ ಹಾಗೂ ನಾರಾಯಣಾ[...]ಯಂತಹ ಮನುವಾದಿಗಳೇ ಹೊಸ ಸಂವಿಧಾನಕರ್ತ[...]ಗಬಹುದು. ಭಾರತೀಯರು ಈಗಲೇ ಎಚ್ಚೆತ್ತುಕೊಳ್ಳದಿ[...] ಮೋದಿ ಎಂಬ ಸರ್ವಾಧಿಕಾರಿಯ ಅಚ್ಛೇ ದಿನ್ ಬರುವ[...] ಖಚಿತ.

-ಹರೀಶ್ ಎಮ್.ಆರ್, ಉಡ[...]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ [...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. [...] ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗ[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹು[...]

ನಾಲ್ಕು ಭಾವಗಳ ಕಥನ 'ನಿರುತ್ತರ'

ಕನ್ನಡದ ಹೆಸರಾಂತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಪುತ್ರ ಅಪೂರ್ವ ಕಾಸರವಳ್ಳಿ 'ನಿರುತ್ತರ' ಸಿನಿಮಾದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ತಮ್ಮ ಚೊಚ್ಚಲು ಸಿನಿಮಾದ ಬಗ್ಗೆ ಇಲ್ಲಿ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ.



ಈವರೆಗೂ ತಂದೆಯ ಜತೆಗೆ ಸಾಕಷ್ಟು ಸಿನಿಮಾಗಳಲ್ಲಿ ಕೆಲಸ ಮಾಡಿರುವ ಅಪೂರ್ವ ಕಾಸರವಳ್ಳಿ ಇದೇ ಮೊದಲ ಬಾರಿಗೆ ಸಿನಿಮಾವೊಂದನ್ನು ನಿರ್ದೇಶಿಸುತ್ತಿದ್ದಾರೆ. 'ನಿರುತ್ತರ' ಹೆಸರಿನ ಸಿನಿಮಾದ ಬಹುತೇಕ ಶೂಟಿಂಗ್ ಮುಗಿದಿದ್ದು ಮೊನ್ನೆಯಷ್ಟೇ ಹಾಡುಗಳು ಲೋಕಾರ್ಪಣೆ ಆಗಿವೆ. ಹಲವು ಕಾರಣಗಳಿಂದಾಗಿ ಚಿತ್ರ ನಿರೀಕ್ಷೆ ಮೂಡಿಸಿದ್ದು, ಇದು ಹಲವು ಪ್ರಥಮಗಳಿಗೂ ಸಾಕ್ಷಿಯಾಗಿದೆ. ಈ ಕುರಿತು ಅಪೂರ್ವ ಪತ್ರಿಕೆಯ ಜತೆ ಮಾತಾಡಿದ್ದಾರೆ.

** ಮನೆಯಲ್ಲಿ ಸಿನಿಮಾ ವಾತಾವರಣ ಇದ್ದರೂ ನೀವು ತಡವಾಗಿ ಸಿನಿಮಾ ರಂಗಕ್ಕೆ ಬಂದಿದ್ದೀರಿ ಅಂತ ಅನಿಸ್ತಾ ಇಲ್ಲವಾ?*

ಸಿನಿಮಾ ನಿರ್ದೇಶನಕ್ಕೆ ತಡವಾಗಿ ಬಂದಿರಬಹುದು. ಆದರೆ, ಸಿನಿಮಾ ಕಾರ್ಯದಲ್ಲಿ ತುಂಬಾ ವರ್ಷಗಳಿಂದಲೇ ತೊಡಗಿಕೊಂಡಿದ್ದೇನೆ. ಅಪ್ಪನ ಜತೆ ಸಾಕಷ್ಟು ಕೆಲಸ ಮಾಡಿದ್ದೇನೆ. ಅಲ್ಲದೇ ಅಮ್ಮನ ಜತೆಯೂ ಕೆಲಸ ಮಾಡಿದ್ದೇನೆ. ಸ್ವತಂತ್ರವಾಗಿ ನಿರ್ದೇಶನ ಮಾಡೋಕೆ ಕೊಂಚ ತಡವಾಯಿತು. ಅದಕ್ಕೆ ಕಾರಣ, ಬೇರೆ ಬೇರೆ ಕಾರ್ಯದಲ್ಲಿ ನಾನು ತೊಡಗಿಕೊಂಡಿದ್ದು.

** ನೀವು ಮತ್ತು ನಿಮ್ಮ ಸಹೋದರಿ ಏಕಕಾಲಕ್ಕೆ ಸಿನಿಮಾ ನಿರ್ದೇಶನಕ್ಕೆ ಇಳಿದಿದ್ದೀರಿ. ಏನಿದರ ಗುಟ್ಟು?*

ಗುಟ್ಟು ಅಂತ ಏನಿಲ್ಲ. ಅನನ್ಯ ತನ್ನ ಪಾಡಿಗೆ ತಾನು ಸಿನಿಮಾ ಮಾಡುತ್ತಿದ್ದಾಳೆ. ನನ್ನ ಪಾಡಿಗೆ ನಾನು ಮಾಡುತ್ತಿದ್ದೇನೆ. ಈಗ ನಮ್ಮ ಮನೆಯೆಲ್ಲಾ ಸಿನಿಮಾ ಮಯ ಆಗಿದೆ. ಇಬ್ಬರಿಗೂ ಒಟ್ಟಿಗೆ ಅವಕಾಶ ಸಿಕ್ಕಿರುವುದರಿಂದ ಅದನ್ನು ಬಳಸಿಕೊಳ್ಳುತ್ತಿದ್ದೇವೆ.

** ನಿಮ್ಮ ಸಿನಿಮಾ, ನಿಮ್ಮ ತಂದೆಯ ಹಾದಿಯಲ್ಲೇ ಇರುತ್ತಾ? ಅಥವಾ ವಿಭಿನ್ನ ಮಾರ್ಗದಲ್ಲಿ ಸಾಗುತ್ತಿದ್ದೀರಾ?*

ಅಪ್ಪನ ಸಿನಿಮಾದಲ್ಲಿ ಸಮಾಜದ ಜತೆಗಿನ ಸಂಘರ್ಷ ಇರುತ್ತದೆ. ಅವರು ಕತೆಯನ್ನು ಆ ರೀತಿ ನೋಡುತ್ತಾರೆ. ಆದರೆ ನಾನು ವ್ಯಕ್ತಿಗಳ ಭಾವನೆಗಳ ಜತೆ ಹೊರಡುತ್ತೇನೆ. ಹೀಗಾಗಿ ನೋಡುವ ಕ್ರಮದಲ್ಲಿ ಖಂಡಿತಾ ಬದಲಾವಣೆ ಇದ್ದೇ ಇರುತ್ತದೆ. ಅಪ್ಪನ ಸಿನಿಮಾದಿಂದಾಗಿ ಸಾಕಷ್ಟು ಕಲಿತಿದ್ದೇನೆ. ಆದರೂ ನನ್ನದೇ ಆದ ಹಾದಿಯಲ್ಲಿ ಹೋಗಲು ಇಷ್ಟಪಡುತ್ತೇನೆ.

** 'ನಿರುತ್ತರ'ವನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ?*

ಒಳ್ಳೆಯ ಸ್ಕ್ರಿಪ್ಟ್‌ಗಾಗಿ ಹುಡುಕುತ್ತಿದ್ದೆ. ಈ ಸಮಯದಲ್ಲಿ ವಿಕ್ರಮ್ ಹತ್ವಾರ್‌ರ ಕತೆ ಸಿಕ್ಕಿತು. ತುಂಬಾ ಚೆನ್ನಾಗಿದೆ ಅನಿಸಿತು. ನಾನು ಯಾವುದನ್ನು ಸಿನಿಮಾ ಮಾಡಬೇಕು ಅಂತ ಹೊರಟಿದ್ದೆನೋ, ಅದೇ ನನ್ನ ಕಣ್ಮುಂದೆ ಬಂತು. ಹೀಗಾಗಿ ಮೊದಲು ಕತೆಯನ್ನು ಆಯ್ಕೆ ಮಾಡಿಕೊಂಡೆ. ನನ್ನದೇ ಆದರೀತಿಯಲ್ಲಿ ಸ್ಕ್ರೀನ್‌ಪ್ಲೇ ಬರೆದುಕೊಂಡಾಗ ಕತೆಗೆ ಮತ್ತೊಂದು ಆಯಾಮ ಸಿಕ್ಕಿತು. ಒಳ್ಳೆಯ ಸಿನಿಮಾ ಆಗಬಹುದೆಂದು 'ನಿರುತ್ತರ' ಸಿನಿಮಾ ಶುರು ಮಾಡಿದೆ. ನನ್ನ ನಿರೀಕ್ಷೆ ಹುಸಿಯಾಗಲಿಲ್ಲ.

** 'ನಿರುತ್ತರ' ಚಿತ್ರದ ಮೂಲಕ ಏನನ್ನು ಹೇಳೋಕೆ ಹೊರಟಿದ್ದೀರಿ?*

ಸಮಾಜಕ್ಕೆ ಅದ್ಭುತ ಸಂದೇಶ ಕೊಡುತ್ತಿದ್ದೇನೆ ಅನ್ನುವ ಭ್ರಮೆಯಂತೂ ನನಗಿಲ್ಲ. ನಾಲ್ಕು ವ್ಯಕ್ತಿಗಳ ನಡುವಿನ ಭಾವನಾತ್ಮಕ ಸಂಘರ್ಷ ಇಲ್ಲಿದೆ. ಅದನ್ನು ಬೇರೆ ರೀತಿಯಲ್ಲಿ ಪ್ರೆಸೆಂಟ್ ಮಾಡಲು ಹೊರಟಿದ್ದೇನೆ. ಈ ಭಾವಗಳು ಎಲ್ಲರದ್ದೂ ಆಗಿರಬಹುದು. ನಾವೆಲ್ಲರೂ ಒಂದಿಲ್ಲೊಂದು ಕಾರಣಕ್ಕಾಗಿ ಉತ್ತರ ಹುಡುಕಲು ಹೊರಡುತ್ತೇವೆ. ಆ ಉತ್ತರ ನಮಗೆ ಸಿಗುತ್ತದಾ ಅನ್ನುವ ಕತೆಯೇ ಸಿನಿಮಾ.

** ಈ ಚಿತ್ರ ಹಲವು ಪ್ರಥಮಗಳಿಗೆ ಸಾಕ್ಷಿಯಾಗುತ್ತಿದೆ. ರಸೂಲ್, ರಾಹುಲ್ ಮತ್ತು ನೀಲಾದ್ರಿ, ಅವರೇ ಯಾಕೆ ಬೇಕಿತ್ತು?*





ಆಗಲೇ ಹೇಳಿದಂತೆ ಇದೊಂದು ವಿಭಿನ್ನವಾದ ಚಿತ್ರ. ನಾನು ಚಿತ್ರಕತೆಯನ್ನು ಬರೆದುಕೊಂಡಾಗಲೇ, ಯಾರು ಏನು ಮಾಡಬೇಕು ಅಂತ ಬರೆದುಕೊಂಡಿದ್ದೆ. ಇದು ಸಂಗೀತ ಪ್ರಧಾನ ಸಿನಿಮಾ. ಹಿಂದೂಸ್ತಾನಿ ಸಂಗೀತಕ್ಕೂ ಸಿನಿಮಾಗೂ ಸಂಬಂಧವಿದೆ. ಹೀಗಾಗಿ ಸಂಗೀತ ನಿರ್ದೇಶಕರಾಗಿ ನೀಲಾದ್ರಿ ಕುಮಾರ್‌ರನ್ನು ಆಯ್ಕೆ ಮಾಡಿಕೊಂಡೆ. ಧ್ವನಿ ಸಂಯೋಜನೆಗೂ ಅಷ್ಟೇ ಪ್ರಾಮುಖ್ಯತೆ ಇದೆ. ಹೀಗಾಗಿ ಆಸ್ಕರ್ ಪ್ರಶಸ್ತಿ ವಿಜೇತ ರಸೂಲ್‌ರನ್ನು ಕೇಳಿಕೊಂಡೆ. ರಾಹುಲ್ ಬೋಸ್ ನನ್ನ ನೆಚ್ಚಿನ ನಟ ಕೂಡ. ಅವರೇ ಆ ಪಾತ್ರವನ್ನು ಮಾಡಬೇಕು ಅನ್ನುವುದು ನನ್ನ ಬಯಕೆ ಆಗಿತ್ತು.

** ಸಿನಿಮಾದ ಪ್ರಮುಖ ಹೈಲೆಟ್ ಅಂದರೆ ಯಾವುದು?*

ಎಲ್ಲವೂ ಪ್ರಮುಖ ಅಂಶಗಳೆ. ಸಂಗೀತ, ಸಿನಿಮಾಟೋಗ್ರಫಿ, ಪಾತ್ರಗಳು ಹೀಗೆ ಎಲ್ಲವೂ ಒಂದಕ್ಕೊಂದು ಬೆಸೆದುಕೊಂಡಿವೆ. ಹೀಗಾಗಿ ಇದೇ ಹೈಲೆಟ್ ಅಂತ ಹೇಳುವುದು ಕಷ್ಟ. ಪ್ರಧಾನವಾಗಿ ನಾಲ್ಕು ಪಾತ್ರಗಳು ಬರುತ್ತವೆ. ರಾಹುಲ್ ಬೋಸ್, ಐಂದ್ರಿತಾ ರೈ, ಭಾವನಾ, ಕಿರಣ್ ಶ್ರೀನಿವಾಸ್ ಆ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಸದ್ಯಕ್ಕೆ ಪಾತ್ರಗಳೇ ಮುಖ್ಯವಾದವುಗಳು ಅನ್ನಬಹುದು.

** ಈ ಚಿತ್ರಕ್ಕಾಗಿ ನಿಮ್ಮ ತಂದೆಯಿಂದ ಏನಾದರೂ ಸಲಹೆ ಪಡೆದಿದ್ದೀರಾ?*

ಖಂಡಿತಾ ಸಲಹೆ ಪಡೆದಿದ್ದೇನೆ. ಸ್ಕ್ರಿಪ್ಟ್ ಹಂತದಲ್ಲೇ ಅವರು ಸೂಚನೆಗಳನ್ನು ನೀಡುತ್ತಾ ಬಂದಿದ್ದಾರೆ. ಒಂದು ಕತೆಯನ್ನು ಅವರು ನೋಡುವ ರೀತಿ ಮತ್ತು ನಾನು ನೋಡುವ ರೀತಿ ಬದಲಾಗಿರುತ್ತದೆ. ಹೀಗಾಗಿ ಅವರ ಅನೇಕ ಸಲಹೆಗಳನ್ನು ಪಡೆದು ಸಿನಿಮಾದಲ್ಲಿ ಅಳವಡಿಸಿಕೊಂಡಿದ್ದೇನೆ.

** ನಟರಾಗಬೇಕು ಅಂತ ನಿಮಗೆ ಯಾವತ್ತೂ ಅನಿಸಲೇ ಇಲ್ಲವಾ?*

ಅನಿವಾರ್ಯಕ್ಕೆ ನಟನಾಗಿದ್ದೇನೆ. ಆದರೆ ಯಾವತ್ತೂ ನನಗೆ ಕ್ಯಾಮೆರಾ ಮುಂದೆ ನಿಲ್ಲಬೇಕು ಅಂತ ಅನಿಸಿಲ್ಲ. ನನ್ನ ಗುರಿ ಏನಿದ್ದರೂ ನಿರ್ದೇಶನದ ಕಡೆಗೆ. ಅಲ್ಲಿಯೇ ಮುಂದುವರೆಯುತ್ತೇನೆ. ಈ ಸಿನಿಮಾ ನನಗೊಂದು ಬ್ರೇಕ್ ನೀಡುತ್ತದೆ. ●

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 22 -06-2016 RNI No. KARKAN

ಸ್ಮೈಲ್ ಪ್ಲೀಸ್ ಅಂತಿದ್ದಾರೆ ಕಾವ್ಯ

'ಇಷ್ಟಕಾಮ್ಯ' ಚಿತ್ರದ ಯಶಸ್ಸಿನಲ್ಲಿ ತೇಲುತ್ತಿರುವ ಕಾವ್ಯ ಶೆಟ್ಟಿ ಈಗ ಮತ್ತೊಂದು ಚಿತ್ರವನ್ನು ಸದ್ದಿಲ್ಲದೇ ಕಂಪ್ಲೀಟ್ ಮಾಡಿದ್ದಾರೆ. 'ಸ್ಮೈಲ್ ಪ್ಲೀಸ್' ಹೆಸರಿನ ಸಿನಿಮಾ ಇದಾಗಿದ್ದು 'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ ಚಿತ್ರದ ಹೀರೋ.

ಈ ಚಿತ್ರದಲ್ಲಿ ಎರಡು ಮಹಿಳಾ ಪಾತ್ರಗಳಿದ್ದು ಅದರಲ್ಲಿ ಒಂದು ಪಾತ್ರವನ್ನು ಕಾವ್ಯ ನಿರ್ವಹಿಸಿದ್ದಾರೆ. ಮತ್ತೊಂದರಲ್ಲಿ ನೇಹಾ ಪಾಟೀಲ್ ಕಾಣಿಸಿಕೊಂಡಿದ್ದಾರೆ. ಕಾವ್ಯ ಇಲ್ಲಿ 21ನೇ ಶತಮಾನದ ಹುಡುಗಿಯಾಗಿ ನಟಿಸಿದ್ದಾರೆ. "ಈ ಕಾಲದ ಹುಡುಗಿ ಹೇಗೆ ಇರಬೇಕೋ ಹಾಗೆ ನನ್ನ ಪಾತ್ರವನ್ನು ರಚಿಸಲಾಗಿದೆ. ಹಾಗಾಗಿ ಚಿತ್ರವನ್ನು ವೀಕ್ಷಿಸುವ ಮಹಿಳೆಯರು ನನ್ನ ಪಾತ್ರವನ್ನು ಅವರ ಜೀವನದ ಜತೆಗೆ ಹೋಲಿಸಿ ನೋಡುತ್ತಾರೆ" ಎನ್ನುತ್ತಾರೆ ಕಾವ್ಯ. ಈಗಷ್ಟೇ ರಿಲೀಸ್ ಆಗಿರುವ 'ಇಷ್ಟಕಾಮ್ಯ' ಸಿನಿಮಾದ ಬಗ್ಗೆ ಸಾಕಷ್ಟು ಮೆಚ್ಚುಗೆಯ ಮಾತುಗಳು ಕೇಳಿಬಂದಿವೆ. ಹೀಗಾಗಿ 'ಸ್ಮೈಲ್ ಪ್ಲೀಸ್' ಚಿತ್ರ ಕೂಡ ಗೆಲ್ಲುತ್ತದೆ ಅನ್ನುವ ವಿಶ್ವಾಸ ಅವರದ್ದು. ಅಂದಹಾಗೆ ಈ ಸಿನಿಮಾವನ್ನು ರಘು ಸಮರ್ಥ ನಿರ್ದೇಶನ ಮಾಡಿದ್ದಾರೆ. ಕೆ.ಮಂಜು ನಿರ್ಮಾಣದಲ್ಲಿ ಸಿನಿಮಾ ತಯಾರಾಗಿದೆ.



ಸತ್ಯ ಒಪ್ಪಿಕೊಂಡ ದರ್ಶನ್



ಇದೇ ವಾರ ದರ್ಶನ್ ನಟನೆಯ 'ಜಗ್ಗುದಾದ' ಚಿತ್ರ ರಿಲೀಸ್ ಆಗುತ್ತಿದೆ. ಈ ಚಿತ್ರದ ಬಗ್ಗೆ ಈಗಾಗಲೇ ಮಿಶ್ರ ಪ್ರತಿಕ್ರಿಯೆ ಕೂಡ ವ್ಯಕ್ತವಾಗುತ್ತಿದೆ. ಈ ಹಿಂದೆ ದರ್ಶನ್ ಅಭಿನಯದ ಎರಡೂ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಸೋತ ಕಾರಣ 'ಜಗ್ಗುದಾದ' ಚಿತ್ರದ ಬಗ್ಗೆ ಅಷ್ಟೇನೂ ನಿರೀಕ್ಷೆ ಇಲ್ಲ. ಇದನ್ನು ಸ್ವತಃ ದರ್ಶನ್ ಒಪ್ಪಿಕೊಳ್ಳುತ್ತಾರೆ. ಹೀಗಾಗಿ ತಮ್ಮನ್ನು ತಾವೇ ಫ್ಲಾಪ್ ಹೀರೋ ಎಂದು ಕರೆದುಕೊಂಡಿದ್ದಾರೆ. ಆದರೆ 'ಜಗ್ಗುದಾದ' ಚಿತ್ರದ ಬಗ್ಗೆ ಅವರಿಗೆ ತುಂಬಾ ನಿರೀಕ್ಷೆ ಇದೆಯಂತೆ. "ಈ ಹಿಂದಿನ ಎರಡು ಚಿತ್ರಗಳು ಪ್ರೇಕ್ಷಕರಿಗೆ ನಿರಾಸೆ ಮಾಡಿರಬಹುದು. ಆದರೆ 'ಜಗ್ಗುದಾದ' ಯಾವುದೇ ಕಾರಣಕ್ಕೂ ಡಿಸ್‌ಅಪಾಯಿಂಟ್ ಮಾಡಲ್ಲ. ಸಖತ್ ಮನರಂಜನೆ ಕೊಡುವ ಸಿನಿಮಾವಿದು. ನೂರು ದಿನ ಓಡುತ್ತದೆ ಎಂದು ಹೇಳಲ್ಲ. ದಿನಗಳ ಮೇಲೆ ನನಗೆ ನಂಬಿಕೆಯೇ ಇಲ್ಲ. ವಾರದ ಕಲೆಕ್ಷನ್ ಎಷ್ಟು ಅನ್ನುವುದರ ಮೇಲೆ ಸಿನಿಮಾದ ಗೆಲುವು ನಿಂತಿದೆ" ಎಂದಿದ್ದಾರೆ ದರ್ಶನ್. ಚಿತ್ರದ ಗೆಲುವಿನ ಬಗ್ಗೆ ಈ ತಮ್ಮದೇ ಆದ ವ್ಯಾಖ್ಯಾನ ನೀಡುತ್ತಾರೆ.

'ಜಗ್ಗುದಾದ' ಸಿನಿಮಾದಲ್ಲಿ ಇವರದ್ದು ವಿಭಿನ್ನ ರೀತಿಯ ... ಭರ್ಜರಿ ಆಕ್ಷನ್ ಇದ್ದರೂ ಅಲ್ಲೊಂದು ಹೊಸ ರೀತಿಯ ಕತೆ ... ಹೀಗಾಗಿ ಅಭಿಮಾನಿಗಳಿಗೆ ಸಿನಿಮಾ ಇಷ್ಟವಾಗಲಿದೆ ಅಂದಿದ್ದಾ...

ಬದಲಾದ ಟಗರು




ಸೂರಿ ನಿರ್ದೇಶನದ ಮತ್ತೊಂದು ಸಿನಿಮಾದಲ್ಲಿ ಶಿವರಾಜ್‌ಕುಮಾರ್ ನಟಿಸುತ್ತಾರೆ ಅನ್ನುವ ಸುದ್ದಿ ಪಕ್ಕಾ ಆಗಿದೆ. ಈ ಜೋಡಿಯಲ್ಲಿ 'ಟಗರು' ಹೆಸರಿನ ಚಿತ್ರ ಮೂಡಿಬರಲಿದೆ. ಈ ಚಿತ್ರಕ್ಕಾಗಿ ಸೂರಿ ತಮ್ಮ ತಂಡವನ್ನು ಬದಲಾಯಿಸಿದ್ದಾರೆ. ಇವರ ಆಸ್ಥಾನ ತಂತ್ರಜ್ಞರಾಗಿದ್ದ ವಿ.ಹರಿಕೃಷ್ಣ ಮತ್ತು ಸತ್ಯ ಹೆಗಡೆಗೆ ಕೊಕ್ ಕೊಟ್ಟಿದ್ದಾರೆ. ಸೂರಿ ನಿರ್ದೇಶನದ ಚಿತ್ರವೆಂದರೆ ಅಲ್ಲಿ ಹರಿಕೃಷ್ಣರ ಸಂಗೀತ ಮತ್ತು ಸತ್ಯ ಹೆಗಡೆ ಅವರ ಸಿನಿಮಾಟೋಗ್ರಫಿ ಇರಲೇಬೇಕಿತ್ತು. ಈ ಸಲ ಹರಿಕೃಷ್ಣ ಜಾಗಕ್ಕೆ ಚರಣ್ ಮತ್ತು ಸತ್ಯರ ಪ್ಲೇ... ಮಹೇಂದ್ರ ಸಿಂಹ ತುಂಬಿದ್ದಾರೆ.

ಈ ಬದಲಾವಣೆಗೆ ಕಾರಣ ಏನು ಅಂತ ಸೂರಿ ಹೇಳಿ... ಗಾಂಧಿನಗರದಲ್ಲಿ ನಾನಾ ಗಾಸಿಪ್‌ಗಳು ಕೇಳಿಬರುತ್ತಿವೆ. ಹ... ಕೊಡಲು ಹರಿಕೃಷ್ಣ ಸಖತ್ ತಡಮಾಡುತ್ತಾರಂತೆ. ಸ... ಬಿಜಿ ಇದ್ದಾರಂತೆ. ಅಂದಹಾಗೆ ಈ ಸಿನಿಮಾ ಸೆಟ್ಟೇರ... ಎರಡು ತಿಂಗಳು ಬೇಕು. ಆಗಲೇ ಸಿನಿಮಾದ ಬಗ್ಗೆ ಕೂ... ಕ್ರಿಯೇಟ್ ಆಗಿದೆ. ಕಾರಣ ಶಿವರಾಜ್‌ಕುಮಾರ್ ಇಲ್ಲಿ ನಾನಾ ... ಕಾಣಿಸಿಕೊಳ್ಳಲಿದ್ದಾರೆ: ಅದಕ್ಕಾಗಿ ಅವರು ಈಗಿನಿಂದಲೇ ಸಿದ್ಧ... ಮಾಡಿಕೊಳ್ಳುತ್ತಿದ್ದಾರೆ.

ರಿಯಲ್ ಆರ್ಮಿ ಕ್ಯಾಂಪ್‌ನಲ್ಲಿ ಸುದೀಪ್

'ಕೋಟಿಗೊಬ್ಬ 2' ಸಿನಿಮಾದ ಶೂಟಿಂಗ್ ಕಂಪ್ಲೀಟ್ ಮಾಡಿರುವ ಸುದೀಪ್ ಸದ್ಯ 'ಹೆಬ್ಬುಲಿ' ಚಿತ್ರದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಈ ಸಿನಿಮಾದಲ್ಲಿ ಇವರದ್ದು ಆರ್ಮಿ ಕಮಾಂಡರ್ ಪಾತ್ರ. ಹೀಗಾಗಿ ಪಾತ್ರವು ನೈಜವಾಗಿ ಮೂಡಿಬರಲಿ ಅನ್ನುವ ಉದ್ದೇಶಕ್ಕೆ ಇವರ ದೃಶ್ಯಗಳನ್ನು ರಿಯಲ್ ಆರ್ಮಿ ಕ್ಯಾಂಪ್‌ನಲ್ಲಿ ಶೂಟಿಂಗ್ ಮಾಡುತ್ತಿದ್ದಾರೆ. ಅಲ್ಲದೇ ಕೆಲವು ಪಾತ್ರಗಳನ್ನೂ ನಿಜವಾದ ಮಿಲಿಟರಿ ಪರ್ಸನ್ಸ್ ನಿರ್ವಹಿಸಲಿದ್ದಾರೆ ಅನ್ನುವುದು ಮತ್ತೊಂದು ವಿಶೇಷ. ಈಗಾಗಲೇ ಹಲವು ಸಿನಿಮಾಗಳಲ್ಲಿ ರಿಯಲ್ ಆರ್ಮಿ ಕ್ಯಾಂಪ್‌ಗಳು ಬಳಕೆಯಾಗಿವೆ.

ಇದು ಎಸ್.ಕೃಷ್ಣ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಚಿತ್ರ. ಇದೇ ಮೊದಲ ಬಾರಿಗೆ ಕಿಚ್ಚ ಮಿಲಿಟರಿ ಆಫೀಸರ್ ಆಗಿ ಕಾಣಿಸಿಕೊಂಡಿದ್ದಾರೆ. ಇದೊಂದು ಸೋಷಿಯಲ್ ಅವೇರ್‌ನೆಸ್ ಮೂಡಿಸುವ ಚಿತ್ರವಾಗಿದ್ದರಿಂದ ಪಾತ್ರಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದಾರಂತೆ ಸುದೀಪ್. ಈ ಚಿತ್ರದಲ್ಲಿ ಹಲವು ವಿಶೇಷತೆಗಳಿವೆಯಂತೆ. ಸುದೀಪ್ ಅಣ್ಣನಾಗಿ ರವಿಚಂದ್ರನ್ ಕಾಣಿಸಿಕೊಳ್ಳುತ್ತಿದ್ದಾರೆ. ಜತೆಗೆ ಇಂಡಿಯಾ ಬಾರ್ಡರ್‌ನಲ್ಲಿ ಮಹತ್ವದ ಹಲವು ದೃಶ್ಯಗಳನ್ನು ಸೆರೆ ಹಿಡಿಯಲು ನಿರ್ದೇಶಕರು ಪ್ಲಾನ್ ಮಾಡಿದ್ದಾರೆ.



ತರಂಗಿ ಹುಡುಗರ ಹೊಸ ...

'ರಂಗಿತರಂಗ' ಚಿತ್ರ ಖ್ಯಾತಿಯ ಅನೂಪ್ ಭಂಡಾರಿ ಮತ್ತೊಂ... ಕೈಗೆತ್ತಿಕೊಂಡಿದ್ದಾರೆ. ಈ ಬಾರಿ ಅವರು ಪ್ರೇಮಕತೆಯನ್ನ... ಮಾಡಿಕೊಂಡಿದ್ದಾರೆ. ಸ್ಕ್ರಿಪ್ಟ್ ಕೆಲಸ ಮುಗಿದಿದ್ದು ಸದ್ಯ ಹೊಸ ಚಿತ್ರದ ... ಹಂತಲ್ಲಿ ಬಿಜಿ ಆಗಿದ್ದಾರೆ. 'ರಂಗಿತರಂಗ' ಸಿನಿಮಾದಲ್ಲಿ ಸಾಕ... ದೃಶ್ಯಗಳಿದ್ದವು. ಆದರೆ ಹೊಸ ಸಿನಿಮಾದಲ್ಲಿ ರೋಮ್ಯಾಂಟಿಕ್ ... ಹೆಚ್ಚಾಗಿ ಇರುವುದರಿಂದ ಸಂಗೀತಕ್ಕೆ ಹೆಚ್ಚು ಒತ್ತು ನೀಡಿದ್ದಾರಂತೆ ... ತಾವೇ ಸಂಗೀತ ನಿರ್ದೇಶನಕ್ಕೂ ಮುಂದಾಗಿದ್ದಾರೆ. ಈಗಾ... ಹಾಡುಗಳನ್ನು ಕಂಪೋಸ್ ಕೂಡ ಮಾಡಿದ್ದಾರೆ.

ನಿರ್ದೇಶನದಷ್ಟೇ ಸಂಗೀತದಲ್ಲೂ ಅನೂಪ್‌ಗೆ ಆಸಕ್ತಿ ... ಹೀಗಾಗಿ ತಮ್ಮ ಮೂರನೆಯ ಪ್ರಾಜೆಕ್ಟ್‌ಗೂ ಮ್ಯೂಸಿಕ್ ... ಮಾಡಿಟ್ಟಿದ್ದಾರಂತೆ. ಥ್ರಿಲ್ಲರ್ ಸಿನಿಮಾದ ಮೂಲ... ಗೆಲುವು ಸಾಧಿಸಿರುವ ಇವರು, ಇನ್ಮುಂದೆ ... ಲವ್‌ಸ್ಟೋರಿಗಳಿಗೆ ಪ್ರಾಧಾನ್ಯತೆ ನೀಡುತ್ತಾ... ಸಿನಿಮಾದ ಬಗ್ಗೆ ಹೆಚ್ಚಿನ ಮಾಹಿತಿ ಕೊ... ಮತ್ತೆ ಹೊಸ ತಂಡದ ಜತೆಗೆ ಇನ್ನೊ... ಸಿನಿಮಾ ಕೊಡುವ ಭರವಸೆ ನೀಡು...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com